ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 13 ಸೋಮವಾರ 2022

ಸಂಪುಟ: 43 | ಸಂಚಿಕೆ: 58 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಇಂದು ದಕ್ಷಿಣ ಪದವೀಧರ ಕ್ಷೇತ್ರದ ಪರಿಷತ್ ಚುನಾವಣೆ



ಮೈಸೂರು ನಗರಪಾಲಿಕೆ ಕಚೇರಿ ಆವರಣದಲ್ಲಿ ಮಸ್ಟರಿಂಗ್ ಪ್ರಕ್ರಿಯೆ ಜರುಗಿತು.

ಜಿಲ್ಲೆ	ಮತದಾರರು
ಮೈಸೂರು	58,262
ಮಂಡ್ಯ	47,302
ಹಾಸನ	24,250
ಚಾ.ನಗರ	12,147
ಒಟ್ಟು	1,41,961

ಕಣದಲ್ಲಿ 19 ಅಭ್ಯರ್ಥಿಗಳು

ಜೂ.15ಕ್ಕೆ ಮತ ಎಣಿಕೆ

ಮೈಸೂರು, ಜೂ.12(ಎಂಟಿವೈ)– ರಾಜ್ಯ ರಾಜಕೀಯದಲ್ಲಿ ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿರುವ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆ ನಾಳೆ(ಜೂ.13) ನಡೆಯಲಿದ್ದು, ಕಣದಲ್ಲಿರುವ ಪ್ರಮುಖ ಮೂರು ಪಕ್ಷಗಳ ಅಭ್ಯರ್ಥಿಗಳು ಸೇರಿದಂತೆ 19 ಮಂದಿ ಅಭ್ಯರ್ಥಿಗಳ ಭವಿಷ್ಯ ಬರೆಯಲು 1,41,961 ಮಂದಿ ಪದವೀಧರ ಮತದಾರರು ಮತ ಚಲಾಯಿಸಲಿದ್ದಾರೆ. ಕಾಂಗ್ರೆಸ್, ಜೆಡಿಎಸ್, ಬಿಜೆಪಿ, ಬಿಎಸ್ಪಿ ಹಾಗೂ ರೈತ ಸಂಘವು ದಕ್ಷಿಣ ಪದವೀಧರರ ಕ್ಷೇತ್ರವನ್ನು ಒಲಿಸಿಕೊಳ್ಳಲೇಬೇಕೆಂದು ಪಣ ತೊಟ್ಟಿದ್ದು, ಕಳೆದ ಆರು ತಿಂಗಳಿಂದ ಕ್ಷೇತ್ರ ವ್ಯಾಪ್ತಿಯ ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಜಿಲ್ಲೆಯಲ್ಲಿರುವ ಪದವೀಧರ ಮತದಾರರ ಓಲೈಸಿಕೊಳ್ಳಲು ತೀವ್ರ ಕಸರತ್ತು ನಡೆಸಿದ್ದು, ಸೋಮವಾರ ನಡೆಯುವ ಚುನಾವಣೆಯಲ್ಲಿ ಯಾವ ಅಭ್ಯರ್ಥಿಗೆ ಪದವೀಧರ ಮತದಾರರ ಬೆಂಬಲ ದೊರೆಯಲಿದೆ ಎಂದು ನಿರ್ಧಾರವಾಗಲಿದೆ. ಈ ಹಿಂದೆ ಜೆಡಿಎಸ್ ಅಥವಾ ಬಿಜೆಪಿ ಪ್ರತಿನಿಧಿಸುತ್ತಾ ಬಂದಿರುವ ದಕ್ಷಿಣ ಪದವೀಧರರ ಕ್ಷೇತ್ರವನ್ನು ಈ ಬಾರಿ ಕಾಂಗ್ರೆಸ್ ತನ್ನ ತೆಕ್ಕೆಗೆ ತೆಗೆದುಕೊಳ್ಳಬೇಕು ಎಂದು ಪಣ ತೊಟ್ಟಿದ್ದರೆ, ಕಳೆದ ಬಾರಿ ಅಲ್ಪ ಮತಗಳಿಂದ ಹಿನ್ನಡೆ ಅನುಭವಿಸಿದ್ದ ಬಿಜೆಪಿ ಈ ಬಾರಿ ಗೆಲ್ಲಲೇಬೇಕು ಎಂದು ಹವಣಿಸುತ್ತಿದೆ. ಇನ್ನು ಕಳೆದ ಬಾರಿ ಕೆ.ಟಿ.ಶ್ರೀಕಂಠೇಗೌಡರ ಮೂಲಕ ಕ್ಷೇತ್ರ ವಶಪಡಿಸಿಕೊಂಡಿದ್ದ ಜೆಡಿಎಸ್ ಈ ಬಾರಿಯೂ ಕ್ಷೇತ್ರ ಉಳಿಸಿಕೊಳ್ಳಬೇಕೆಂದು ಭಾರಿ ಕಸರತ್ತು ನಡೆಸಿದೆ. ಇದರೊಂದಿಗೆ ಬದಲಾವಣೆ ಸಂದೇಶದೊಂದಿಗೆ ಬಿಎಸ್ಪಿ, ರೈತಸಂಘ ಹಾಗೂ ಎಸ್‌ಡಿಪಿಐ ತನ್ನ ಅಭ್ಯರ್ಥಿಯನ್ನು ಚುನಾವಣಾ ಕಣಕ್ಕಿಳಿಸಿವೆ ಅಲ್ಲದೇ, ರಾಜಕೀಯ ಪಕ್ಷಗಳ ಅಭ್ಯರ್ಥಿಗೆ ಸಡ್ಡು ಹೊಡೆದು 10ಕ್ಕೂ ಹೆಚ್ಚು ಮಂದಿ ಪಕ್ಷೇತರರು ಕಣಕ್ಕಿಳಿಯುವ ಮೂಲಕ ತಮ್ಮ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ. ▶ 8ನೇ ಪುಟಕ್ಕೆ

ಮೈಸೂರಲ್ಲಿ ಜೂ.21ರ ಅಂತಾರಾಷ್ಟ್ರೀಯ ಯೋಗ ದಿನೋತ್ಸವದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಭೇಟಿ ಹಿನ್ನೆಲೆ

ಅರಮನೆ ಆವರಣದಲ್ಲಿ 16 ಸಾವಿರ ಯೋಗಪಟುಗಳಿಂದ ಪೂರ್ವಾಭ್ಯಾಸ ಯೋಗ ಪ್ರದರ್ಶನ



ಮೈಸೂರು, ಜೂ.12(ಆರ್‌ಕೆಬಿ)– ಮೈಸೂರು ಅರಮನೆ ಆವರಣದಲ್ಲಿ ಜೂ.21ರಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಸುವ ಅಂತಾರಾಷ್ಟ್ರೀಯ ಯೋಗ ದಿನೋತ್ಸವ ಕಾರ್ಯಕ್ರಮದ ಪೂರ್ವಾಭ್ಯಾಸ ಭಾನುವಾರ ಮುಂಜಾನೆ ನಡೆಯಿತು. ಶಾಲಾ–ಕಾಲೇಜು ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಸೇರಿದಂತೆ ಸುಮಾರು 16 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿ ಯೋಗ ಪ್ರದರ್ಶಿಸಿದರು.

ಜೂ.19ರಂದು ಅರಮನೆ ಆವರಣದಲ್ಲೇ ಅಂತಿಮ ಯೋಗ ಪೂರ್ವಾಭ್ಯಾಸ

ಸಾಮಾನ್ಯ ಯೋಗ ಶಿಷ್ಟಾಚಾರದ ಆಧಾರದ ಮೇಲೆ ನಡೆದ 2ನೇ ಅಧಿಕೃತ ಪೂರ್ವಾಭ್ಯಾಸದಲ್ಲಿ ಅರಮನೆ ಆವರಣ, ಅಕ್ಕಪಕ್ಕದ ಉದ್ಯಾನಗಳಲ್ಲಿ ಯೋಗಪಟುಗಳು ಭಾಗವಹಿಸಿದ್ದರು. ▶ 6ನೇ ಪುಟಕ್ಕೆ

ಗೂಗಲ್ ರಿಜಿಸ್ಟ್ರೇಷನ್ ಲಿಂಕ್ ಸ್ಥಗಿತ
ಯೋಗಪಟುಗಳ ನೋಂದಣಿಗೆ ಇಂದು ಆಯುಷ್ ಇಲಾಖೆ ಹೊಸ ಲಿಂಕ್ ಪ್ರಕಟ

ಮೈಸೂರು, ಜೂ.12(ಎಂಟಿವೈ)– ಮೈಸೂರು ಅರಮನೆಯ ಆವರಣದಲ್ಲಿ ಜೂ.21ರಂದು ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುವ ಅಂತಾರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿಚ್ಛಿಸುವವರ ನೋಂದಣಿಗಾಗಿ ತೆರೆಯಲಾಗಿದ್ದ ಗೂಗಲ್ ರಿಜಿಸ್ಟ್ರೇಷನ್ ಅನ್ನು ಎಸ್‌ಪಿಜಿ ಸೂಚನೆ ಮೇರೆಗೆ ಒಂದೇ ದಿನಕ್ಕೆ ಸ್ಥಗಿತಗೊಳಿಸಲಾಗಿದ್ದು, ಕೆಲವು ಮಾರ್ಪಾಡಿನೊಂದಿಗೆ ಆಯುಷ್ ಇಲಾಖೆ ಸೋಮವಾರ(ಜೂ.13) ಸಂಜೆ ವೇಳೆಗೆ ಹೊಸ ಲಿಂಕ್ ಅನ್ನು ಪ್ರಕಟಿಸಲಿದೆ. ▶ 6ನೇ ಪುಟಕ್ಕೆ

ಮುಂದಿನ ಭಾನುವಾರ (ಜೂ.19) ಮುಂಜಾನೆ ಅಂತಿಮ ಪೂರ್ವಾಭ್ಯಾಸಕ್ಕೆ ಅರಮನೆ ಆವರಣದ ಎಲ್ಲಾ ಗೇಟುಗಳನ್ನು ಬೆಳಗ್ಗೆ 5.30 ಗಂಟೆಗೆ ಬಂದ್ ಮಾಡಲಾಗುತ್ತದೆ. ಅಷ್ಟರೊಳಗೆ ಎಲ್ಲಾ ಯೋಗಪಟುಗಳು ಒಳಗಿರಬೇಕಾಗುತ್ತದೆ. ಬೆಳಗ್ಗೆ 6.30ಕ್ಕೆ ಸರಿಯಾಗಿ ಕಾರ್ಯಕ್ರಮ ಆರಂಭವಾಗಲಿದೆ. ಮೊದಲ 5 ನಿಮಿಷ ಮುಖ್ಯಮಂತ್ರಿ, ನಂತರದ 5 ನಿಮಿಷ ರಾಜ್ಯಪಾಲರಿಗೆ ಮಾತನಾಡಲು ಅವಕಾಶವಿರುತ್ತದೆ. ಮತ್ತೆ 5 ನಿಮಿಷ ಒಂದು ವೇಳೆ ಕೇಂದ್ರ ಆಯುಷ್ ಸಚಿವರು ಬಂದು ಭಾಗವಹಿಸಿದರೆ ಅವರಿಗೆ ಅವಕಾಶ ಇರುತ್ತದೆ. ನಂತರ ಪ್ರಧಾನಿ ಮೋದಿ 20 ನಿಮಿಷ ಮಾತನಾಡಲಿದ್ದಾರೆ. ಸರಿಯಾಗಿ 7 ಗಂಟೆಗೆ ಯೋಗ ಕಾರ್ಯಕ್ರಮ ಆರಂಭವಾಗಿ, 7.45ಕ್ಕೆ ಕಾರ್ಯಕ್ರಮ ಮುಕ್ತಾಯಗೊಳ್ಳಲಿದೆ. – ಪ್ರತಾಪ್‌ಸಿಂಹ, ಸಂಸದ

ಜೂ.27, ಆದಿಚುಂಚನಗಿರಿ ಶಾಖಾ ಮಠದಲ್ಲಿ ಕೆಂಪೇಗೌಡರ ಜಯಂತಿ ಆಚರಣೆ

ಪೂರ್ವಭಾವಿ ಸಭೆಯಲ್ಲಿ ರೂಪುರೇಷೆ ನಿರ್ಧಾರ



ಮೈಸೂರು, ಜೂ.12(ಎಂಕೆ)– ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದಲ್ಲಿ ಜೂ.27ರಂದು ನಡೆಯುವ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ ಅಂಗವಾಗಿ ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ನೇತೃತ್ವದಲ್ಲಿ ವಿವಿಧ ಸಮುದಾಯದ ಮುಖಂಡರೊಂದಿಗೆ ಪೂರ್ವಭಾವಿ ಸಭೆ ನಡೆಸಲಾಯಿತು.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಮಾತನಾಡಿ, ಕೊರೊನಾ ಸಂಕಷ್ಟ ಸಂದರ್ಭದಲ್ಲಿ ಮಹನೀಯರ ಜಯಂತಿಗಳನ್ನು ಆಚರಿಸಲು ಸಾಧ್ಯವಾಗಿರಲಿಲ್ಲ. ಈಗ ಕೊರೊನಾ ಕಡಿಮೆಯಾಗಿದ್ದು, ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆಗೆ ಮಠದ ಸಂಪೂರ್ಣ ಸಹಕಾರವಿದೆ ಎಂದು ಹೇಳಿದರು.

ಶಾಸಕ ಎಲ್.ನಾಗೇಂದ್ರ ಮಾತನಾಡಿ, ಎಲ್ಲಾ ಜಾತಿ ಸಮುದಾಯದವರ ಅನುಕೂಲಕ್ಕಾಗಿ ಪೇಟೆಗಳನ್ನು ನಿರ್ಮಾಣ ಮಾಡಿಸಿದ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಎಲ್ಲಾ ಜಾತಿ ಸಮುದಾಯದವರ ಸೇರಿಸಿಕೊಂಡು ಆಚರಣೆ ಮಾಡಿದರೆ ಕೆಂಪೇಗೌಡರ ಆಶಯಗಳ ನೆರವೇರಿಸಿದಂತಾಗುತ್ತದೆ ಎಂದು ಹೇಳಿದರು.

ಮಾಜಿ ಶಾಸಕ ವಾಸು ಮಾತನಾಡಿ, 2015ರಲ್ಲಿ ನಾಡಪ್ರಭುವಿನ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಗಿತ್ತು ಆಗ ನಾನು ಶಾಸಕನಾಗಿದ್ದೆ. ನಾನು ಒಂದಷ್ಟು ಶ್ರಮ ವಹಿಸಿ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೆ. ಎಲ್ಲರ ಸಹಕಾರದಿಂದ ಯಶಸ್ಸು ಕಂಡಿತ್ತು ಎಂದು ಸ್ಮರಿಸಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕಾಂಗ್ರೆಸ್ ಮುಖಂಡ ಹರೀಶ್‌ಗೌಡ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಚಾಮರಾಜ ಕ್ಷೇತ್ರ ಬಿಜೆಪಿ ಉಪಾಧ್ಯಕ್ಷ ಕುಮಾರ್‌ಗೌಡ, ಅರ್ಪಿತ ಪ್ರತಾಪ್ ಸಿಂಹ, ರಾಜ್ಯ ಒಕ್ಕಲಿಗರ ಸಂಘದ ಗಂಗಾಧರ್, ಮಂಜೇಗೌಡ, ಪಡುವಾರಹಳ್ಳಿ ಮರಿಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯಸಭೆಗೆ ಕನ್ನಡಿಗರನ್ನು ಬಿಟ್ಟು ಬೇರೆ ಭಾಷಿಕರ ಆಯ್ಕೆ ವಿರೋಧಿಸಿ ವಾಟಾಳ್ ಪ್ರತಿಭಟನೆ

ಮೈಸೂರು, ಜೂ.12(ಆರ್‌ಕೆಬಿ)– ರಾಜ್ಯಸಭೆಗೆ ಕರ್ನಾಟಕದಿಂದ ಬೇರೆ ಭಾಷೆಯವರನ್ನೇ ಆಯ್ಕೆ ಮಾಡಿರುವುದನ್ನು ವಿರೋಧಿಸಿ ಕನ್ನಡ ಚಳವಳಿ ನಾಯಕ, ಮಾಜಿ ಶಾಸಕ ವಾಟಾಳ್ ನಾಗರಾಜ್ ಭಾನುವಾರ ಮೈಸೂರಿನ ಜಯಚಾಮರಾಜ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ)ದಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ, ಪ್ರತಿಭಟನೆ ನಡೆಸಿದರು.



ಕರ್ನಾಟಕದಲ್ಲಿ ಪ್ರತಿಭಾವಂತರು, ಪ್ರಬುದ್ಧರು, ವಾಗ್ಮಿಗಳು ಹಾಗೂ ಮೇಧಾವಿಗಳಿದ್ದರೂ ಇವರನ್ನೆಲ್ಲಾ ಕಡೆಗಣಿಸಿ, ಬೇರೆ ರಾಜ್ಯದವರು, ಬೇರೆ ಭಾಷಿಕರನ್ನು ರಾಜ್ಯದಿಂದ ಆಯ್ಕೆ ಮಾಡುತ್ತಿರುವ ರಾಜಕೀಯ ಪಕ್ಷಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಬೆಂಬಲಿಗರಾದ ಪಾರ್ಥಸಾರಥಿ, ಅಜಯ್, ನಾರಾಯಣಸ್ವಾಮಿ ಉಪಸ್ಥಿತರಿದ್ದರು.



ಕೆಲಸಕ್ಕೆ ಹೋದ ಪತಿ ನಾಪತ್ತೆ

ಮೈಸೂರು,ಜೂ.12–ಕೆಲಸಕ್ಕೆಂದು ಹೋದ ಪತಿ ಗಿರೀಶ್ (32) ಕಾಣೆಯಾಗಿರುವ ಬಗ್ಗೆ ಅವರ ಪತ್ನಿ ಸಂಧ್ಯಾ ಸರಸ್ವತಿಪುರಂ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಮೇ 2ರಂದು ಬೆಳಗ್ಗೆ ಬೈಕ್‌ನಲ್ಲಿ ಕೆಲಸಕ್ಕೆ ಹೋಗಿ ಬರುವುದಾಗಿ ಹೊರ ಹೋದ ಪತಿ ಗಿರೀಶ್ ಮನೆಗೆ ವಾಪಸಾಗಿಲ್ಲ. ಅವರು ಕೆಲಸ ಮಾಡುತ್ತಿದ್ದ ಅಂಗಡಿ ಹಾಗೂ ಅವರ ಸ್ನೇಹಿತರನ್ನು ವಿಚಾರಿಸಿದರೂ ಅವರ ಬಗ್ಗೆ ಸುಳಿವು ಸಿಕ್ಕಿಲ್ಲ. ಹೀಗಾಗಿ ಅವರನ್ನು ಹುಡುಕಿಕೊಡುವಂತೆ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕವರು ಮೈಸೂರು ನಗರ ಪೊಲೀಸ್ ಕಂಟ್ರೋಲ್ ರೂಂ ದೂ: 082102418339 ಮೂಲಕ ತಿಳಿಸಲು ಕೋರಲಾಗಿದೆ.

ನಕಲಿ ದಾಖಲೆ ಸಲ್ಲಿಸಿ ಬ್ಯಾಂಕ್‌ನಿಂದ 38 ಲಕ್ಷ ಸಾಲ ಪಡೆದ ದಂಪತಿ

ಮೈಸೂರು, ಜೂ.12–ನಕಲಿ ದಾಖಲೆಗಳನ್ನು ಸಲ್ಲಿಸಿ ಬ್ಯಾಂಕ್‌ನಿಂದ 38 ಲಕ್ಷ ರೂ. ಸಾಲ ಪಡೆದ ಆರೋಪದ ಮೇರೆಗೆ ಮೈಸೂರಿನ ದಂಪತಿ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗಿದೆ. ಪಡುವಾರಹಳ್ಳಿ ನಿವಾಸಿಗಳಾದ ಸಿ.ಸುಂದರೇಶ್ ಮತ್ತು ಅವರ ಪತ್ನಿ ಶ್ರೀಮತಿ ಕಲಾ ಆರೋಪಕ್ಕೆ ಗುರಿಯಾಗಿರುವವರು.

ವಿವರ: ಈ ದಂಪತಿ ಮೈಸೂರಿನ ಸೌತ್ ಆಫ್ ಪಡುವಾರಹಳ್ಳಿ ನಿವೇಶನ ಸಂಖ್ಯೆ–24 ದಾಖಲಾತಿಯನ್ನು ನೀಡಿ ಚಾಮರಾಜ ಜೋಡಿ ರಸ್ತೆಯಲ್ಲಿರುವ ಎಂಸಿಡಿಸಿಸಿ ಬ್ಯಾಂಕ್ ಮಹಿಳಾ ಶಾಖೆಯಲ್ಲಿ 2021ರ ಏಪ್ರಿಲ್ 28ರಂದು 38 ಲಕ್ಷ ರೂ. ಸಾಲ ಪಡೆದಿದ್ದಾರೆ. ಈ ವೇಳೆ ಇವರು ನಿವೇಶನದ ಮೂಲ ದಾಖಲೆಗಳು ಹಾಗೂ ಉಪ ನೋಂದಣಾಧಿಕಾರಿಗಳ ಕಚೇರಿಯಿಂದ ಪಡೆದ ಇಸಿಗಳನ್ನು ಬ್ಯಾಂಕ್‌ಗೆ ನೀಡಿದ್ದಾರೆ.



ಇವರ ದಾಖಲೆಗಳನ್ನು ಪರಿಶೀಲಿಸಿದ್ದ ಬ್ಯಾಂಕ್‌ನ ವಕೀಲರೂ ಕೂಡ ಸದರಿ ಆಸ್ತಿ ಮೇಲೆ ಯಾವುದೇ ಋಣಭಾರವಿರುವುದಿಲ್ಲ ಹಾಗೂ ಆಸ್ತಿ ಮೇಲೆ ಈ ದಂಪತಿಗೆ ಸಂಪೂರ್ಣ ಹಕ್ಕು ಇದೆ ಎಂದು ವರದಿ ಸಲ್ಲಿಸಿದ್ದರು ಎಂದು ಬ್ಯಾಂಕ್ ಪ್ರಭಾರ ಶಾಖಾ ವ್ಯವಸ್ಥಾಪಕಿ ಶ್ರೀಮತಿ ಜೆ.ವಿ.ಸವಿತಾ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಸಾಲ ಪಡೆದ ದಂಪತಿ ಮರು ಪಾವತಿ ಮಾಡದ ಕಾರಣ ಕಾನೂನು ಕ್ರಮ ಕೈಗೊಂಡು ಸಾಲ ವಸೂಲಾತಿಗಾಗಿ ಮೈಸೂರು ದಕ್ಷಿಣ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನಿವೇಶನದ ಬಗ್ಗೆ ಪರಿಶೀಲಿಸಿದಾಗ ಅವು ನಕಲಿ ಎಂದು ಗೊತ್ತಾಗಿದೆ. ಆನಂತರ ಈ ಆಸ್ತಿ ಬಗ್ಗೆ ದಂಪತಿ ನೀಡಿದ್ದ ದಾಖಲೆಗಳ ಕುರಿತು ಮುಡಾ ಕಚೇರಿಯಲ್ಲಿ ಪರಿಶೀಲನೆ ನಡೆಸಿದಾಗ ನಿವೇಶನಕ್ಕೆ ಸಂಬಂಧಿಸಿದಂತೆ ದಂಪತಿ ನೀಡಿದ್ದ ಎಲ್ಲಾ ದಾಖಲೆಗಳೂ ನಕಲಿ ಎಂಬುದು ಗೊತ್ತಾಯಿತು ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್‌ಗೆ ವಂಚನೆ ಮಾಡಿರುವ ದಂಪತಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಬ್ಯಾಂಕ್‌ನ ಪ್ರಭಾರ ಶಾಖಾ ವ್ಯವಸ್ಥಾಪಕಿ ಸವಿತಾ ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಕೆ.ಆರ್.ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಮನೆ ಬೀಗ ಮುರಿದು ಚಿನ್ನಾಭರಣ, ನಗದು ಕಳವು

ಮೈಸೂರು, ಜೂ.12– ಮೈಸೂರು ವಿವಿ ನಿವೃತ್ತ ಉಪನ್ಯಾಸಕಿಯೊಬ್ಬರ ಮನೆ ಬೀಗ ಮುರಿದು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ಮೈಸೂರಿನ ವಾಣಿವಿಲಾಸ ರಸ್ತೆಯಿಂದ ವರದಿಯಾಗಿದೆ.

ಇಲ್ಲಿನ ನಿವಾಸಿ ಎಂ.ಎಸ್.ಪದ್ಮಾ ಅವರು ಜೂನ್ 7ರಂದು ಬೆಂಗಳೂರಿಗೆ ತೆರಳಿದ್ದು, ಆ ವೇಳೆ ಇವರ ಮನೆಯ ಬೀಗ ಮುರಿದಿರುವ ಬಗ್ಗೆ ಅವರ ಅಣ್ಣ ಜೂ.9ರಂದು ಬೆಳಗ್ಗೆ ಕರೆ ಮಾಡಿ ಅವರಿಗೆ ತಿಳಿಸಿದ್ದಾರೆ. ಬೆಂಗಳೂರಿನಿಂದ ಹಿಂತಿರುಗಿ ಬಂದು ನೋಡಿದಾಗ 60 ಗ್ರಾಂನ ಎರಡು ಜೊತೆ ಬಳೆ, 30 ಗ್ರಾಂನ ಕರಿಮಣಿ ಸರ, 30 ಗ್ರಾಂನ ಲಾಂಗ್ ನೆಕ್ಲೇಸ್, 50 ಗ್ರಾಂನ 2 ಎಳೆ ಚೈನ್, 29 ಗ್ರಾಂನ ಒಂದೆಳೆ ಚೈನ್ ಮತ್ತು ಮಾಂಗಲ್ಯ, 11 ಗ್ರಾಂನ ಓಲೆ, ಮಾಟಿ, 12 ಗ್ರಾಂನ 4 ಉಂಗುರ ಸೇರಿದಂತೆ ಒಟ್ಟು 222 ಗ್ರಾಂ ಚಿನ್ನಾಭರಣ ಹಾಗೂ 18 ಸಾವಿರ ರೂ. ನಗದು ಕಳವು ಮಾಡಲಾಗಿದೆ. ಈ ಸಂಬಂಧ ಕೆ.ಆರ್.ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅಡುಗೆಭಟ್ಟನ ಮೊಬೈಲ್ ಕಸಿದ ಖದೀಮರು

ಮೈಸೂರು, ಜೂ.12–ಹೋಟೆಲ್‌ವೊಂದರ ಅಡುಗೆ ಭಟ್ಟನ ಕೈಯಿಂದ ಮೊಬೈಲ್ ಕಸಿದ ಘಟನೆ ಮೈಸೂರಿನ ಕೃಷ್ಣವಿಲಾಸ್ ರಸ್ತೆಯಲ್ಲಿ ಮೇ 10ರಂದು ರಾತ್ರಿ ನಡೆದಿದೆ.

ಜಗನ್ಮೋಹನ ಪ್ಯಾಲೇಸ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ವೊಂದರ ನಾರ್ತ್ ಇಂಡಿಯನ್ ಅಡುಗೆ ಭಟ್ಟ, ಮೂಲತಃ ಪಶ್ಚಿಮ ಬಂಗಾಲದವನಾದ ರಬಿಯುಲ್ (27) ಎಂಬಾತ ಮೇ 10 ರಂದು ರಾತ್ರಿ 11 ಗಂಟೆ ಸುಮಾರಿನಲ್ಲಿ ಕೃಷ್ಣವಿಲಾಸ್ ರಸ್ತೆಯಲ್ಲಿ ಮೊಬೈಲ್‌ನಲ್ಲಿ ಮಾತನಾಡುತ್ತಾ ಹೋಗುತ್ತಿದ್ದಾಗ ಎದುರುಗಡೆಯಿಂದ ಬೈಕ್‌ನಲ್ಲಿ ಬಂದ ಇಬ್ಬರು ಅವರ ಮೊಬೈಲ್ ಕಸಿದು ಪರಾರಿಯಾಗಿದ್ದಾರೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ವಾಹನ ದಟ್ಟಣೆ

ಮಣಿಪಾಲ್ ಜಂಕ್ಷನ್‌ನಲ್ಲಿ ಸಂಚಾರ ನಿಯಂತ್ರಣಕ್ಕೆ ಪೊಲೀಸರ ಹರಸಾಹಸ





ಮೈಸೂರಿನ ಟೋಲ್‌ಗೇಟ್ ಬಳಿ ಸಿಗ್ನಲ್‌ನಲ್ಲಿ ಭಾನುವಾರ ಸಂಜೆ ನರಸಿಂಹರಾಜ ಸಂಚಾರ ಠಾಣೆ ಪೊಲೀಸರು ವಾಹನ ಸಂಚಾರ ನಿರ್ವಹಣೆ ಮಾಡುತ್ತಿರುವುದು.

ಮೈಸೂರು, ಜೂ.12(ಎಸ್‌ಬಿಡಿ)–ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿಂದು ವಾಹನ ದಟ್ಟಣೆ ಹೆಚ್ಚಾಗಿದ್ದರ ಪರಿಣಾಮ ನಗರದ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಸಂಚಾರ ನಿರ್ವಹಣೆಗೆ ಪೊಲೀಸರು ಹರಸಾಹಸಪಡಬೇಕಾಯಿತು.

ವಾರಾಂತ್ಯ ದಿನಗಳಲ್ಲಿ ವಾಹನ ದಟ್ಟಣೆ ಸಹಜ. ಆದರೆ ಇತ್ತೀಚೆಗೆ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುವ ಕಾರಣ ಕೆಲ ಸಂದರ್ಭದಲ್ಲಿ ವಾಹನಗಳು ಕಿಲೋಮೀಟರ್‌ಗಳಷ್ಟು ಸಾಲುಗಟ್ಟುವಂತಾಗಿದೆ. ಹಾಗೆಯೇ ಭಾನುವಾರ ಬೆಳಗ್ಗೆಯಿಂದ ಸಂಜೆವರೆಗೂ ವಾಹನಗಳ ಸಂಚಾರ ವಿಪರೀತವಾಗಿತ್ತು. ಮೈಸೂರು–ಬೆಂಗಳೂರು ಎರಡು ಮಾರ್ಗದಲ್ಲೂ ವಾಹನಗಳು ಹೆಚ್ಚಿದ್ದವು. ಪರಿಣಾಮ ಮಣಿಪಾಲ್ ಆಸ್ಪತ್ರೆ ಬಳಿ ರಿಂಗ್ ರೋಡ್ ಜಂಕ್ಷನ್‌ನಲ್ಲಿ ಸಂಚಾರ ನಿರ್ವಹಣೆಗೆ ಪೊಲೀಸರು ಹೆಣಗಾಡಬೇಕಾಯಿತು.

ಸ್ವಯಂಚಾಲಿತ ಸಿಗ್ನಲ್‌ನಿಂದ ನಿರ್ವಹಣೆ ಸಾಧ್ಯವಾಗದೆ ವಾಹನ ದಟ್ಟಣೆ ಗಮನಿಸಿ ತಾವೇ (ಮ್ಯಾನ್ಯುಯಲ್) ಸಿಗ್ನಲ್ ಚಾಲನೆ ಮಾಡುತ್ತಿದ್ದ ಪೊಲೀಸರು, ವಿದ್ಯುತ್ ಹಾಗೂ ತಾಂತ್ರಿಕ ಸಮಸ್ಯೆಯಿಂದ ಸಿಗ್ನಲ್ ಆಫ್ ಆದಾಗ ನಾಲ್ಕೈದು ಸಿಬ್ಬಂದಿ ರಸ್ತೆಗಿಳಿದು, ಸಂಚಾರ ನಿರ್ವಹಣೆ ಮಾಡಿದರು.

ಈ ವಾಹನ ದಟ್ಟಣೆ ನಡುವೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಿ ಮೋದಿ ಅವರು ಭಾಗಿಯಾಗುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿಗೆ ಆಗಮಿಸುವ ಗಣ್ಯರು, ಕೇಂದ್ರದ ಅಧಿಕಾರಿಗಳ ವಾಹನ ಸಂಚಾರಕ್ಕೆ ದಾರಿ ಮಾಡಿಕೊಡುವುದು ಪೊಲೀಸರಿಗೆ ಸವಾಲಾಗಿದೆ.

ಶುಕ್ರವಾರ ಹಾಗೂ ಶನಿವಾರ ಬೆಂಗಳೂರು ಕಡೆಯಿಂದ ಭಾನುವಾರ ಹಾಗೂ ಸೋಮವಾರ ಮೈಸೂರು ಕಡೆಯಿಂದ ಹೆಚ್ಚು ವಾಹನಗಳ ಸಂಚರಿಸುತ್ತವೆ. ಆದರೆ ಇಂದು ಎರಡೂ ಮಾರ್ಗದಿಂದಲು ಹೆಚ್ಚು ವಾಹನಗಳ ಸಂಚಾರವಿತ್ತು. ಪರಿಣಾಮ ಸಿಗ್ನಲ್‌ನ ನಾಲ್ಕು ಮಾರ್ಗದಲ್ಲೂ ಕಿಲೋಮೀಟರ್‌ಗಳಷ್ಟು ವಾಹನ ಸಾಲುಗಟ್ಟಿ ನಿಂತಿದ್ದವು. ದಶಪಥ ರಸ್ತೆ ಕಾಮಗಾರಿ ಪ್ರಗತಿಯಲ್ಲಿರುವ ಕಾರಣ ಬೆಂಗಳೂರು ಮಾರ್ಗದಲ್ಲಿ 2–3 ಕಿ.ಮೀ.ಗೂ ಹೆಚ್ಚು ದೂರ ವಾಹನಗಳು ಸಾಲುಗಟ್ಟಿದ್ದವು. ವರುಣಾ ನಾಲೆ ಸೇತುವೆವರೆಗೆ ವಿಸ್ತಾರವಾದ ರಸ್ತೆಯಿದ್ದು ನಂತರ ಕಿರಿದಾಗಿದೆ. ಇಲ್ಲಿಯವರೆಗೆ ವೇಗವಾಗಿ ಬರುವುದರಿಂದ ಸೇತುವೆ ಬಳಿ ವಾಹನದಟ್ಟಣೆ ಉಂಟಾಗುತ್ತದೆ. ಇಂದು ಬೆಳಗ್ಗೆಯಿಂದ ಸಂಜೆವರೆಗೂ ವಾಹನ ದಟ್ಟಣೆ ಹೆಚ್ಚಾಗಿತ್ತು, ನಂತರದಲ್ಲಿ ಸ್ವಲ್ಪ ಕಡಿಮೆಯಾಯಿತು ಎಂದು ಪೊಲೀಸರು ತಿಳಿಸಿದರು.



ಎಚ್ಚರ ತಪ್ಪಿದರೆ ಅಪಘಾತ: ರಿಂಗ್‌ರೋಡ್ ಜಂಕ್ಷನ್ ಸಿಗ್ನಲ್‌ನಲ್ಲಿ ಕೆಲ ಹೊತ್ತು ನಿಂತು ವಾಹನ ಸಂಚಾರ ಗಮನಿಸಿದರೆ ಭಯವಾಗುತ್ತದೆ. ಪಾದಚಾರಿಗಳಿಗಂತೂ ಇದು ಅಪಾಯಕಾರಿ ಸ್ಥಳ. ಸಿಗ್ನಲ್ ಗಮನಿಸಿ ನಿಧಾನವಾಗಿ ರಸ್ತೆ ದಾಟುವುದು ಒಳ್ಳೆಯದು. ವಾಹನ ದಟ್ಟಣೆ ಹೆಚ್ಚಾಗಿರುವ ಸಂದರ್ಭದಲ್ಲಿ ದ್ವಿಚಕ್ರ ವಾಹನ ಸವಾರರೂ ಎಚ್ಚರಿಕೆ ವಹಿಸಬೇಕು. ಲಾರಿ, ಟಿಪ್ಪರ್, ಟ್ರಕ್‌ಗಳು ಸೇರಿದಂತೆ ಭಾರೀ ವಾಹನಗಳು ರಿಂಗ್‌ರಸ್ತೆಗೆ ತಿರುವು ಪಡೆಯುತ್ತವೆ. ಸಿಗ್ನಲ್‌ಗೆ ತುಂಬಾ ಹೊತ್ತು ಕಾದವರು ಸಿಗ್ನಲ್ ಸಿಕ್ಕ ತಕ್ಷಣ ವೇಗವಾಗಿ ವಾಹನ ಚಾಲಿಸುತ್ತಾರೆ. ಯಾವ ವಾಹನಗಳು ಯಾವ ಕಡೆಗೆ ಹೋಗುತ್ತವೆ ಎನ್ನುವುದೇ ತಿಳಿಯದಂತಾಗುತ್ತದೆ. ಧಾವಂತದಲ್ಲಿ ನಿತ್ಯ ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತವೆ. ಅಪಘಾತ–ಅವಘಡದಿಂದ ಪಾರಾಗಬೇಕೆಂದರೆ ತುಂಬಾ ತುಂಬಾ ಎಚ್ಚರಿಕೆಯಿಂದ ವಾಹನ ಚಾಲಿಸಬೇಕು.

ಬಹುಭಾಷಾ ನಟಿ ಅನುಷ್ಕಾ ಶೆಟ್ಟಿ ಸಹೋದರನ ಹತ್ಯೆಗೆ ಸಂಚು

ಬೆಂಗಳೂರು: ದಿವಂಗತ ಮುತ್ತಪ್ಪ ರೈ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದ ಮನ್ಮಿತ್ ರೈ ಎಂಬಾತ ನಟಿ ಅನುಷ್ಕಾ ಶೆಟ್ಟಿ ಸಹೋದರ ಗುಣರಂಜನ್ ಶೆಟ್ಟಿ ಹತ್ಯೆಗೆ ಸಂಚು ರೂಪಿಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಇನ್ನೊಂದೆಡೆ ಜಯ ಕರ್ನಾಟಕ ಸಂಘಟನೆ ಕಾರ್ಯಕರ್ತರು ಗುಣರಂಜನ್ ಶೆಟ್ಟಿಗೆ ಮನ್ಮಿತ್ ರೈನಿಂದ ಜೀವ ಬೆದರಿಕೆಯಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಭೇಟಿಯಾಗಿ ಭದ್ರತೆ ನೀಡುವಂತೆ ಮನವಿ ಮಾಡಿದ್ದಾರೆ. ಒಂದು ಕಾಲದಲ್ಲಿ ಮುತ್ತಪ್ಪ ರೈ ಆಪ್ತವಲಯದಲ್ಲಿಯೇ ಗುರುತಿಸಿಕೊಂಡಿದ್ದ ಗುಣರಂಜನ್ ಶೆಟ್ಟಿ ಹಾಗೂ ಮನ್ಮಿತ್ ರೈ ನಡುವೆ ಗಲಾಟೆಯಾಗಿದೆ ಎನ್ನಲಾಗುತ್ತಿದೆ.

ಗುಣರಂಜನ್ ಶೆಟ್ಟಿ ಹತ್ಯೆಗೆ ಸಂಚಿನ ವದಂತಿ ಬೆನ್ನಲ್ಲೇ ಬಂಟ್ವಾಳದ ಮುತ್ತಪ್ಪ ರೈ ಆಪ್ತ ರಾಕೇಶ್ ಮಲ್ಲಿಯನ್ನು ಮಂಗಳೂರು ಪೊಲೀಸರು ಕರೆಸಿ ವಿಚಾರಣೆ ನಡೆಸಿದ್ದಾರೆ. ರಾಕೇಶ್ ಮಲ್ಲಿ ಹಾಗೂ ಮನ್ಮಿತ್ ಆಪ್ತರಾಗಿದ್ದಾರೆ. ಮುತ್ತಪ್ಪ ರೈ ಬದುಕಿದ್ದಾಗ ಅನ್ಯೋನ್ಯವಾಗಿದ್ದ ರಾಕೇಶ್ ಮಲ್ಲಿ, ಮನ್ಮಿತ್ ಹಾಗೂ ಗುಣರಂಜನ್ ಶೆಟ್ಟಿ, ರೈ ಸಾವಿನ ನಂತರ ದೂರವಾಗಿದ್ದರು. ಗುಣರಂಜನ್ ಶೆಟ್ಟಿ ಜಯ ಕರ್ನಾಟಕ ಸಂಘಟನೆಯಿಂದ ಹೊರಬಂದು ಜಯ ಕರ್ನಾಟಕ ಜನಪರ ವೇದಿಕೆ ಸ್ಥಾಪಿಸಿದ್ದರು. ಅಲ್ಲದೇ, ಮಂಗಳೂರು ಹಾಗೂ ಬೆಂಗಳೂರಿನಲ್ಲಿ ಸಾಕಷ್ಟು ಹೆಸರು ಮಾಡಿದ್ದಾರೆ. ಇದೇ ಕಾರಣಕ್ಕೆ ಗುಣರಂಜನ್ ಶೆಟ್ಟಿ ಕೊಲೆಗೆ ಸಂಚು ರೂಪಿಸಲಾಗಿದೆ ಎಂಬ ಮಾಹಿತಿ ಹರಿದಾಡುತ್ತಿದೆ. ಆದರೆ, ತನ್ನ ವಿರುದ್ಧದ ಆರೋಪಗಳನ್ನು ನಿರಾಕರಿಸಿರುವ ಮನ್ಮಿತ್ ರೈ, ತಾನು ವಿದೇಶದಲ್ಲಿರುವುದಾಗಿ ತಿಳಿಸಿದ್ದಾರೆ. ಈ ಎಲ್ಲಾ ಹೇಳಿಕೆಗಳನ್ನು ಪೊಲೀಸರು ಗಮನಿಸುತ್ತಿದ್ದು, ತನಿಖೆಯಿಂದ ಮಾತ್ರ ಸತ್ಯಾಂಶ ತಿಳಿದುಬರಲಿದೆ.

ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು

ಮೈಸೂರು,ಜೂ 12– ಮೈಸೂರಿನ ಪರಿವರ್ತನ ಹಿಂದುಳಿದ ವರ್ಗಗಳ ಗ್ರಾಮೀಣ ಅಭಿವೃದ್ಧಿ ವಿವಿಧೋದ್ದೇಶ ಸಂಘದ ಚೌಡೇಶ್ವರಿ ಅಂಧ ಮಕ್ಕಳ ವಸತಿ ಶಾಲೆಯಲ್ಲಿ 1ರಿಂದ 7ನೇ ತರಗತಿಯ ದಾಖಲಾತಿ ಪ್ರಾರಂಭವಾಗಿದ್ದು, ಗ್ರಾಮೀಣ ಮತ್ತು ಹಿಂದುಳಿದ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡಲಾಗುವುದು. ಶಾಲೆಯಲ್ಲಿ ವಿದ್ಯಾಭ್ಯಾಸ ಹಾಗೂ ಊಟ, ವಸತಿ, ವೈದ್ಯಕೀಯ ನೆರವು, ಕಂಪ್ಯೂಟರ್ ಶಿಕ್ಷಣ ಮತ್ತು ಇನ್ನಿತರ ಸೌಲಭ್ಯಗಳನ್ನು ಒದಗಿಸಲಾಗುವುದು. ಆಸಕ್ತರು ಮೊ.ಸಂ.8217401558, 9448338237 ಸಂಪರ್ಕಿಸಿ.



ಮೈಸೂರು ಜಿಲ್ಲೆಯ ವರುಣಾ ಕ್ಷೇತ್ರದ ಕೂಡನಹಳ್ಳಿಯಲ್ಲಿ ಶ್ರೀ ಭಗೀರಥ ಜಯಂತಿ ಆಚರಿಸಲಾಯಿತು. ಈ ವೇಳೆ ಜಿಲ್ಲಾ ಭಗೀರಥ ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಎಸ್.ಯೋಗೀಶ ಉಪ್ಪಾರ, ಡಿ.ದೇವರಾಜ ಅರಸು ಹಿಂದುಳಿದ ವರ್ಗದ ಅಧ್ಯಕ್ಷ ಚಿನ್ನು ಕೃಷ್ಣ, ಮುಖಂಡರಾದ ಪಾಂಡುರಂಗ, ಕುಮಾರ್, ಕೆಂಡಗಣ್ಣ ಬಸವಶೆಟ್ಟಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಮಬ್ಬುಗತ್ತಲಲ್ಲಿ ಬದುಕುತ್ತಿರುವ ಭಾವರಹಿತ ಜಗತ್ತು

● ಪತ್ರಕರ್ತ ಕೆ.ಕೃಷ್ಣಮೂರ್ತಿ ಹೆಬ್ಬಾರ್ ಕರ್ಕಿ ಅಭಿಮತ ● ಪುತಿನ ಅವರ ಶ್ರೀಹರಚರಿತೆ ಕುರಿತ ಅವಲೋಕನ ಕೃತಿ 'ರಸಹರ್ಷ ವರ್ಷ' ಕೃತಿ ಬಿಡುಗಡೆ



ಮೈಸೂರಿನ ನಮನಕಲಾ ಮಂಟಪದಲ್ಲಿ ಪ್ರೊ.ಕೆ.ಎಲ್.ಪದ್ಮಿನಿ ಹೆಗಡೆ ಅವರ 'ರಸಹರ್ಷ ವರ್ಷ' ಕೃತಿ ಬಿಡುಗಡೆ ಮಾಡಲಾಯಿತು.

ಮೈಸೂರು,ಜೂ.12(ಪಿಎಂ)–ಭಾವವೆಂಬ ರಸದಿಂದ ಅದ್ಭುತ ಕಾವ್ಯ ಹುಟ್ಟಲಿದೆ. ಆದರೆ ಇಂದಿನ ಜಗತ್ತು ಭಾವರಹಿತವಾಗಿ ಮಬ್ಬುಗತ್ತಲಲ್ಲಿ ಕಣ್ಣಿದ್ದೂ ಕುರುಡನಂತೆ ಬದುಕುತ್ತಿದೆ ಎಂದು ಉತ್ತರ ಕನ್ನಡ ಜಿಲ್ಲೆ ಹೊನ್ನಾವರದ ಪತ್ರಕರ್ತ ಕೆ.ಕೃಷ್ಣಮೂರ್ತಿ ಹೆಬ್ಬಾರ್ ಕರ್ಕಿ ಅಭಿಪ್ರಾಯಪಟ್ಟರು.

ಮೈಸೂರಿನ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಕಾವ್ಯ ರಂಜನೀ ಸಭಾ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪ್ರೊ.ಕೆ.ಎಲ್. ಪದ್ಮಿನಿ ಹೆಗಡೆ ಅವರ 'ರಸಹರ್ಷ ವರ್ಷ (ಪುತಿನ ಅವರ ಶ್ರೀಹರಚರಿತೆ–ಒಂದು ಅವಲೋಕನ)' ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕಾವ್ಯದಲ್ಲಿ ರಸವೇ ಇಲ್ಲದ ಕ್ಷಣಗಳಲ್ಲಿ ನಾವಿದ್ದೇವೆ. ಭಾವನೆಗಳೇ ಇಲ್ಲದೆ ಹೋದರೆ ರಸ ಉತ್ಪತ್ತಿ ಹೇಗೆ ಸಾಧ್ಯ? ಮುಳ್ಳನ್ನೂ ಅಪ್ಪಿ, ಬಳ್ಳಿ ಹಬ್ಬುತ್ತದೆ. ಆದರೆ ನಾವು ಯಾರನ್ನೂ ಅಪ್ಪುವುದಿಲ್ಲ. ಅಪ್ಪುಗೆ ಇಲ್ಲದೆ ಹಬ್ಬುವುದಾದರೂ ಹೇಗೆ? ಎಂದು ಪ್ರಶ್ನಿಸಿದರು.

ಭಾವರಹಿತವಾದ ಕಾಂಕ್ರೀಟ್ ಕಾಡಿನಲ್ಲಿ ಪ್ರಕೃತಿಯನ್ನೇ ನೋಡದೇ ಯಾರಿಗೂ ಹಬ್ಬದೇ ತಬ್ಬದೇ ನಮ್ಮದೇ ಮಬ್ಬುಗತ್ತಲಲ್ಲಿ ಕಣ್ಣಿದ್ದೂ ಕುರುಡರಂತೆ ಬದುಕುವ ಜಗತ್ತು ಇಂದಿನದ್ದಾಗಿದೆ. ಹಿಂದೆ ಮನೆ ಮನೆಗಳಲ್ಲಿ ರಾಮಾಯಣ ಸೇರಿದಂತೆ ಎಲ್ಲಾ ಕಾವ್ಯಗಳ ವಾಚನ ಇರುತ್ತಿತ್ತು. ಹಾಗಾಗಿ ಅಲ್ಲಿ ರಸ ಉತ್ಪತ್ತಿಯಾಗುತ್ತಿತ್ತು. ಆ ಮೂಲಕ ಅವರ ಬದುಕು ಹಸನಾಗುತ್ತಿತ್ತು. ಆದರೆ ಇಂದು ಅಂತಹ ವಾತಾವರಣ ಬಹುತೇಕ ಇಲ್ಲವಾಗಿದೆ ಎಂದು ವಿಷಾದಿಸಿದರು.


ಕಾವ್ಯದಲ್ಲಿ ರಸ ಕಡಿಮೆಯಾಗುತ್ತಿದೆಯೋ ಅಥವಾ ರಸಾನುಭವದ ದೃಷ್ಟಿ ಕಡಿಮೆಯಾಗುತ್ತಿದೆಯೋ ಎಂಬ ಗೊಂದಲದ ಸನ್ನಿವೇಶದಲ್ಲೂ ನಾವಿದ್ದೇವೆ. ಕೆಲ ಕವಿಗಳಿಗೆ ಅವರ ಕಾವ್ಯದಲ್ಲಿ ಮಾತ್ರವೇ ರಸ ಗೊತ್ತಾಗುತ್ತದೆಯೇ ಹೊರತು ಬೇರೆಯವರ ಕವಿತೆಗಳಲ್ಲಿ ಅವರಿಗೆ ರಸವೇ ಕಾಣಿಸುವುದಿಲ್ಲ ಎಂದರು. ಇಂದು ದಾರಿಗಳು ಹೆಚ್ಚಾಗಿವೆ. ಆದರೆ ಗುರಿಯೇ ಇಲ್ಲವಾಗಿದೆ. ನಾವು ಹುಟ್ಟಿದ್ದೇವೆ, ನಮಗೆ ಸಾವು ನಿಶ್ಚಿತ. ಈ ನಡುವೆ ನಮ್ಮ ಬದುಕಿನ ಉದ್ದೇಶ ನಿಸ್ವಾರ್ಥವಾಗಬೇಕು. ನಾವೆಲ್ಲರೂ ಎಲ್ಲರ ನೋವು ಅರ್ಥ ಮಾಡಿ ಕೊಳ್ಳುವಂತಹ ಮನುಷ್ಯರಾಗಬೇಕು. ಆಗ ಮಾತ್ರ ನಮ್ಮ ಬದುಕಿನಲ್ಲಿ ರಸ ಇರಲಿದೆ ಎಂದು ತಿಳಿಸಿದರು. ನಿವೃತ್ತ ಪ್ರಾಧ್ಯಾಪಕ ಪ್ರೊ. ರಾಘವೇಂದ್ರ ಭಟ್ಟ, ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿ ಡಾ.ಮಲ್ಲಪ್ಪ ಬಸವರಾಜ್, ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ ಡಾ.ಕೆ.ಎಲ್.ಪ್ರಸನ್ನಾಕ್ಷಿ, ರಸರಾಮಾಯಣ ಲೇಖಕ ಗಜಾನನ ಈಶ್ವರ ಹೆಗಡೆ, ಕೃತಿ ಕರ್ತೃ ಪ್ರೊ. ಕೆ.ಎಲ್.ಪದ್ಮಿನಿ ಹೆಗಡೆ, ಮೈಸೂರು ಜಿಲ್ಲಾ ಗಮಕ ಕಲಾ ಪರಿಷತ್‌ನ ಕಾರ್ಯದರ್ಶಿ ಕೃಪ ಮಂಜುನಾಥ್, ಖಜಾಂಚಿ ಪ್ರಭಾಕರ್, ಸಭಾದ ಕಾರ್ಯಕರ್ತ ಕೈ.ರಾಮಚಂದ್ರ ಮತ್ತಿತರರು ಹಾಜರಿದ್ದರು.

ಆರೋಗ್ಯ, ವೈದ್ಯಕೀಯ ಇಲಾಖಾ ನೌಕರರ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ

ಮೈಸೂರು, ಜೂ. 12– ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಇಲಾಖಾ ನೌಕರರ ಸಂಘ, ಮೈಸೂರು ಜಿಲ್ಲಾ ಶಾಖೆಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಅಧ್ಯಕ್ಷರಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಫಾರ್ಮಸಿ ಅಧಿಕಾರಿ ಹೆಚ್.ಎನ್. ಉಮೇಶ್‌ಬಾಬು, ಪ್ರಧಾನ ಕಾರ್ಯದರ್ಶಿಯಾಗಿ ಡಿ.ವಿ.ಬಿಡಿಸಿಓ ಕಚೇರಿ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಚಿಕ್ಕಣ್ಣ, ಖಜಾಂಚಿಯಾಗಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಹಿರಿಯ ಶುಶ್ರೂಷಕ ಅಧಿಕಾರಿ ಹೇಮಲತಾ, ಗೌರವಾಧ್ಯಕ್ಷರಾಗಿ ಜಿಲ್ಲಾ ಆರೋಗ್ಯ ಮೇಲ್ವಿಚಾರಣಾಧಿಕಾರಿ ಎಸ್.ಪಿ.ರಾಜೇಂದ್ರಪ್ಪ, ಉಪಾಧ್ಯಕ್ಷರಾಗಿ ಮೇಟಗಳ್ಳಿ ಜಿಲ್ಲಾ ಆಸ್ಪತ್ರೆಯ ವಿಕಿರಣ ಚಿತ್ರಣ ಅಧಿಕಾರಿ ಪುಟ್ಟರಾಜ್, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿಯ ಡಿ ಗ್ರೂಪ್ ನೌಕರ ಕೆಂಪರಾಜ್ ಆಯ್ಕೆಯಾಗಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.06.2022 ಸೋಮವಾರ, ಮಳೆ ನಕ್ಷತ್ರ : ಮೃಗಶಿರ 08.06.2022 ರಿಂದ 21.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ
ತಿಥಿ: ತ್ರಯೋದಶಿ, ನಕ್ಷತ್ರ : ವಿಶಾಖ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ, ದೀಪಾ ಪ್ರೌಢಶಾಲೆ :** ಪ್ರೌಢಶಾಲೆ ವಿದ್ಯಾರ್ಥಿ ಸಂಘದ ಉದ್ಘಾಟನೆ: ಉದ್ಘಾಟನೆ: ಮೈಸೂರು ತಾಲೂಕು ಸಮಾಜ ಕಲ್ಯಾಣ ಇಲಾಖೆ, ಸಹಾಯಕ ನಿರ್ದೇಶಕ ಕೆ. ಸಿದ್ದಲಿಂಗ, ಅಧ್ಯಕ್ಷತೆ: ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆಯ ಅಧ್ಯಕ್ಷ ಎಂ. ರಾಮಪ್ಪ, ಬೆಳಗ್ಗೆ 10.30 ಗಂಟೆಗೆ, ಸ್ಥಳ: ದೀಪಾ ಶಾಲೆಯ ವಿವೇಕಾನಂದ ಸಭಾಂಗಣ, ರೂಪಾನಗರ.

■ **ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಎನ್‌ಐಇ):** ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ ಆನ್‌ಲೈನ್ ಮೂಲಕ ಅಣಕು ಸಿಇಟಿ ಪರೀಕ್ಷೆ, ವಿಶೇಷ ಉಪನ್ಯಾಸ: ಎನ್‌ಐಇನ ರಸಾಯನಶಾಸ್ತ್ರ ವಿಭಾಗದ ಡಾ. ನಿತಿನ್ ಕೆ.ಎಸ್, ಪರೀಕ್ಷೆ ಬರೆಯುವವರು www.nic.ac.in ಲಾಗಿನ್ ಮಾಡಿಕೊಳ್ಳಬೇಕು.

■ **ದಿ ಇಂಡಸ್ಟ್ರಿಯಲ್ ಟ್ರೈನಿಂಗ್ ಅಂಡ್ ಎಂಪ್ಲಾಯ್‌ಮೆಂಟ್ ಡಿಪಾರ್ಟ್‌ಮೆಂಟ್ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಐಟಿಐ ಪಾಸಾದ ಮತ್ತು ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಅಪ್ರೆಂಟಿಸ್ ಮೇಳ, ಕಾವೇರಿ ಸಭಾಂಗಣ, ಮುಕ್ತ ವಿವಿ ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಉತ್ಸವ:** ಥೀಮ್ ಬೇಸ್ಡ್ ಲೈಫ್ ಸ್ಟೈಲ್ ಮತ್ತು ಗ್ರಾಹಕರ ಮೇಳ, ಸ್ಪೇಸ್ ಟೂರ್ ಮತ್ತು ರೊಬಾಟಿಕ್ ಅನಿಮಲ್ ಕಿಂಗ್‌ಡಂ, ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನ ಪಕ್ಕ, ಬೆಳಗ್ಗೆ 11ರಿಂದ ರಾತ್ರಿ 10.

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಬೇಸಿಗೆ ಮೇಳ–2022 ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆಯವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ–ಮಾಲಿಕೆ, ಲೇಖನ ಪ್ರಸ್ತುತಿ– ಡಾ.ಎ.ಎಸ್. ಚಂದ್ರಶೇಖರ್, 6.35 ಹಾಗೂ 5ಕ್ಕೆ ಶತಮಾನದ ಸ್ಮರಣೆಗಳು: ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು: ಲೇಖನ ಪ್ರಸ್ತುತಿ:ಎನ್. ಶ್ರೀಪಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ:– ಸದಾಶಿವ ಪಾಟೀಲ್, ವ್ಯಾಖ್ಯಾನ–ಶಾಂತಲಾವಟ್ಟಂ, 7.45 ನಿತ್ಯ ವಿಜ್ಞಾನ: ಪ್ರಾಯೋಜಿತ ಕಾರ್ಯಕ್ರಮ, 9.05 ಯಕ್ಷ ಸಂಪದ: ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಿತ ಕಾರ್ಯಕ್ರಮ ನಿರ್ಮಾಣ–ದಿವಾಕರ ಹೆಗಡೆ, 9.35 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ: 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ: ಎಸ್.ಸುಬ್ರಹ್ಮಣ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.15 ಯೋಗದತ್ತ ಜಗತ್ತು ವಿಶೇಷ ಸರಣಿ. **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ಭಕ್ತಿಗೀತೆಗಳು–ಡಾ.ಎಂ.ಬಾಲಮುರಳೀಕೃಷ್ಣ, ರಾಜು ಅನಂತಸ್ವಾಮಿ, 12.45 ನಮ್ಮ ಆರೋಗ್ಯ: ಆಕ್ಯುಪೇಷನಲ್ ಲಂಗ್ ಡಿಸೀಸ್ ಕುರಿತು ಡಾ. ಶ್ರೀಹರ್ಷವರ್ಧನ, ಎಸ್.ವಿ. ಅವರೊಂದಿಗೆ ಮಾತುಕತೆ, 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ 'ಯೋಗ ಸುಯೋಗ' ಬಾನುಲಿ ಸರಣಿ, 3.00 ಎನ್.ಚೊಕ್ಕಮ್ಮ–ವೀಣಾವಾದನ ಹಾಗೂ ಹಾಡುಗಾರಿಕೆ, 4.00 ಮಹಿಳಾರಂಗ: ಡಾಕ್ಟರ್ ಸಮಯ–ಮಹಿಳೆಯರ ಸಾಮಾನ್ಯ ಆರೋಗ್ಯ ಸಮಸ್ಯೆಗಳು ಕುರಿತ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಡಾ. ಸವಿತಾ ರಾಥೋಡ್ ನಾಯಕ್, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, ಕವಿ: ಸುರೇಖಾ ಭೀಮಕುಳಿ, ಸಂಗೀತ– ಗೀತಾ, ಭಾಗವಹಿಸುವವರು ಬೆಂಗಳೂರು ಬನಶಂಕರಿಯ ಲಿಟಲ್ ಫ್ಲವರ್ ಪಬ್ಲಿಕ್ ಶಾಲೆಯ ಮಕ್ಕಳು, 6.50 ಕೃಷಿರಂಗ 'ಕಿಸಾನ್ ವಾಣಿ' ತೋಟಗಾರಿಕೆ ಬೆಳೆಗಳಲ್ಲಿ ನೈಸರ್ಗಿಕ ಕೃಷಿ ಅನುಭವ ಕುರಿತು ವರದರಜು ಅವರೊಡನೆ ಸಂದರ್ಶನ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆ ವಿಶೇಷ ಕಾರ್ಯಕ್ರಮ, 10.05 ರಾಷ್ಟ್ರಪತಿಗಳ ಬೆಂಗಳೂರು ಭೇಟಿ ಕುರಿತ ಬಾನುಲಿ ವರದಿ.

■ **ಶ್ರೀ ಶ್ರೀನಿವಾಸ ಸ್ವಾಮಿ ದೇವಸ್ಥಾನ :** ವಾರ್ಷಿಕೋತ್ಸವ, ಶ್ರೀ ಪದ್ಮಾವತಿ ಅಮ್ಮನವರ ವರ್ಧಂತಿ, ಪುಷ್ಪಾ ಪಲ್ಲಕ್ಕಿ ಉತ್ಸವ, ದೇವಸ್ಥಾನ ಆವರಣ, ತಿಲಕ್‌ನಗರ, ಸಂಜೆ 6 ಗಂಟೆಗೆ.

■ **ರಂಗಾಯಣ, ಮೈಸೂರು :** 'ಸಂಸ್ಕೃತ ನಾಟಕಗಳು–ರಂಗಭೂಮಿ' ವಿಷಯ ಕುರಿತು ಹಿರಿಯ ಸಂಸ್ಕೃತ ವಿದ್ವಾಂಸ ಡಾ. ಹೆಚ್.ವಿ. ನಾಗರಾಜರಾವ್ ಅವರಿಂದ ಸಂವಾದ, ಸ್ಥಳ: ಬಿ.ವಿ. ಕಾರಂತ ರಂಗ ಚಾವಡಿ, ರಂಗಾಯಣ ಆವರಣ, ಸಂಜೆ 4 ಗಂಟೆಗೆ. ಭಾರತೀಯ ರಂಗ ವಿದ್ಯಾಲಯದ ವಿದ್ಯಾರ್ಥಿಗಳಿಂದ 'ವಿದಿಶಾ ಪ್ರಹಸನ' ನಾಟಕ ಪ್ರದರ್ಶನ ಸಂಜೆ 6.30ಕ್ಕೆ.

ಭೋಗೇಶ್ವರನ ದಂತ ಪ್ರದರ್ಶನಕ್ಕಿಡಲು ಅರಣ್ಯ ಇಲಾಖೆ ನಿರ್ಧಾರ

ಮೈಸೂರು, ಜೂ.12(ಎಂಟಿವೈ)– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕಬಿನಿ ಹಿನ್ನೀರಿನ ಬಳಿ ಕಾಣಿಸಿಕೊಂಡು ಪ್ರವಾಸಿಗರಿಗೆ ಮುದ ನೀಡುತ್ತಿದ್ದ ಭೋಗೇಶ್ವರ (ಮಿಸ್ಟರ್ ಕಬಿನಿ) ಮೃತಪಟ್ಟಿದ್ದು, ಅದರ ಭಾರಿ ಗಾತ್ರದ ದಂತವನ್ನು ಇಲಾಖೆಯ ಮುಖ್ಯ ಕಚೇರಿ ಅಥವಾ ಯಾವುದಾದರೂ ವಸ್ತು ಪ್ರದರ್ಶನದಲ್ಲಿ ಪ್ರದರ್ಶನ ಕ್ಕಿಡಲು ಅರಣ್ಯ ಇಲಾಖೆ ನಿರ್ಧರಿಸಿದೆ.

ಹೆಚ್.ಡಿ.ಕೋಟೆ ವ್ಯಾಪ್ತಿಗೆ ಒಳಪಡುವ ನಾಗರಹೊಳೆ ಹಾಗೂ ಬಂಡೀಪುರ ಅಭಯಾರಣ್ಯಕ್ಕೆ ಹೊಂದಿಕೊಂಡತಿರುವ ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ಭಾರಿ ಗಾತ್ರದ ದಂತ ಹೊಂದಿರುವ 5–6 ಆನೆಗಳಿದ್ದು, ಅವುಗಳಲ್ಲಿ ಭೋಗೇಶ್ವರ ಆನೆಯ ದಂತ ನೆಲಕ್ಕೆ ತಾಗುತ್ತಿತ್ತು. ಇನ್ನೆರಡು ಹಿರಿಯ ಆನೆಗಳಿಗೆ ದಂತ ನೆಲಕ್ಕೆ ತಾಗುವಂತೆ ಬಾಗಿದ್ದರೂ, ಭೋಗೇಶ್ವರನಂತೆ ನೆಲಕ್ಕೆ ತಾಗಿ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಬಾಗಿಲ್ಲ. ಇನ್ನೊಂದು ಆನೆ ಮುಂಭಾಗಕ್ಕೆ ದಂತ 'ಯು' ಶೇಪ್‌ನಲ್ಲಿ ಚಾಚಿಕೊಂಡಿದ್ದು ಪ್ರವಾಸಿಗರ ಆಕರ್ಷಣೆಗೆ ಕೇಂದ್ರಬಿಂದುವಾಗಿವೆ. 'ಕಬಿನಿಯ ಹಿರಿಯ ಅಜ್ಜಂದಿರು' ಎಂದು ಉಲ್ಲೇಖಿಸುವ ಐದಾರು ಆನೆಗಳಲ್ಲಿ ಭೋಗೇಶ್ವರ ಇನ್ನಿಲ್ಲವಾಗಿದ್ದು, ವನ್ಯಜೀವಿ ಪ್ರೇಮಿಗಳು ಹಾಗೂ ಸಫಾರಿ ಪ್ರಿಯರಿಗೆ ನೋವುಂಟು ಮಾಡಿದೆ.

ಭೋಗೇಶ್ವರ ಆನೆಯ ಅಗಲಿಕೆ ಸುದ್ದಿಯ ಮರುದಿನವೇ ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ಬೃಹತ್ ದಂತ ಹೊಂದಿರುವ ಆನೆಯೊಂದು ದರ್ಶನ ನೀಡುವ ಮೂಲಕ ಭೋಗೇಶ್ವರನ ಅಗಲಿಕೆಯ ಬೇಸರ ಮರೆಸುವ ಪ್ರಯತ್ನ ಮಾಡಿರುವುದು ವನ್ಯಜೀವಿ ಪ್ರೇಮಿಗಳಲ್ಲಿ ಸಮಾಧಾನ ತಂದಿದೆ. ಇಂದು ಜೆಎಲ್‌ಆರ್ ವಾಹನ ಹಾಗೂ ಬೋಟ್ ಮೂಲಕ ಸಫಾರಿಗೆ ತೆರಳಿದ್ದ ಪ್ರವಾಸಿಗರಿಗೆ ಉದ್ದನೆಯ ದಂತ ಇರುವ ಆನೆ ಕಂಡು ಬಂದಿದೆ.

ಅಂತ್ಯಕ್ರಿಯೆ ಮಾಡಿಲ್ಲ: ಸುಪ್ರಿಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಕಾಡಲ್ಲಿ ಮೃತಪಟ್ಟ ಹುಲಿ, ಚಿರತೆ ಹೊರತುಪಡಿಸಿ ಉಳಿದ ಪ್ರಾಣಿಗಳ ಕಳೇಬರವನ್ನು ಅಂತ್ಯಕ್ರಿಯೆ ಮಾಡುವಂತಿಲ್ಲ. ಹೀಗಾಗಿ ಸುಪ್ರಿಂಕೋರ್ಟ್ ಆದೇಶ ಪಾಲನೆ ಮಾಡುವ ನಿಟ್ಟಿನಲ್ಲಿ ಭೋಗೇಶ್ವರ ಆನೆಯ ಮರಣೋತ್ತರ ಪರೀಕ್ಷೆ ನಡೆಸಿ, ದೇಹದ ಅಂಗಾಂಗದ ಕೆಲವು ಭಾಗವನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಉಳಿದ ದೇಹವನ್ನು ಅರಣ್ಯದಲ್ಲಿಯೇ ಬಿಡಲಾಗಿದೆ. ಈ ಸಂದರ್ಭದಲ್ಲಿ ಬಂಡೀಪುರದ ಎಸಿಎಫ್ ನವೀನ್, ಆರ್‌ಎಫ್‌ಓ ಜಿ.ಬಿ.ಅಮೃತೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ದಂತ ಪ್ರದರ್ಶನಕ್ಕೆ ಉದ್ದೇಶ: ಇದುವರೆಗೂ ಅರಣ್ಯ ಪ್ರದೇಶದಲ್ಲಿ ಮೃತಪಟ್ಟ ಆನೆಗಳಿಂದ ದಂತ ಬೇರ್ಪಡಿಸಿ ಮೈಸೂರಲ್ಲಿರುವ ಅರಣ್ಯ ಇಲಾಖೆಯ ಗಂಧದ ಕೋಠಿಯಲ್ಲಿ ಸಂಗ್ರಹಿಸಿಡಲಾಗುತ್ತಿತ್ತು. ಆದರೆ, ಭೋಗೇಶ್ವರ ಆನೆಯ ಪ್ರಖ್ಯಾತಿ ಹಿನ್ನೆಲೆ ಹಾಗೂ ಅತೀ ಉದ್ದದ ದಂತ ಹೊಂದಿದ್ದ ಕಾರಣ ಅದನ್ನು ಪ್ರದರ್ಶನಕ್ಕಿಡುವಂತೆ ವನ್ಯಜೀವಿ ಪ್ರೇಮಿಗಳಿಂದ ಒತ್ತಾಯ ಕೇಳಿ ಬಂದಿದೆ. ಇದರಿಂದ ಅರಣ್ಯ ಇಲಾಖೆಯ ಕಚೇರಿ ಅಥವಾ ಯಾವುದಾದರೂ ಪ್ರದರ್ಶನದಲ್ಲಿ ದಂತವನ್ನು ಪ್ರದರ್ಶನಕ್ಕಿಡಬಹುದು ಎಂಬ ಅಭಿಪ್ರಾಯವೂ ಅರಣ್ಯ ಇಲಾಖೆಯ ಅಧಿಕಾರಿಗಳಿಂದ ವ್ಯಕ್ತವಾಗಿದೆ.

8.46 ಅಡಿ ಉದ್ದ, 38 ಸೆಂಟಿ ಮೀಟರ್ ಸುತ್ತಳತೆ: ಭೋಗೇಶ್ವರ ಆನೆ ಕಳೇಬರದಿಂದ ದಂತ ಬೇರ್ಪಡಿಸಿದ ಬಳಿಕ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೇ ಹೌಹಾರಿದರು. ಒಂದೊಂದು ದಂತವೂ 2.58 ಮೀಟರ್ ಉದ್ದ (8.46 ಅಡಿ) ಇದ್ದರೆ, ಅದರ ಸುತ್ತಳತೆ 38 ಸೆಂಟಿ ಮೀಟರ್ ಇತ್ತು. ಎರಡೂ ದಂತವನ್ನು ಸುರಕ್ಷಿತವಾಗಿ ಮೈಸೂರಿಗೆ ರವಾನಿಸಲಾಗಿದೆ.



ಹಾಡಹಗಲೇ ಮಹಿಳೆಗೆ ಬೆಂಕಿ ಹಚ್ಚಿ ಕೊಲ್ಲಲು ಯತ್ನ


ನಾಗಮಂಗಲ ಹೊರ ವಲಯದಲ್ಲಿ ಘಟನೆ

ನಾಗಮಂಗಲ, ಜೂ.12– ವ್ಯಕ್ತಿಯೋರ್ವ ತನ್ನ ಸ್ನೇಹಿತೆ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಹತ್ಯೆಗೆ ಯತ್ನಿಸಿದ ಘಟನೆ ಇಲ್ಲಿನ ಹೊರ ವಲಯದ ಕೆ.ಆರ್.ಪೇಟೆ ರಸ್ತೆಯಲ್ಲಿರುವ ಸಂಕನಹಳ್ಳಿ ಬಳಿಯ ಗೆಳತಿ ಗುಡ್ಡದ ಸಮೀಪ ಭಾನುವಾರ ಸಂಭವಿಸಿದೆ. ಮಹಿಳೆಯನ್ನು ಮಂಡ್ಯ ತಾಲೂಕಿನ ಉಮ್ಮಡಹಳ್ಳಿ ಗ್ರಾಮದ ಪ್ರಭಾ ಎಂದು ಗುರುತಿಸಲಾಗಿದ್ದು, ತೀವ್ರ ಸುಟ್ಟ ಗಾಯಗಳಿಂದ ಸಾವು–ಬದುಕಿನ ನಡುವೆ ಹೋರಾಡುತ್ತಿರುವ ಈಕೆಯನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿವರ: ಈ ಮಹಿಳೆ ವ್ಯಕ್ತಿಯೋರ್ವನ ಜೊತೆ ಬೈಕ್‌ನಲ್ಲಿ ಬಂದಿದ್ದಳು ಎಂದು ಹೇಳಲಾಗಿದ್ದು, ಗೆಳತಿ ಗುಡ್ಡದ ಬಳಿ ಇಬ್ಬರೂ ಉಪಹಾರ ಸೇವಿಸಿದ್ದಾರೆ ಎನ್ನಲಾಗಿದೆ. ನಂತರ ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು ಮಹಿಳೆ ಜೊತೆ ಬಂದಿದ್ದ ವ್ಯಕ್ತಿಯು ಆಕೆಯ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿದ ನಂತರ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಬೈಕ್‌ನಲ್ಲಿ ಪರಾರಿಯಾಗಿದ್ದಾನೆ. ಗುಡ್ಡದ ಬಳಿಯಿಂದ ರಸ್ತೆಗೆ ಬಂದು ಹೊರಳಾಡುತ್ತಿದ್ದ ಆಕೆಯನ್ನು ಸ್ಥಳೀಯರು ಬೆಂಕಿ ಆರಿಸಿ ನಾಗಮಂಗಲ ಪಟ್ಟಣ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಮಹಿಳೆಗೆ ನಾಗಮಂಗಲ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ರವಾನಿಸಿದ್ದಾರೆ. ಉಮ್ಮಡಹಳ್ಳಿಯ ಪ್ರಭಾ ವಿಧವೆಯಾಗಿದ್ದು, ಕಳೆದ ಒಂದು ವರ್ಷದಿಂದ ಬೆಂಗಳೂರಿನಲ್ಲಿ ಗಾರೆ ಕೆಲಸ ಮಾಡುವ ವ್ಯಕ್ತಿಯೊಂದಿಗೆ ಸ್ನೇಹ ಹೊಂದಿದ್ದಳು. ಸ್ನೇಹಿತನೇ ಆಕೆಗೆ ಬೆಂಕಿ ಹಚ್ಚಿ ಕೊಲೆ ಮಾಡಲು ಯತ್ನಿಸಿದ್ದಾನೆ ಎಂದು ಸಂಬಂಧಿಕರು ಆರೋಪಿಸಿದ್ದಾರೆ. ಈ ಸಂಬಂಧ ನಾಗಮಂಗಲ ಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಕೊಂಡು ತನಿಖೆ ಮುಂದುವರೆಸಿದ್ದಾರೆ.

'ಜೂನಿಯರ್ ಕಬಿನಿ ಭೋಗೇಶ್ವರ'ನ ದರ್ಶನ

ಕಬಿನಿ ಹಿನ್ನೀರಿನಲ್ಲಿ ಉದ್ದನೇಯ ದಂತದ ಆನೆ ಕಂಡು ಖುಷಿಪಟ್ಟ ಪ್ರವಾಸಿಗರು



ಹೆಚ್.ಡಿ.ಕೋಟೆ, ಜೂ.12(ಮಂಜು)– ಏಷ್ಯಾದ ಅತೀ ದೊಡ್ಡದುತ ಹೊಂದಿದ್ದ ಕಾಡಾನೆ ಭೋಗೇಶ್ವರ್ ಸಾವನ್ನಪ್ಪಿ 2–3 ದಿನಗಳು ಕಳೆಯುವ ಮುನ್ನವೇ ಮತ್ತೊಂದು ಉದ್ದನೇಯ ದುತದ ಕಾಡಾನೆ ಮಾಸ್ತಿಗುಡಿ ಸಮೀಪ ಸನ್‌ಸೆಟ್ ಪಾಯಿಂಟ್ ಸಮೀಪ ಕಾಣಿಸಿಕೊಂಡಿದೆ.

ತಾಲೂಕಿನ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕಬಿನಿ ಹಿನ್ನೀರಿನ ಬಳಿ ಭಾನುವಾರ ಸಂಜೆ ಪ್ರವಾಸಿಗರಿಗೆ ದರ್ಶನ ನೀಡಿದ ಉದ್ದನೇಯ ದಂತದ ಕಾಡಾನೆಯನ್ನು ಕಂಡ ಪ್ರವಾಸಿಗರು ಜೂನಿಯರ್ ಕಬಿನಿ ಭೋಗೇಶ್ವರ ಎಂದು ಹೇಳುತ್ತ ಖುಷಿಪಟ್ಟರು.

ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ಭಾರಿ ಗಾತ್ರದ ದಂತ ಹೊಂದಿರುವ ಇನ್ನೂ 5–6 ಆನೆಗಳಿದ್ದು, ಅವುಗಳ ದಂತಗಳು ಕೂಡ ಉದ್ದವಾಗಿದೆ. ಆದರೆ, ಭೋಗೇಶ್ವರನಂತೆ ನೆಲಕ್ಕೆ ತಾಗುವುದಿಲ್ಲ. ಇಂದು ಸಂಜೆ ಆನೆಗಳ ಹಿಂಡಿನೊಂದಿಗೆ ಕಾಣಿಸಿಕೊಂಡ ಆನೆಯ ದಂತವೂ 'ಯು' ಆಕಾರದಿಂದ ಚಾಚಿಕೊಂಡಿದ್ದು, ಒಂದನೊಂದು ದಂತವೂ ಸ್ಪರ್ಶಿಸುವಂತೆ ಭಾಸವಾಗುತ್ತದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ಕಬಿನಿ ಭೋಗೇಶ್ವರ ಎಂಬ ಉದ್ದನೆ ಕೊಂಬಿನ ದೈತ್ಯಾಕಾರದ ಆನೆ ಸಾವನ್ನಪ್ಪಿರುವುದು ಛಾಯಾಗ್ರಾಹಕರಿಗೆ ಹಾಗೂ ಪರಿಸರ ಪ್ರೇಮಿಗಳಿಗೆ ನೋವುಂಟು ಮಾಡಿದೆ. ಆದರೆ, ಭಾನುವಾರ ಮಾಸ್ತಿಗುಡಿ ಸನ್‌ಸೆಟ್ ಪಾಯಿಂಟ್ ಸಮೀಪ ಕಬಿನಿ ಹಿನ್ನೀರಿನ ಬಳಿ ಭೋಗೇಶ್ವರ ಮಾದರಿಯಲ್ಲೇ ಮತ್ತೊಂದು ಆನೆ ಕಾಣಿಸಿಕೊಂಡಿರುವುದು ಸಂತೋಷವಾಗಿದೆ ಎಂದು ಛಾಯಾಗ್ರಾಹಕ ಸತೀಶ್ ಬಿ.ಆರಾಧ್ಯ ತಿಳಿಸಿದರು.

ತಾಕತ್ತಿದ್ದರೆ ನಮ್ಮ ಕ್ಷೇತ್ರಕ್ಕೆ ಬಂದು ಗೆಲ್ಲಿ

ಗುಬ್ಬಿ ಶ್ರೀನಿವಾಸ್ ಬೆಂಬಲಿಗರಿಂದ ಕುಮಾರಸ್ವಾಮಿಗೆ ಸವಾಲ್

ತುಮಕೂರು, ಜೂ.12– ನಿನ್ನೆ ಮಾಜಿ ಸಿಎಂ ಹೆಚ್ ಡಿ ಕುಮಾರಸ್ವಾಮಿ ವಿರುದ್ಧ, ಗುಬ್ಬಿ ಶಾಸಕ ಶ್ರೀನಿವಾಸ್ ಕೆಂಡಾಮಂಡಲವಾಗಿದ್ದರು. ಏಕವಚನದಲ್ಲೇ ಅವನೇನ್ ಕತ್ತೆ ಕಾಯ್ತಾ ಇದ್ನಾ ಅಂತ ರಾಜ್ಯಸಭೆ ವೋಟಿಂಗ್ ಬಗ್ಗೆ ಹೇಳಿದ ಹೆಚ್ ಡಿ ಕೆ ವಿರುದ್ಧ ಹರಿಹಾಯ್ದಿದ್ದರು.

ಅಲ್ಲದೇ ಎಲ್ಲೋ ಗೆದ್ದಿದ್ದಲ್ಲ, ಇಲ್ಲಿ ಬಂದು ಗೆದ್ದು ತೋರಿಸು ಎಂದು ಸವಾಲ್ ಹಾಕಿದ್ದರು. ಅವರ ಬಳಿಕ, ಈಗ ಅವರ ಬೆಂಬಲಿಗರೂ, ತಾಕತ್ತಿದ್ರೇ.. ನಮ್ಮ ಕ್ಷೇತ್ರಕ್ಕೆ ಬಂದು ಗೆಲ್ಲಿ ಎಂಬುದಾಗಿ ಸವಾಲ್ ಹಾಕಿದ್ದಾರೆ. ಈ ಬಗ್ಗೆ ವೀಡಿಯೋ ಬಿಡುಗಡೆ ಮಾಡಿರುವಂತ ಗುಬ್ಬಿ ಶಾಸಕ ಶ್ರೀನಿವಾಸ್ ಬೆಂಬಲಿಗರು, ಗುಬ್ಬಿ ಕ್ಷೇತ್ರದಲ್ಲಿ ನಮ್ಮ ಶ್ರೀನಿವಾಸಣ್ಣನನ್ನು, ಮತ್ತಷ್ಟು ಬೆಳೆಸುತ್ತೇವೆ. ನೀವ್ ಎಷ್ಟೇ ಆರೋಪ ಮಾಡಿದ್ರು. ಅದಕ್ಕೆ ನಾವ್ ತಲೆಕೆಡಿಸಿಕೊಳ್ಳದೇ, ಶಕ್ತಿಯುತವಾಗಿ ಬೆಳೆಸುತ್ತೇವೆ. ಯಾರ್ ಏನೇ ಹೇಳಿದ್ರು ಶ್ರೀನಿವಾಸಣ್ಣನನ್ನು ಬಿಟ್ಟುಕೊಡೋದಿಲ್ಲ ಎಂಬುದಾಗಿ ಹೇಳಿದ್ದಾರೆ.

ಕುಮಾರಸ್ವಾಮಿಯವರೇ, ನಿಮ್ಮಂತ ರಾಜಕಾರಣಕ್ಕೆ ನಾವ್ ಬಗ್ಗೋದಿಲ್ಲ. ನಮ್ಮ ಗುಬ್ಬಿ ಜನ ಶ್ರೀನಿವಾಸಣ್ಣನನ್ನು ಯಾವತ್ತೂ ಕೈ ಬಿಡೋದಿಲ್ಲ. ನಿಮ್ಮಂತ ಎಷ್ಟೇ ಕುಮಾರಸ್ವಾಮಿ ಬಂದ್ರು ಅಷ್ಟೇ, ಯಾವನ್ ಬಂದ್ರು ಅಷ್ಟೇ.. ವಾಸಣ್ಣ ವಾಸಣ್ಣನೇ.. ಅವರಿಗೆ ಯಾರೂ ಸರಿಸಾಟಿಯಿಲ್ಲ ಎಂಬುದಾಗಿ ವಾಗ್ದಾಳಿ ನಡೆಸಿದ್ದಾರೆ.

ಕುಮಾರಸ್ವಾಮಿಯವರೇ ನಿಮ್ಗೆ ತಾಕತ್ತಿದ್ರೇ ಇಲ್ಲೇ ಗುಬ್ಬಿಗೆ ಬಂದು ವಿಧಾನಸಭಾ ಚುನಾವಣೆಗೆ ನಿಂತು ಗೆಲ್ರಿ. ಆಗ ನಿಮ್ಮ ಜೆಡಿಎಸ್ ತಾಕತ್ತು ಏನ್ ಎಂಬುದು ಗೊತ್ತಾಗಲಿದೆ. ಅದನ್ನು ಬಿಟ್ಟು ಎಲ್ಲೋ ಕುಳಿತು ಸುಖಾ ಸುಮ್ಮನೆ ಆರೋಪ ಮಾಡೋದಲ್ಲ. ಗುಬ್ಬಿ ಜನತೆಯನ್ನು ಬಂದು ಶ್ರೀನಿವಾಸ್ ಅಣ್ಣನ ಬಗ್ಗೆ ಕೇಳಿ. ಮಾಜಿ ಸಿಎಂ ಆದ ನೀವು, ಆ ಗೌರವದಂತೆ ನಡೆದುಕೊಳ್ಳಿ ಎಂಬುದಾಗಿ ಹೇಳಿದ್ದಾರೆ.



ಗುಡ್ಡೆಹೊಸೂರು ಸಮೀಪದ ಬೆಟ್ಟಗೇರಿ ಗ್ರಾಮದ ಶ್ರೀ ಚೌಡೇಶ್ವರಿ ದೇವಿ ಬನದ ಜಾಗದಲ್ಲಿ ಅರಣ್ಯ ಇಲಾಖಾ ವತಿಯಿಂದ ವಿವಿಧ ಜಾತಿಯ ಗಿಡಗಳನ್ನು ನೆಡಲಾಯಿತು. ಈ ಸಂದರ್ಭ ಕುಶಾಲನಗರ ವಲಯ ಅರಣ್ಯಾಧಿಕಾರಿ ಶಿವರಾಮ್, ಆರ್‌ಎಫ್‌ಓಗಳಾದ ದೇವಯ್ಯ, ವಿಲಾಶ್, ಸುಬ್ರಾಯ, ದೇವಸ್ಥಾನ ಸಮಿತಿ ಅಧ್ಯಕ್ಷ ಬಿ.ಬಿ.ಶಿವಕುಮಾರ್, ಉಪಾಧ್ಯಕ್ಷ ಕೆ.ಕೆ.ಚಿದಾನಂದ, ಕೆ.ಕೆ.ತಿಮ್ಮಯ್ಯ, ಸಮಿತಿ ಸದಸ್ಯರಾದ ಕುಡೆಕ್ಕಲ್ ಗಣೇಶ್, ಅಣ್ಣಯ್ಯ ಸುದೀಶ್ ಮುಂತಾದವರು ಹಾಜರಿದ್ದರು.

ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ಮೈಸೂರು, ಜೂ.10– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಫುಲ್ ಟೈಮ್ ಲೀಗಲ್ ಏಡ್ ಕೌನ್ಸಿಲ್ ಎಂಗೇಜ್‌ಮೆಂಟ್ ಸಿಸ್ಟಮ್ ಅನ್ನು ನೂತನವಾಗಿ ಸ್ಥಾಪನೆ ಮಾಡುತ್ತಿರುವುದರಿಂದ ವಿವಿಧ ಹುದ್ದೆಗಳಾದ Chief Legal Aid Defence Counsel (1), Deputy Chief Legal Aid Defence Counsel (2), Assistant Legal Aid Defence Counsel (2) ಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, 2022ರ ಜೂನ್ 30 ರೊಳಗಾಗಿ ಅರ್ಜಿ ಸಲ್ಲಿಸಲು ತಿಳಿಸಿದೆ. ಆಸಕ್ತ ಅಭ್ಯರ್ಥಿಗಳು ವೈಯಕ್ತಿಕ ವಿವರಗಳೊಂದಿಗೆ ಸ್ವ ಅಕ್ಷರದಿಂದ ಭರ್ತಿ ಮಾಡಿದ ಅರ್ಜಿಗಳನ್ನು, ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಎ.ಡಿ.ಆರ್ ಸೆಂಟರ್, ಮಳಲವಾಡಿ, ಜಯನಗರ 5 ನೇ ಕ್ರಾಸ್ ಮೈಸೂರು ಇಲ್ಲಿಗೆ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಡಾನ್‌ನ ಬಂದರಿನಲ್ಲಿ ಮುಳುಗಿದ ಹಡಗು

15 ಸಾವಿರ ಕುರಿಗಳು ನೀರುಪಾಲು

ಕಾರ್ಟೂಮ್ (ಸುಡಾನ್): ಸುಡಾನ್‌ನ ಕೆಂಪು ಸಮುದ್ರದ ಸುವಾಕಿನ್ ಬಂದರಿನಲ್ಲಿ ಸಾವಿರಾರು ಕುರಿಗಳಿದ್ದ ಹಡಗೊಂದು ಭಾನುವಾರ ಮುಳುಗಿದೆ. ಹಡಗಿನಲ್ಲಿದ್ದ ಬಹುತೇಕ ಕುರಿಗಳು ನೀರುಪಾಲಾಗಿದ್ದು, ಸಿಬ್ಬಂದಿಯನ್ನು ರಕ್ಷಣೆ ಮಾಡಲಾಗಿದೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.



ಸುಡಾನ್‌ನಿಂದ ಸೌದಿ ಅರೇಬಿಯಾಕ್ಕೆ ತೆರಳಬೇಕಿದ್ದ ಭಾದರ್ 1 ಹೆಸರಿನ ಹಡಗು ದುರಂತಕ್ಕೀಡಾಗಿದೆ. 15,800 ಕುರಿಗಳು ಅದರಲ್ಲಿದ್ದವು. ನಿಗದಿತ ಸಾಮರ್ಥ್ಯಕ್ಕಿಂತಲೂ ಹೆಚ್ಚಿನ ಹೆಚ್ಚಿನ ಜಾನುವಾರುಗಳನ್ನು ಅದಕ್ಕೆ ತುಂಬಲಾಗಿತ್ತು. ಹೀಗಾಗಿಯೇ ಹಡಗು ಭಾನುವಾರ ಬೆಳಗ್ಗೆ ಮುಳುಗಿತು ಎಂದು ಸೂಡಾನ್ ಅಧಿಕಾರಿಗಳು ಮಾಹಿತಿ ನೀಡಿದರು. ಹಡಗಿನಲ್ಲಿ ಕೇವಲ 9,000 ಕುರಿಗಳನ್ನು ಮಾತ್ರ ಸಾಗಿಸಬಹುದಾಗಿತ್ತು ಎಂದು ಅವರು ಹೇಳಿದ್ದಾರೆ. ಹಡಗಿನಲ್ಲಿದ್ದ ಎಲ್ಲಾ ಸಿಬ್ಬಂದಿಯನ್ನು ರಕ್ಷಿಸಲಾಗಿದೆ ಎಂದು ಹೇಳಿರುವ ಮತ್ತೊಬ್ಬ ಅಧಿಕಾರಿ, ಹಡಗು ಮುಳುಗಿರುವುದರಿಂದ ಬಂದರು ಕಾರ್ಯಾಚರಣೆಯ ಮೇಲೆ ಪರಿಣಾಮ ಉಂಟಾಗಲಿದೆ. ಹಡಗಿನಲ್ಲಿದ್ದ ಬಹುತೇಕ ಕುರಿಗಳೂ ಸಾವಿಗೀಡಾಗಿವೆ. ಹೀಗಾಗಿ ಪರಿಸರದ ಮೇಲೆ ದುಷ್ಪರಿಣಾಮವಾಗಲಿದೆ ಎಂದು ಅವರು ಹೇಳಿದ್ದಾರೆ.

ನೀರುಪಾಲದಾದ ಕುರಿಗಳ ಒಟ್ಟು ಮೌಲ್ಯವು 'ಸುಮಾರು 14 ಮಿಲಿಯನ್ ಸೌದಿ ರಿಯಾಲ್‌ಗಳು (ರೂ. 30 ಕೋಟಿ)' ಎಂದು ರಫ್ತುದಾರರ ಸಂಘದ, ಜಾನುವಾರು ವಿಭಾಗದ ಮುಖ್ಯಸ್ಥ ಸಲೇಹ್ ಸಲೀಂ ಹೇಳಿದರು.

ನಗರ ಪ್ರದೇಶದಲ್ಲಿ ಲಕ್ಷ ಮನೆಗಳನ್ನು ನಿರ್ಮಿಸಲು ಸರ್ಕಾರ ವಿಶೇಷ ಒತ್ತು

ಸಿಎಂ ಬಸವರಾಜ ಬೊಮ್ಮಾಯಿ ಘೋಷಣೆ

ಬೆಂಗಳೂರು, ಜೂ.12– ನಗರ ಪ್ರದೇಶದಲ್ಲಿ ಒಂದು ಲಕ್ಷ ಮನೆಗಳನ್ನು ನಿರ್ಮಿಸಲು ಸರ್ಕಾರ ವಿಶೇಷ ಒತ್ತು ನೀಡಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅವರು ಇಂದು ರಾಜರಾಜೇಶ್ವರಿನಗರ ವಿಧಾನಸೌಧದ ವ್ಯಾಪ್ತಿಯಲ್ಲಿನ ಕೊಳಗೇರಿ ನಿವಾಸಿಗಳಿಗೆ ಪ್ರಧಾನಮಂತ್ರಿ ಆವಾಸ್ ಯೋಜನೆ ಸರ್ವರಿಗೂ ಸೂರು ಯೋಜನೆಯಡಿ 1588 ಮನೆಗಳ ನಿರ್ಮಾಣ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಹಕ್ಕುಪತ್ರಗಳನ್ನು ವಿತರಿಸಿದರು.

ಸರ್ಕಾರವು 52 ಸಾವಿರ ಮನೆಗಳನ್ನು ಪೂರ್ತಿ ಮಾಡಿದ್ದು, ಇನ್ನು 50 ಸಾವಿರ ಮನೆಗಳಿಗೆ ನಾವು ಈ ವರ್ಷ ಕಾರ್ಯಾದೇಶ ನೀಡಿದ್ದೇವೆ. ಫಲಾನುಭವಿಗಳಿಂದ ವಂತಿಗೆ ಬರುವುದು ತಡವಾಗುತ್ತಿದ್ದು, ಅವುಗಳನ್ನು ಪೂರ್ಣಮಾಡಲು ತಡವಾಗುತ್ತಿದೆ ಎಂದು ಸರ್ಕಾರ ಮನಗಂಡಿದೆ. ಮನೆಗಳನ್ನು ಕಟ್ಟಿದ ಸಂದರ್ಭದಲ್ಲಿ ಫಲಾನುಭವಿಗಳಿಗೆ ವಂತಿಕೆಯನ್ನು ಕೊಡುವುದು ಕಷ್ಟಸಾಧ್ಯವಾಗುತ್ತಿದೆ ಎನ್ನುವುದನ್ನು ಅರಿತು, ಅದಕ್ಕಾಗಿ ಬಡವರ ಪರವಾಗಿ ಬ್ಯಾಂಕುಗಳಿಗೆ ಸರ್ಕಾರ ಗ್ಯಾರಂಟಿ ಕೊಟ್ಟು 500 ಕೋಟಿ ರೂ.ಗಳನ್ನು ಸಾಲ ಪಡೆಯಲಾಗುವುದು. ಇದರಿಂದಾಗಿ ಸಮಸ್ಯೆಗೆ ಪರಿಹಾರ ನೀಡಿದಂತಾಗುತ್ತದೆ. ಮನೆ ಪೂರ್ತಿಯಾದಾಗ ಕಂತಿನಲ್ಲಿ ನೀಡುವ ವ್ಯವಸ್ಥೆ ಮಾಡುತ್ತೇವೆ. ಬಡವರಿಗೆ ಸಹಾಯ ಮಾಡಲು ಎಲ್ಲೆಲ್ಲಿ ಸಾಧ್ಯವಿದೆಯೋ ಅದನ್ನು ಮಾಡುತ್ತಿದ್ದೇವೆ ಎಂದರು.

ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಬೆಂಗಳೂರಿಗೆ ನಗರೋತ್ಥಾನ ಯೋಜನೆಯನ್ನು ಘೋಷಿಸಿ, ಕೊಳಚೆ ಪ್ರದೇಶಗಳ ಅಭಿವೃದ್ಧಿಯಾಗಬೇಕು, ಬಡವರು ಇರುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಮತ್ತು ಕೆರೆಗಳ ರಕ್ಷಣೆಯಾಗಬೇಕು ಎನ್ನುವ ವಿಚಾರಗಳನ್ನು ಸೇರಿಸಲಾಯಿತು. ಅದರ ಭಾಗವಾಗಿ ಇಂದು 1588 ಜನರಿಗೆ ಮನೆಗಳ ನಿರ್ಮಾಣ ಕಾಮಗಾರಿಯಾಗಲಿದೆ ಎಂದರು.

ನಮ್ಮ ಸರ್ಕಾರ ಈಗ 5 ಲಕ್ಷ ಮನೆ ಪೂರ್ಣಗೊಳಿಸುತ್ತಿದೆ. ಕಟ್ಟಿರುವ ಮನೆಗಳನ್ನು ಪೂರ್ಣಗೊಳಿಸುವ ಸಂಕಲ್ಪ ನಮ್ಮ ಸರ್ಕಾರ ಮಾಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 1.75 ಲಕ್ಷ ನೀಡುತ್ತಿದ್ದ ಮೊತ್ತವನ್ನು 2 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ. ಜಮೀನಿನ ಸಮಸ್ಯೆ ಬಗೆಹರಿಸಲು 5000 ಸರ್ಕಾರಿ ಜಮೀನು ಗುರುತಿಸಲಾಗಿದ್ದು, ಬಡವರಿಗಾಗಿ ಇದನ್ನು ಮೀಸಲಿಟ್ಟು, ಅಲ್ಲಿ ನಿವೇಶನ ಮತ್ತು ಮನೆ ಕೊಡುವ ಕೆಲಸವನ್ನು ಸರ್ಕಾರ ಮಾಡಲಿದೆ ಎಂದರು.

ಪರಿಹಾರದ ರಾಜಕಾರಣವಾಗಬೇಕು. ಚರ್ಚೆಯ ರಾಜಕಾರಣವಲ್ಲ. ಜನರ ಸಮಸ್ಯೆ ಇದ್ದಲ್ಲಿಗೆ ಹೋಗಿ ಅರಿವಿನಿಂದ ಕೆಲಸ ಮಾಡಬೇಕು. ಪ್ರವಾಹದ ಸಂದರ್ಭದಲ್ಲಿ ಬೆಳೆ ಹಾನಿಗೆ ಕೇಂದ್ರ ಸರ್ಕಾರ 11000 ರೂ.ಗಳನ್ನು ನೀಡಿದರೆ, ರಾಜ್ಯ ಸರ್ಕಾರವೂ ಅಷ್ಟೇ ಮೊತ್ತವನ್ನು ಹಾಕಿ 22 ಸಾವಿರ ರೂ.ಗಳನ್ನು ನಮ್ಮ ಸರ್ಕಾರ ನೀಡಿದೆ. 1588 ಮನೆ ನಿರ್ಮಾಣಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವ ಕೆಲಸವನ್ನು ನಮ್ಮ ಸರ್ಕಾರ ಮಾಡಲಿದೆ. ಜನರ ನಿರೀಕ್ಷೆಗೆ ತಕ್ಕಹಾಗೆ ನಮ್ಮ ಸರ್ಕಾರ ಮಾಡಲಿದೆ ಎಂದರು. ಮುಂದಿನ ದಿನಗಳಲ್ಲಿ ವಸತಿ ಇಲಾಖೆ ಮತ್ತು ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಕೊಳಚೆ ಪ್ರದೇಶಗಳ ಎಲ್ಲ ಮನೆಗಳಿಗೂ ಕಾಯಕಲ್ಪ ನೀಡಬೇಕು ಎಂದರು.



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಹಿಮಾಲಯ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಲೇಖಕಿ ಡಾ.ಮಂಜುಳಾ ಉಮೇಶ್ ಬರೆದಿರುವ 'ನಮ್ಮ ಹಬ್ಬಗಳು' ಕೃತಿಯನ್ನು ಶನಿವಾರ ಸಂಜೆ ನಾರದ ಸಾಹಿತ್ಯ ಭವನದಲ್ಲಿ ಸಮಾಜ ಸೇವಕ ಡಾ.ಕೆ. ರಘುರಾಂ ವಾಜಪೇಯಿ ಬಿಡುಗಡೆ ಮಾಡಿದರು. ಇದೇ ವೇಳೆ ಲೇಖಕಿ ಡಾ.ಮಂಜುಳಾ ಉಮೇಶ್ ಅವರಿಗೆ 'ಸಾಹಿತ್ಯ ಸೇವಾರತ್ನ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ನಾಗರೀಕರ ಹಗಲು ಯೋಗಕ್ಷೇಮ ಕೇಂದ್ರ ಸಂಸ್ಥಾಪಕ ಪ್ರಭುಸ್ವಾಮಿ, ಸುವರ್ಣ ಬೆಳಕು ಫೌಂಡೇಶನ್ ಅಧ್ಯಕ್ಷ ಮಹೇಶ್ ನಾಯಕ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪಂತ್ ಬಳಗಕ್ಕೆ ಮತ್ತೆ ಮುಖಭಂಗ



ಕಟಕ್, ಜೂ.12– ಕಳಪೆ ಬ್ಯಾಟಿಂಗ್ ಹಾಗೂ ಕ್ಷೇತ್ರ ರಕ್ಷಣೆಯಿಂದ ದಕ್ಷಿಣ ಆಫ್ರಿಕಾ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ ಭಾರತ ಸೋಲು ಕಂಡಿದ್ದು, ಸರಣಿಯಲ್ಲಿ 2–0 ಹಿನ್ನಡೆ ಅನುಭವಿಸಿದೆ. ಇದೀಗ ರಿಷಭ್ ಪಂತ್ ನಾಯಕತ್ವದ ಬಳಗವು ಈ ಸರಣಿ ಕಿರೀಟ ಧರಿಸಬೇಕೆಂದರೆ ಉಳಿದ ಮೂರು ಪಂದ್ಯಗಳಲ್ಲಿಯೂ ಜಯಿಸಲೇಬೇಕಾದ ಒತ್ತಡಕ್ಕೆ ಸಿಲುಕಿದೆ. ಇಲ್ಲಿನ ಬಾರಾಬತಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲ ಬ್ಯಾಟಿಂಗ್ ಮಾಡಿದ ಭಾರತ ಪ್ರಮುಖ ಬ್ಯಾಟರ್‌ಗಳ ವೈಫಲ್ಯದಿಂದ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 148ರನ್‌ಗಳ ಸಾಧಾರಣ ಮೊತ್ತ ದಾಖಲಿಸಿತ್ತು.

ತಂಡದ ಪರವಾಗಿ ಇಶಾನ್‌ಕಿಶಾನ್ 34, ಶ್ರೇಯಸ್ ಅಯ್ಯರ್ 40, ದಿನೇಶ್ ಕಾರ್ತಿಕ್ 30, ಹರ್ಷಲ್ ಪಟೇಲ್ 12, ಅಕ್ಷರ್ ಪಟೇಲ್ 10ರನ್ ಗಳಿಸಿದರು. ಬೌಲಿಂಗ್‌ನಲ್ಲಿ ದಕ್ಷಿಣ ಆಫ್ರಿಕಾ ಪರ ಎನ್ರಿಚ್ ನೋರ್ಜೆ 2, ರಬಾಡ, ಪರ್ನೆಲ್, ಕೇಶವ್ ಮಹಾರಾಜ್ ತಲಾ ಒಂದೊಂದು ವಿಕೆಟ್ ಪಡೆದರು.

ಗುರಿ ಬೆನ್ನತ್ತಿದ್ದ ದಕ್ಷಿಣ ಆಫ್ರಿಕಾಕ್ಕೆ ವಿಕೆಟ್ ಕೀಪರ್ ಹಾಗೂ ಬ್ಯಾಟರ್ ಹೆನ್ರಿಚ್ ಕ್ಲಾಸೆನ್ ಬಿರುಸಿನ ಬ್ಯಾಟಿಂಗ್ ನಡೆಸಿ ತಂಡಕ್ಕೆ ನೆರವಾದರು. ಇವರು 46 ಎಸೆತಗಳಲ್ಲಿ 7 ಬೌಂಡರಿ ಹಾಗೂ 5 ಸಿಕ್ಸರ್‌ನಿಂದ 81ರನ್ ಗಳಿಸಿ ಭಾರತೀಯ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದರು. ಅಂತಿಮವಾಗಿ 18.2 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 149ರನ್ ಗಳಿಸಿ ಗುರಿ ತಲುಪಿತು. ತಂಡದ ಪರವಾಗಿ ತೆಂಬಾ ಬವುಮಾ 35, ಹೆನ್ರಿಚ್ ಕ್ಲಾಸೆನ್ 81, ಡೇವಿಡ್ ಮಿಲ್ಲರ್ 20ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಭುವನೇಶ್ವರ್ ಕುಮಾರ್ 4, ಚಹಲ್, ಹರ್ಷಲ್ ಪಟೇಲ್ ತಲಾ ಒಂದೊಂದು ವಿಕೆಟ್ ಪಡೆದರು. ಉತ್ತಮ ಬ್ಯಾಟಿಂಗ್ ಮಾಡಿದ ಹೆನ್ರಿಚ್ ಕ್ಲಾಸೆನ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಆಟೋ ಚಾಲಕನನ್ನು ಕೊಂದ ಐವರ ಬಂಧನ

7 ದಿನದಲ್ಲೇ ಪ್ರಕರಣ ಭೇದಿಸಿದ ಕೊಳ್ಳೇಗಾಲ ಗ್ರಾಮಾಂತರ ಪೊಲೀಸರು





ಕೊಳ್ಳೇಗಾಲ, ಜೂ.12(ನಾಗೇಂದ್ರಸ್ವಾಮಿ)– ತಾಲೂಕಿನ ಶಿವನಸಮುದ್ರ ಗ್ರಾಮದ ದರ್ಗಾ ಬಳಿ ವ್ಯಕ್ತಿ ಹತ್ಯೆಯಾದ ಪ್ರಕರಣ ಭೇದಿಸಿರುವ ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ಸಂಬಂಧ ರಾಮನಗರದಲ್ಲಿ ಐವರು ಆರೋಪಿಗಳನ್ನು ಬಂಧಿಸುವಲ್ಲಿ ಯಶ್ವಸಿಯಾಗಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್ ಪ್ರಶಂಸಿದ್ದಾರೆ.

ರಾಮನಗರ ಪಟ್ಟಣದ ನಿವಾಸಿ, ಆಟೋ ಚಾಲಕ ಸೈಯದ್ ಆರೀಫ್ ಪಾಷಾ(35) ಹತ್ಯೆಗೀಡಾದವನಾಗಿದ್ದು, ರಾಮನಗರದ ನಿವಾಸಿಗಳಾದ ಸೈಯದ್ ಸಿಕಂದರ್(35), ಮುಜಾವೀರ್ ಅಲಿಯಾಸ್ ಮೂಸಾ(25), ಸೌಕತ್ ಪಾಷಾ ಅಲಿಯಾಸ್ ಸೌಕತ್(25), ಹಬೀಬ್ ಅಲಿಯಾಸ್ ಅಭಿ(19), ಸೈಯದ್ ಸಲೀಂ(24) ಬಂಧಿತ ಆರೋಪಿಗಳು.

ಭಾನುವಾರ ಗ್ರಾಮಾಂತರ ಪೊಲೀಸ್ ಠಾಣೆ ಆವರಣದಲ್ಲಿ ಕರೆದಿದ್ದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಯಾವುದೇ ಸುಳಿವಿಲ್ಲದ ಕೊಲೆ ಪ್ರಕರಣವನ್ನು ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರು ಗಂಭೀರವಾಗಿ ಪರಿಗಣಿಸಿ 7 ದಿನದ ಸಮಯದಲ್ಲಿಯೇ ಭೇದಿಸಿದ್ದಾರೆ ಎಂದರು.

ವಿವರ: ಮೇ 31ರಂದು ಶಿವನಸಮುದ್ರದ ದರ್ಗಾದ ಬಳಿ ಅಪರಿಚಿತ ವ್ಯಕ್ತಿಯನ್ನು ಕಲ್ಲಿನಿಂದ ಜಜ್ಜಿ ಕೊಲೆ ಮಾಡಲಾಗಿತ್ತು. ಕೊಲೆಯಾದಾತನ ಬಗ್ಗೆ ಸುಳಿವು ದೊರೆತಿರಲಿಲ್ಲ. ನಂತರ ಗುರುತು ಪತ್ತೆ ಹಚ್ಚಲಾಗಿ ರಾಮನಗರ ಪಟ್ಟಣದ ನಿವಾಸಿ ಸೈಯದ್ ಆರೀಫ್ ಪಾಷಾ, ಆತ ಆಟೋ ಚಾಲಕ ಎಂದು ತಿಳಿದು ಬಂದಿದೆ.

ನಂತರ ದಕ್ಷಿಣ ವಲಯ ಐಜಿಪಿ ಅವರ ನಿರ್ದೇಶನ ಹಾಗೂ ಮಾರ್ಗದರ್ಶನದ ಮೇರೆಗೆ ಎಎಸ್ಪಿ ಸುಂದರರಾಜು, ಡಿವೈಎಸ್ಪಿ ನಾಗರಾಜು, ಸಿಪಿಐ ಶಿವರಾಜ್ ಹಾಗೂ ಸಬ್‌ಇನ್‌ಸ್ಪೆಕ್ಟರ್‌ಗಳಾದ ಮಂಜುನಾಥ್, ಚೇತನ್, ವೀರಣ್ಣ, ಪ್ರೊಬೇಷನರಿ ಸಬ್‌ಇನ್ಸ್‌ಪೆಕ್ಟರ್ ವಶಿಷ್ಟ ಅವರ ತಂಡ ರಚಿಸಲಾಗಿತ್ತು.

ಬಂಧಿತ ಆರೋಪಿಗಳ ಪೈಕಿ ಮುಜಾವೀರ್ ಗಾರೆ ಕೆಲಸ ಮಾಡುತ್ತಿದ್ದ, ಉಳಿದ ಆರೋಪಿಗಳು ರೇಷ್ಮೆ ನೂಲು ಬಿಚ್ಚುವ ಕೆಲಸ ಮಾಡಿಕೊಂಡಿದ್ದರು. ಇವರಿಂದ ಕೊಲೆಯಾದ ಆಟೋ ಚಾಲಕ ಸಯ್ಯದ್ ಆರೀಫ್ ಪಾಷಾ, ಬಂಧಿತ ಆರೋಪಿ ಸೈಯದ್ ಸಿಕಂದರ್ ಪತ್ನಿ ಜೊತೆ ಅಕ್ರಮ ಸಂಬಂಧ ಹೊಂದಿದ್ದ ಎನ್ನಲಾಗಿದೆ. ಈ ವಿಚಾರ ತಿಳಿದು ಹಲವು ಬಾರಿ ಸಯ್ಯದ್ ಸಿಕಂದರ್, ಸೈಯದ್ ಆರೀಫ್ ಪಾಷಾಗೆ ಬುದ್ಧಿವಾದ ಹೇಳಿದ್ದರೂ ಪ್ರಯೋಜನವಾಗಿರಲಿಲ್ಲ. ಇದರಿಂದ ಅಸಮಾಧಾನಗೊಂಡಿದ್ದ ಸೈಯದ್ ಸಿಕಂದರ್ ತನ್ನ ನಾಲ್ವರು ಸಹಚರರೊಂದಿಗೆ ಸಂಚು ರೂಪಿಸಿ, ಶಿವನಸಮುದ್ರದಲ್ಲಿರುವ ದರ್ಗಾಗೆ ಹೋಗಿಬರುವುದಾಗಿ ಸೈಯದ್ ಆರೀಫ್ ಪಾಷಾನನ್ನು ಮೇ 31ರಂದು ಕರೆದು ಕೊಂಡು ಬಂದಿದ್ದರು. ಅಲ್ಲೇ ಮದ್ಯಗೋಷ್ಠಿ ನಡೆಸಿ, ನಶೆಯಲ್ಲಿದ್ದ ಸೈಯದ್ ಆರೀಫ್ ಪಾಷಾನನ್ನು ಕಲ್ಲಿನಿಂದ ಜಜ್ಜಿ ಹತ್ಯೆಗೈದು ಶವವನ್ನು ದರ್ಗಾ ಹಿಂಭಾಗ ಹಾಕಿ ಪರಾರಿಯಾಗಿದ್ದರು.

ಪ್ರಕರಣದ ಬೆನ್ನತ್ತಿದ ತಂಡ ಖಚಿತ ಮಾಹಿತಿ ಮೇರೆಗೆ ಐವರು ಆರೋಪಿಗಳನ್ನು ರಾಮನಗರದ ಟೌನ್ ಸರ್ಕಲ್ ಬಳಿ ಇರುವ ಬಾರ್ ಬಳಿ ಬಂಧಿಸಿ, ತೀವ್ರ ವಿಚಾರಣೆಗೊಳಪಡಿಸಿದಾಗ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ.

ಕಾರ್ಯಾಚರಣೆಯಲ್ಲಿ ಮುಖ್ಯಪೇದೆಗಳಾದ ನಾಗರಾಜು, ಗುರುಸ್ವಾಮಿ, ಲಿಂಗರಾಜು, ಎಂ.ಮಹೇಶ್, ರಘು, ಶಿವಕುಮಾರ್, ಹೆಚ್.ಜಿ ರವಿ, ಬಸವರಾಜು, ಮುತ್ತಪ್ಪ ತಮ್ಮಣಗೋಳ್, ಮಧು, ದ್ವಾರಕೇಶ್, ಶಿವಕುಮಾರ, ವಿರೇಂದ್ರ, ಮಾಯಪ್ಪ, ಅನಿಲ್‌ಕುಮಾರ್, ಮಂಜಪ್ಪ ಕುಮಾರ, ಪಡಿಯಪ್ಪ ಗೋಕಾವಿ, ಚಾಲಕ ಮುರುಗೇಶ, ರಾಜಣ್ಣ, ಶಂಕರ ಹಾಗೂ ಅಪರಾಧ ವಿಚಕ್ಷಣಾ ದಳದ ಸಿಪಿಐ, ಮಹದೇವಶೆಟ್ಟಿ, ಸಿಬ್ಬಂದಿ ಶಂಕರರಾಜು, ವೆಂಕಟೇಶ್, ಮೈಸೂರು ಅಪರಾಧ ದಳದ ಮುಖ್ಯಪೇದೆ ವಂಸತಕುಮಾರ್, ರಾಮನಗರ ಅಪರಾಧ ವಿಭಾಗದ ಶರತ್, ಮುನಿರಾಜು ಪಾಲ್ಗೊಂಡಿದ್ದು, ಇವರಿಗೆ ಪ್ರಶಸ್ತಿ ಹಾಗೂ ನಗದು ಬಹುಮಾನಕ್ಕೆ ಇಲಾಖೆಗೆ ಶಿಫಾರಸು ಮಾಡಲಾಗುವುದು ಎಂದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಾಹಿತಿ ನೀಡಿದರು.

ಇಬ್ಬರು ಬೈಕ್ ಕಳ್ಳರ ಬಂಧನ

ಕೊಳ್ಳೇಗಾಲ: ಇಬ್ಬರು ಬೈಕ್ ಕಳ್ಳರ ಬಂಧಿಸುವಲ್ಲಿ ಅಪರಾಧ ವಿಭಾಗದ ಕೊಳ್ಳೇಗಾಲ ಗ್ರಾಮಾಂತರ ಪೊಲೀಸರು ಯಶಸ್ವಿಯಾಗಿದ್ದಾರೆ ಎಂದು ಎಸ್ಪಿ ಶಿವಕುಮಾರ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜನಗರ ತಾಲೂಕಿನ ಬಂಡಳ್ಳಿಯ ಸಂಜಯ್, ಮೈಸೂರು ಇಲವಾಲದ ರವಿಕುಮಾರ್ ಬಂಧಿತ ಆರೋಪಿಗಳಾಗಿದ್ದು, ಇವರಿಂದ 3.10 ಲಕ್ಷ ಮೌಲ್ಯದ 2 ಬೈಕ್ ಅನ್ನು ವಶಕ್ಕೆ ಪಡೆಯಲಾಗಿದೆ. ನಕಲಿ ನಂಬರ್ ಪ್ಲೇಟ್ ಬಳಸಿ ಆರೋಪಿಗಳು ಬೈಕ್‌ನಲ್ಲಿ ತೆರಳುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಸಿಕ್ಕಿಬಿದ್ದಿದ್ದಾರೆ. ಬಳಿಕ ವಿವಿಧೆಡೆ ಕಳುವಾಗಿದ್ದ 2 ಬೈಕ್‌ಗಳನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದು, ಯಶಸ್ವಿ ಕಾರ್ಯಾಚರಣೆ ನಡೆಸಿದ ಪೊಲೀಸರನ್ನು ಇಲಾಖೆ ಅಭಿನಂದಿಸಲಿದೆ ಎಂದು ಎಸ್ಪಿ ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಯಜಮಾನಿ : ಸರೋಜಾ ಕರೆಂಟ್ ಬರೋವರೆಗೂ ಹಾಗೇ ಅಲುಗಾಡದೆ ನಿಂತಿರು... ಹುಷಾರು... ಜಾರಿ ಬಿದ್ದೀಯಾ...?

ಕೆಲಸದಾಕೆ : ನೀವೇನೂ ಚಿಂತೆ ಮಾಡಬೇಡಿ ಅಮ್ಮಾವ್ರೆ... ಯಜಮಾನರು ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ.

ಮೈಸೂರು ಮಿತ್ರ
ಸೋಮವಾರ, 13 ಜೂನ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

"ಸಾಧ್ಯವಾದರೆ ಸಹಾಯ ಮಾಡಿ, ಇಲ್ಲದಿದ್ದರೆ ಕೈ ಕಟ್ಟಿಕೊಂಡು ಸುಮ್ಮನೆ ನಡೆಯುವುದನ್ನು ನೋಡುತ್ತೀರಿ. ನಿಮಗೆ ಮಾಡಲಾಗದಿದ್ದರೆ ನೋಯಿಸಲು ಪ್ರಯತ್ನಿಸದಿರಿ"

– ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಚೇಳಿಗೆ ಪಾರುಪತ್ಯ ಕೊಟ್ಟ ಹಾಗೆ.

ನಿಮ್ಮ ಪತ್ರಗಳು

ನೇರಳೆ, ಸುತ್ತಮುತ್ತಲಿನ ಗ್ರಾಮಸ್ಥರ ಬವಣೆ

ಮಾನ್ಯರೆ,



ಮೈಸೂರು ಜಿಲ್ಲೆ, ನಂಜನಗೂಡು ತಾಲೂಕು, ಕೌಲಂದೆ ಹೋಬಳಿ ನೇರಳೆಗೆ ತೆರಳುವ ಮಾರ್ಗದ ರಸ್ತೆ ತೀರಾ ಅಧ್ವಾನದಿಂದ ಕೂಡಿದ್ದು, ಸುತ್ತಮುತ್ತಲಿನ ಗ್ರಾಮಸ್ಥರು ಪರದಾಡುವಂತಾಗಿದೆ.

ಚಾಮರಾಜನಗರ ಮುಖ್ಯ ರಸ್ತೆ ಉತ್ತಮ ರೀತಿಯಲ್ಲಿ ಕೂಡಿದ್ದು, ಬದನವಾಳು ಮತ್ತು ಬಸವಟ್ಟಿಗೆ ಮಾರ್ಗವಾಗಿ ನೇರಳೆಗೆ ತೆರಳುವ ರಸ್ತೆಯೂ ಸಂಪೂರ್ಣವಾಗಿ ಹದಗೆಟ್ಟಿದ್ದು, ವಾಹನ ಸವಾರರು ಮತ್ತು ಪಾದಚಾರಿಗಳು ಭಯದಲ್ಲಿ ಓಡಾಡುವಂತಾಗಿದೆ.

ಅದರಲ್ಲೂ ಬಸವಟ್ಟಿಗೆಯಿಂದ ನೇರಳೆಗೆ ಹೋಗುವವರೆಗೂ ರಸ್ತೆಯೂ ಹಳ್ಳ-ಕೊಳ್ಳಗಳಿಂದ ಕೂಡಿದೆ. ಇಲ್ಲಿ ರಸ್ತೆಯನ್ನು ಹುಡುಕಬೇಕಾಗಿದೆ. ಏಕೆಂದರೆ ಇಲ್ಲಿ ಬರೀ ಗುಂಡಿ ಗಳೇ ತುಂಬಿವೆ. ವಾಹನ ಸವಾರರು ಕೆಲವೊಮ್ಮೆ ಬಿದ್ದು, ಗಾಯ ಮಾಡಿಕೊಂಡಿದ್ದು ಉಂಟು, ಈ ಭಾಗದ ಜನಪ್ರತಿನಿಧಿಗಳು ನೇರಳೆ ಮತ್ತು ಸುತ್ತಮುತ್ತಲಿನ ಗ್ರಾಮವನ್ನು ಸಂಪೂರ್ಣವಾಗಿ ಕಡೆಗಣಿಸಿರುವುದೇ ಇದಕ್ಕೆ ಕಾರಣವಾಗಿದೆ.

ಸ್ಥಳೀಯ ಜನಪ್ರತಿನಿಧಿಗಳ ಮನವಿಗೂ ಅಧಿಕಾರಿಗಳು ಮತ್ತು ನಂಜನಗೂಡು ಮತ್ತು ಮೈಸೂರು ಜಿಲ್ಲೆಯ ಜನಪ್ರತಿನಿಧಿಗಳು ಕ್ಯಾರೇ ಎನ್ನುತ್ತಿಲ್ಲ. ನಮ್ಮ ಕಷ್ಟವನ್ನು ಯಾರ ಬಳಿ ಹೇಳಿಕೊಳ್ಳಬೇಕು ಎಂದು ಗ್ರಾಮಸ್ಥರು ಚಿಂತಾಕ್ರಾಂತರಾಗಿದ್ದಾರೆ.

ಇನ್ನು, ನೇರಳೆ ಗ್ರಾಮಕ್ಕೆ ತೆರಳುವ ರಸ್ತೆಗಳಲ್ಲಿ ಬೀದಿ ದೀಪಗಳು ಸಹ ಬೆಳಗುತ್ತಿಲ್ಲ. ಕಗ್ಗತ್ತಲೆಯಲ್ಲಿ ಈ ರಸ್ತೆಗಳಲ್ಲಿ ಹೇಗೆ ಓಡಾಡಬಹುದು ಎಂದು ನೀವೇ ಊಹಿಸಿಕೊಳ್ಳಿ. ಚುನಾವಣೆ ವೇಳೆ ಮಾತ್ರ ಇಂತಹ ಗ್ರಾಮಗಳ ಬಗ್ಗೆ ಒಲವು ವ್ಯಕ್ತಪಡಿಸಿ ಭರವಸೆಗಳ ಮಹಾಪೂರವನ್ನೇ ಹರಿಸುವ ಜನಪ್ರತಿನಿಧಿಗಳು ಗೆದ್ದ ನಂತರ ನೀಡಿದ ಭರವಸೆಗಳನ್ನು ಮರೆತುಬಿಡುತ್ತಾರೆ. ಇನ್ನಾದರೂ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಈ ಗ್ರಾಮಗಳ ರಸ್ತೆ ಮತ್ತು ಲೈಟುಗಳ ಬಗ್ಗೆ ಗಮನಹರಿಸಬೇಕು ಎಂದು ಕೋರುತ್ತೇವೆ.

– ನೊಂದ ಗ್ರಾಮಸ್ಥರು, ನೇರಳೆ, ನಂ.ಗೂಡು ತಾಲೂಕು.

ಅಪಘಾತ ವಲಯ ಎಂದು ಗುರುತಿಸಿ

ಮಾನ್ಯರೆ,

ಮಡಿಕೇರಿ–ಕುಶಾಲನಗರ ಹೆದ್ದಾರಿಯಲ್ಲಿ ಅಪಘಾತಗಳ ಸಂಖ್ಯೆ ಮಿತಿ ಮೀರಿದೆ. ಪ್ರತಿದಿನ ಸಾವು ನೋವುಗಳೂ ಹೆಚ್ಚಾಗುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿ ಗಳು ಕ್ರಮ ಕೈಗೊಳ್ಳಬೇಕಿದೆ.

ಮಡಿಕೇರಿ–ಕುಶಾಲನಗರ ರಾಷ್ಟ್ರೀಯ ಹೆದ್ದಾರಿ 275ರಲ್ಲಿ ವ್ಯಾಪ್ತಿಯಲ್ಲಿ ಅಪಘಾತಗಳು ಸಂಭವಿಸಿ, ಸಾವು–ನೋವುಗಳೊಂದಿಗೆ ಸಾರ್ವಜನಿಕ ಆಸ್ತಿಗೂ ಹಾನಿಯಾಗುತ್ತಿದೆ. ಆದ್ದರಿಂದ ಈ ವ್ಯಾಪ್ತಿಯನ್ನು ಅಪಘಾತ ವಲಯ ಎಂದು ಗುರುತಿಸಿ, ಬ್ಯಾರಿಕೇಡ್, ವೇಗ ನಿಯಂತ್ರಕ, ರಸ್ತೆ ಬದಿಯಲ್ಲಿ ಎಚ್ಚರಿಕೆಯ ಸೈನ್‌ಬೋರ್ಡ್‌ಗಳನ್ನು ಅಳವಡಿಸಲು ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕಿದೆ.

– ಪವನ್ ಪೆಮ್ಮಯ್ಯ, ಅಧ್ಯಕ್ಷ, ಕೊಡಗು ರಕ್ಷಣಾ ವೇದಿಕೆ.

ಸ್ಥಗಿತಗೊಂಡಿರುವ ನಗರ ಸಾರಿಗೆ ಬಸ್ಸುಗಳ ಸಂಚಾರ ಪುನರಾರಂಭಿಸಿ

ಮಾನ್ಯರೆ,

ಪ್ರಸ್ತುತ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ, ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳು ಪೂರ್ಣ ಪ್ರಮಾಣದಲ್ಲಿ ಆರಂಭವಾಗಿವೆ. ಆದರೆ ಬಸ್ಸುಗಳ ಕೊರತೆಯಿಂದಾಗಿ ವಿದ್ಯಾರ್ಥಿಗಳು ನಿಗದಿತ ಸಮಯಕ್ಕೆ ಶಾಲಾ–ಕಾಲೇಜುಗಳಿಗೆ ತಲುಪಲು ಬಹಳ ತೊಂದರೆಯಾಗುತ್ತಿದೆ. ಇದರೊಂದಿಗೆ ಸಾರ್ವಜನಿಕರಿಗೂ ಅನಾನುಕೂಲವಾಗಿದೆ.

ಕುವೆಂಪು ನಗರ ಘಟಕಕ್ಕೆ ಸೇರಿದ ನಗರ ಸಾರಿಗೆ ಬಸ್ಸುಗಳಾದ ಜೆ.ಪಿ.ನಗರ ಕೊನೆಯ ನಿಲ್ದಾಣದಿಂದ ಚಾಮುಂಡಿಪುರಂ, ರಾಮಸ್ವಾಮಿ ವೃತ್ತ, ದಾಸಪ್ಪ ವೃತ್ತ, ಒಂಟಿಕೊಪ್ಪಲು ಮಾರ್ಗವಾಗಿ ಎಲ್ ಅಂಡ್ ಟಿಗೆ ತೆರಳುತ್ತಿದ್ದ ಮಾರ್ಗ ಸಂಖ್ಯೆ 10ಎ, ಜೆ.ಪಿ.ನಗರ ಕೊನೆಯ ನಿಲ್ದಾಣದಿಂದ ಚಾಮುಂಡಿಪುರಂ, ರಾಮಸ್ವಾಮಿ ವೃತ್ತ, ಕೆ.ಆರ್.ಆಸ್ಪತ್ರೆ ಮಾರ್ಗವಾಗಿ ನಗರ ಬಸ್ ನಿಲ್ದಾಣಕ್ಕೆ ತೆರಳುತ್ತಿದ್ದ ಮಾರ್ಗ ಸಂಖ್ಯೆ 11ಆರ್, ನಗರ ಬಸ್ ನಿಲ್ದಾಣದಿಂದ ವರ್ತುಲ ರಸ್ತೆ ಮೂಲಕ ಗೆಜ್ಜಗಳ್ಳಿಗೆ ತೆರಳುತ್ತಿದ್ದ ಮಾರ್ಗ ಸಂಖ್ಯೆ 11 ಆರ್‌ಜಿ ಮತ್ತು ಜೆ.ಪಿ.ನಗರ ಕೊನೇ ನಿಲ್ದಾಣದಿಂದ ಅಶೋಕ ವೃತ್ತದ (ಬಲ್ಲಾಳ್ ವೃತ್ತ) ಮಾರ್ಗವಾಗಿ ವಿವೇಕಾನಂದ ನಗರಕ್ಕೆ ತೆರಳುತ್ತಿದ್ದ ಮಾರ್ಗ ಸಂಖ್ಯೆ 62 ಆರ್‌ಜೆ ಮತ್ತು ಸಾತಗಳ್ಳಿ ಘಟಕದ ಮಾರ್ಗಸಂಖ್ಯೆ 11 ಆರ್ ಬಹಳ ಹಿಂದೆಯೇ ಸ್ಥಗಿತವಾಗಿದ್ದು, ಇದುವರೆವಿಗೂ ಸಂಚಾರ ಆರಂಭಿಸಿಲ್ಲ.

ಬೆಳಗಿನ ಸಮಯದಲ್ಲಿ ಗೊಬ್ಬಳಿಮರ ನಿಲ್ದಾಣದಲ್ಲಿ ಬಹಳ ಜನದಟ್ಟಣೆ ಇರುತ್ತದೆ. ಕೆಲವು ಬಸ್ಸುಗಳು ಜೆ.ಪಿ.ನಗರ ಕೊನೆಯ ನಿಲ್ದಾಣದಿಂದ ಭರ್ತಿಯಾಗಿ ಬರುವ ಕಾರಣ ಗೊಬ್ಬಳಿಮರ ಬಸ್ ನಿಲ್ದಾಣದಲ್ಲಿ ನಿಲುಗಡೆ ನೀಡುತ್ತಿಲ್ಲ. ಇದರಿಂದಾಗಿ ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತಿದೆ.

ಸಂಬಂಧಪಟ್ಟ ನಗರ ಸಾರಿಗೆ ಅಧಿಕಾರಿಗಳು ಈಗಲಾದರೂ ಸಮಸ್ಯೆಯ ಗಂಭೀರತೆಯನ್ನು ಅರಿತು ಆದಷ್ಟು ಶೀಘ್ರ ಸ್ಥಗಿತವಾಗಿರುವ ಬಸ್ಸುಗಳನ್ನು ಮರು ಕಾರ್ಯಾಚರಣೆಗೊಳಿಸಬೇಕು ಮತ್ತು ಬಸ್ಸುಗಳ ಆಗಮನದ ಬಗ್ಗೆ ಮಾಹಿತಿ ನೀಡುವ ಐ.ಟಿ.ಎಸ್. ಫಲಕವನ್ನು ಚಾಲನೆಗೊಳಿಸಬೇಕೆಂದು ಸಾರ್ವಜನಿಕರ ಪರವಾಗಿ ಕಳಕಳಿಯಿಂದ ಕೋರುತ್ತೇನೆ.

– ಪರಶಿವಮೂರ್ತಿ, ಮೈಸೂರು.

ನಗರ ಸಾರಿಗೆ ಬಸ್ ಚಾಲಕರಲ್ಲಿ ಮನವಿ

ಮಾನ್ಯರೆ,

ಇತ್ತೀಚೆಗೆ ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ (ಮಾರ್ಗ ಸಂಖ್ಯೆ 307) ಬೆಳಗ್ಗೆ 11 ಗಂಟೆಗೆ ಖಾಲಿ ಬಸ್ ಸಂಚರಿಸುತ್ತಿತ್ತು. ರಾಮಸ್ವಾಮಿ ವೃತ್ತದ ಟ್ರಾಫಿಕ್ ಸಿಗ್ನಲ್ ಬಳಿ ಬಸ್‌ನಲ್ಲಿದ್ದ ಪ್ರಯಾಣಿಕರು ಬಸ್ಸಿನಿಂದ ಇಳಿಯಲು ಪ್ರಯತ್ನಿಸಿದರು. ಆಗ ಹಿಂದಿನಿಂದ ರಭಸವಾಗಿ ಬಂದ ಬಸ್ ಕೂದಲೆಳೆಯ ಅಂತರದಲ್ಲಿ ಆ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾದರು. ಒಂದು ವೇಳೆ ಬಸ್ಸಿನ ಚಾಲಕ ವಾಹನದ ಬಾಗಿಲನ್ನು ಬಂದ್ ಮಾಡಿದ್ದರೆ ಈ ರೀತಿ ಘಟನೆ ನಡೆಯುತ್ತಿರಲಿಲ್ಲ. ಆದ್ದರಿಂದ ನಾನು ಎಲ್ಲಾ ಬಸ್ ಚಾಲಕರಿಗೆ ಸಿಗ್ನಲ್‌ಗಳಲ್ಲಿ ಬಾಗಿಲನ್ನು ಮುಚ್ಚಿ ಪ್ರಯಾಣಿಕರ ಜೀವ ರಕ್ಷಿಸಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

– ಮಹಾರಾಣಿ ಕಾಲೇಜು ವಿದ್ಯಾರ್ಥಿನಿಯರು, ಮೈಸೂರು.

ಇತಿಹಾಸದ ಪುಟಗಳು



ಪ್ರೊ. ಎ.ವಿ. ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ.

ಮೂವರು ಕಲಾವಿದರು



ಎಂ. ಬಾಲಮುರಳಿಕೃಷ್ಣ



ಟಿ. ಬಾಲಸರಸ್ವತಿ



ಜಿ.ಎನ್. ಬಾಲಸುಬ್ರಹ್ಮಣ್ಯಂ

ಮೊದಲನೆಯವರೇ ಮಂಗಳಂ ಪಲ್ಲಿ ಬಾಲಮುರಳಿ ಕೃಷ್ಣ ಅವರು. ಇವರು ಆಂಧ್ರಪ್ರದೇಶದ **ಶಂಕರಗುಪ್ತಂ** ಎಂಬ ಹಳ್ಳಿಯಲ್ಲಿ 6–7–1930ರಲ್ಲಿ ಜನಿಸಿದರು. ಇವರ ವಂಶವೇ ಸಂಗೀತಗಾರರದ್ದು. ಇವರ ತಂದೆಯವರು ಮಂಗಳಂ ಪಲ್ಲಿ ಪಟ್ಟಾಭಿರಾಯಯ್ಯ ಇವರು ಕೊಳಲು ನುಡಿಸುವುದರಲ್ಲಿ ನಿಷ್ಣಾತರಾಗಿದ್ದರು. ಇವರ ತಾಯಿ ಸೂರ್ಯಕಾಂತಮ್ಮನವರು ವೀಣಾ ವಿದುಷಿಯೂ ಆಗಿದ್ದರು. ಇವರ ತಂದೆಯವರು ತ್ಯಾಗರಾಜಸ್ವಾಮಿಯ ಭಕ್ತರು. ಬಾಲಮುರಳೀಕೃಷ್ಣರಿಗೆ ಬಾಲ್ಯದಿಂದಲೇ ಸಂಗೀತದತ್ತ ಒಲವಿದ್ದಿತು. ಬಾಲಮುರಳಿ ತಮ್ಮ ಪ್ರಯತ್ನದಿಂದ **ಪಿಟೀಲು, ಮಯೋಲಿನ್, ವೀಣೆ** ಹಾಗೂ **ಖಂಜಾರ** ವಾದನದಲ್ಲೂ ಪರಿಣತಿ ಪಡೆದರು. ಬಾಲಮುರಳಿಯವರ ಮೊದಲ ಸಂಗೀತ ಕಚೇರಿಯು ಮದರಾಸು ಕೇಂದ್ರದಿಂದ 1939ರಲ್ಲಿ ಪ್ರಸಾರವಾಯಿತು. ಇವರು 1941ರಲ್ಲಿ ತಿರುವಯ್ಯೂರಿನಲ್ಲಿ ನಡೆದ ತ್ಯಾಗರಾಜ ಸ್ವಾಮಿಗಳ ಆರಾಧನಾ ಮಹೋತ್ಸವದಲ್ಲಿ ಕೆಲವು ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿದಾಗ ಎಲ್ಲರ ಗಮನವೂ ಇವರತ್ತ ಸೆಳೆಯಿತು.

ಇವರು 1944ರಲ್ಲಿ ಅರಿಯಾಕುಡಿ ರಾಮಾನುಜೈಂಗಾರ್ಯರಿಗೆ ಪಿಟೀಲು ನುಡಿಸಿದರು. ನಂತರ ಬಾಲಮುರಳಿಯವರ ಗಾಯನವು ವಿಜಯವಾಡ, ಹೈದರಾಬಾದ್ ಹಾಗೂ ಮದರಾಸ್ ಬಾನುಲಿ ಕೇಂದ್ರಗಳಲ್ಲಿ ಪ್ರಸಾರವಾದುವು. ವಿಜಯವಾಡ ಕೇಂದ್ರದಿಂದ ಬಾಲಮುರಳಿಯವರ ನಿರ್ದೇಶನದಲ್ಲಿ ಪ್ರಸಾರವಾಗುತ್ತಿದ್ದ ಭಕ್ತಿ ರಂಜನಿ ಕಾರ್ಯಕ್ರಮಗಳು ಬಹಳ ಜನಪ್ರಿಯತೆ ಗಳಿಸಿದವು. ಇವರು **ಭಕ್ತ ಪ್ರಹ್ಲಾದ** ನಾಟಕಕ್ಕೆ ಸುಶ್ರಾವ್ಯವಾದ ಗಾಯನವನ್ನು ಒದಗಿಸಿದರು. ಇವರು ಸ್ವಂತ ಗಾಯನ ಶೈಲಿಯನ್ನು ರೂಪಿಸಿಕೊಂಡು ಜನಪ್ರಿಯತೆಯನ್ನು ಗಳಿಸಿದ್ದಾರೆ. ಇವರು ವಿಜಯವಾಡ ಸರ್ಕಾರಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅಷ್ಟೇ ಅಲ್ಲದೆ, ಇವರು ತಿರುವಯ್ಯೂರಿನ **ತ್ಯಾಗಬ್ರಹ್ಮ ಸಭೆಯ** ಕಾರ್ಯದರ್ಶಿಯಾಗಿದ್ದರು. ತಿರುವಯ್ಯೂರಿನ ತ್ಯಾಗರಾಜ ಸ್ವಾಮಿಗಳ ದೇವಾಲಯದ ಟ್ರಸ್ಟಿಯಾಗಿ ಉತ್ತಮ ಕಾರ್ಯವನ್ನು ನಿರ್ವಹಿಸಿದರು. ಇವರು **ಮುರಳೀರವಳಿ** ಕಲಾ ಕೇಂದ್ರದ ಅಧ್ಯಕ್ಷರಾಗಿದ್ದು, ಯುವ ಕಲಾವಿದರನ್ನು ಪ್ರೋತ್ಸಾಹಿಸುತ್ತಿದ್ದರು. ಇವರು ಅನೇಕ ಪ್ರಯೋಗಗಳನ್ನು ಮಾಡಿ ಹಲವಾರು ಹೊಸ ರಾಗ ಮತ್ತು ತಾಳಗಳನ್ನು ರೂಪಿಸಿದ್ದಾರೆ. ಇವುಗಳಲ್ಲಿ ನಾಲ್ಕೇ ಸ್ವರಗಳುಳ್ಳ **ಮಹತಿ** ಹಾಗೂ **ಸುಮುಖ** ರಾಗಗಳು ಹಾಗೂ **ಓಂಕಾರಿ, ಸರ್ವಶ್ರೀ** ರಾಗಗಳು, **ವಿವಾದಿ ಮೇಳಗಳು** ಇವರ ಬಗ್ಗೆ ಸಂಗೀತ ಕ್ಷೇತ್ರದಲ್ಲಿ ವಿವಾದಗಳಿಗೆ ಅವಕಾಶ ಮಾಡಿಕೊಟ್ಟಿತು. ಇವರು ಅನೇಕ ಸಂಗೀತ ಕಾರ್ಯಕ್ರಮಗಳನ್ನು ದೂರದರ್ಶನದಲ್ಲೂ ಕೊಟ್ಟಿದ್ದಾರೆ.

ಮೈಸೂರು, ಬೆಂಗಳೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳು ಇವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿವೆ. ಕೇಂದ್ರ ನಾಟಕ ಅಕಾಡೆಮಿಯ ಸನ್ಮಾನ, ಕೇಂದ್ರ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ, ಮುಂಬಯಿನ **ಸುರ್ ಸಿಂಗಾರ್ ಸಂಸದ್** ಪ್ರಶಸ್ತಿ, **ಗಜವಾಹನ ಮೆರವಣಿಗೆಯ** ಗೌರವ ಹಾಗೂ ಚಲನಚಿತ್ರದ ಹಂಸಗೀತೆ ಕನ್ನಡ ಚಿತ್ರದ ಗೌರವ, ಹಾಗೂ ಹಿನ್ನೆಲೆಯ ಗಾಯಕರೆಂದು ಭಾರತ ಸರ್ಕಾರದಿಂದ ಪ್ರಶಸ್ತಿಗಳನ್ನು ಬಾಲಮುರಳಿಕೃಷ್ಣ ಪಡೆದಿದ್ದಾರೆ. ಇವುಗಳ ಜೊತೆಗೆ ಮದರಾಸು ಮ್ಯೂಸಿಕ್ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಹಾಗೂ **ಸಂಗೀತ ಕಲಾನಿಧಿ** ಪ್ರಶಸ್ತಿಯನ್ನು ಪಡೆದಿದ್ದಾರೆ. ಆಂಧ್ರಪ್ರದೇಶ ಮತ್ತು ತಮಿಳುನಾಡು ಸರ್ಕಾರಗಳಿಂದ ಹಾಗೂ **ತಿರುಮಲೆ ತಿರುಪತಿ, ಅನ್ನಾವರಂ, ದುರ್ಗಾ ಮಲ್ಲೇಶ್ವರಂ** ಮುಂತಾದ ದೇವಾಲಯಗಳಿಂದ ಆಸ್ಥಾನ ವಿದ್ವಾಂಸರಾಗಿ ನೇಮಿಸಲ್ಪಟ್ಟಿದ್ದಾರೆ. ಕೇವಲ ಹದಿನಾಲ್ಕನೆಯ ವಯಸ್ಸಿನಲ್ಲಿ ಎಪ್ಪತ್ತೆರಡು ಮೇಳ ರಾಗಗಳನ್ನೊಳಗೊಂಡ ಕೃತಿ ಮಂಜರಿ ಎಂಬ ಪುಸ್ತಕವನ್ನು ಬರೆದಿದ್ದಾರೆ. ಸ್ವಂತ ರಚನೆಯ ತಿಲ್ಲಾನಗಳು ಹಾಗೂ ರಾಗಗಳ ಸ್ವರೂಪವನ್ನು ಸ್ಪಷ್ಟಪಡಿಸುವ ನಿಘಂಟು ಮುಂತಾದವುಗಳನ್ನು ಬರೆದಿದ್ದು, ತಮ್ಮ ಹುಟ್ಟೂರು ಮಂಗಳಂ ಪಲ್ಲಿಯಲ್ಲಿ ನಿಧನರಾದರು.

ಎರಡನೆಯವರೇ ಬಾಲಸರಸ್ವತಿಯವರು. ಇವರು 13–5–1918ರಲ್ಲಿ ತಂಜಾವೂರಿನಲ್ಲಿ ಹುಟ್ಟಿದರು. ತಮ್ಮ ಹತ್ತನೆಯ ವಯಸ್ಸಿನಲ್ಲಿಯೇ ಭರತನಾಟ್ಯ ಪ್ರವೀಣೆ ಎಂದು ಪ್ರಖ್ಯಾತರಾಗಿದ್ದರು. ಇವರು ನಾಟ್ಯ ಸಂಪ್ರದಾಯದಲ್ಲಿ ಒಂದು ಪರಂಪರೆಯ ಯುಗವನ್ನೇ ಸೃಷ್ಟಿ ಮಾಡಿದರು. ಇವರು **ಅಭಿನಯ ಸರಸ್ವತಿಯಾಗಿದ್ದುದು** ಮಾತ್ರವಲ್ಲದೆ ಪ್ರೇಕ್ಷಕರ ಮೇಲೆ ಗಾಢವಾದ ಪ್ರಭಾವ ಬೀರುತ್ತಿದ್ದರು. ಬಾಲಸರಸ್ವತಿ **ನಾಟ್ಯಾಚಾರ್ಯರ** ಕುಟುಂಬದಿಂದ ಬಂದ **ಅನರ್ಘ್ಯ ರತ್ನ**.

ಇವರ ಅಜ್ಜಿ **ಪಾಪಮ್ಮಾಳ್** ಎಂಬುವರು ತಂಜಾವೂರು ದೊರೆಗಳ ಆಸ್ಥಾನದಲ್ಲಿ ನೃತ್ಯ ಕಲಾವಿದೆಯಾಗಿದ್ದವರು. ಇವರ ತಾಯಿ **ಧನಮ್ಮಾಳ್ ವೀಣಾ ಪ್ರವೀಣೆ** ಎಂದು ಪ್ರಖ್ಯಾತರಾಗಿದ್ದರು. ಇಂತಹ ಕಲಾ ಸಂಸ್ಕೃತಿಯ ಮನೆತನದಲ್ಲಿ ಜನಿಸಿದ ಬಾಲಸರಸ್ವತಿ **ನೃತ್ಯಕ್ಕೇ** ಹುಟ್ಟಿದವರು ಎಂದು ಖ್ಯಾತಿ ಪಡೆದಿದ್ದರು. ಇವರು ತಮ್ಮ ಏಳನೆಯ ವಯಸ್ಸಿನಲ್ಲಿಯೇ **ಪಂಡನಲ್ಲೂರು ಕಂದಪ್ಪನ್** ಎಂಬ ಗುರುಗಳಿಂದ ನೃತ್ಯವನ್ನು ಕಲಿತುಕೊಂಡರು. ಎಂಟನೆಯ ವಯಸ್ಸಿನಲ್ಲಿ **ಕಾಂಚೀಪುರದ ಕಾಮಾಕ್ಷಿ ಅಮ್ಮಾಳ್** ದೇವಾಲಯದಲ್ಲಿ ಪ್ರಥಮ ಬಾರಿಗೆ ನೃತ್ಯ ಪ್ರದರ್ಶನ ನೀಡಿ ವಿದ್ವಜ್ಜನರನ್ನು ಬೆರಗುಗೊಳಿಸಿದವರು.

ತಾವು ಬದುಕಿದ್ದ ಅರವತ್ತು ವರ್ಷಗಳ ಕಾಲವೂ ಭರತನಾಟ್ಯ ಸಂಪ್ರದಾಯದ ಶ್ರೇಷ್ಠ ಪ್ರತಿನಿಧಿಯೆನಿಸಿಕೊಂಡರು. ಇವರ ಕೀರ್ತಿ ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿಯೂ ಹರಡಿದ್ದು, ಬಾಲಸರಸ್ವತಿಯವರಿಗೆ ಸಂದಿರುವ ಪುರಸ್ಕಾರಗಳಲ್ಲಿ ಮುಖ್ಯವಾದವುಗಳೆಂದು ಮದರಾಸು ಸಂಗೀತ **ಅಕ್ಯಾಡೆಮಿ ಗೌರವ**, 1955ರಲ್ಲಿ **ಕೇಂದ್ರ ಸಂಗೀತ ನಾಟಕ ಅಕ್ಯಾಡೆಮಿ** ಪ್ರಶಸ್ತಿ ಮತ್ತು 1964ರಲ್ಲಿ **ರವೀಂದ್ರ ಭಾರತಿ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್** ಪದವಿಗಳು. ಭಾರತ ಸರ್ಕಾರವು 1957ರಲ್ಲಿ **ಪದ್ಮಭೂಷಣ** ನೀಡಿ ಗೌರವಿಸಿತು ಮತ್ತು 1973ರಲ್ಲಿ **ಸಂಗೀತ ಅಕಾಡೆಮಿಯು ಸಂಗೀತ ಕಲಾನಿಧಿ** ಗೌರವ ನೀಡಿತು.

ಇವರು ಹನ್ನೆರಡು ಸಾರಿ ಅಮೆರಿದಲ್ಲಿ **ಕಲಾಯಾತ್ರೆ** ನಡೆಸಿ ನೃತ್ಯ ಪ್ರದರ್ಶನಗಳನ್ನು ನೀಡಿದರು. 1977ರಲ್ಲಿ ತಮ್ಮ ಪುತ್ರಿ ಲಕ್ಷ್ಮಿಯ ಜೊತೆಗೂಡಿ ಐದು ತಿಂಗಳುಗಳ ಕಾಲ, ಅಮೆರಿಕದ ಹದಿನೈದು ಸ್ಟೇಟ್ಸ್‌ಗಳಲ್ಲಿ ಸಂಚರಿಸಿ ಇಪ್ಪತ್ತು ನೃತ್ಯ ಪ್ರದರ್ಶನ ನೀಡಿದರು. ಅಮೆರಿಕನ್ನರಿಗೆ ಭಾರತದ ನೃತ್ಯದ ಪರಿಚಯವಿರಲಿಲ್ಲ. ಅಂತಹವರೂ ಕೂಡ ಇವರ ನಾಟ್ಯವನ್ನು ಮೆಚ್ಚಿಕೊಂಡರು. ಅನೇಕ ಅಮೆರಿಕನ್ನರು ಬಾಲಸರಸ್ವತಿಯವರಿಂದ ಪ್ರಭಾವಿತರಾಗಿ ಭಾರತದಿಂದ ನೃತ್ಯದಲ್ಲಿ ಪರಿಶ್ರಮವಿದ್ದವರನ್ನು ಕರೆಸಿಕೊಂಡು ನೃತ್ಯವನ್ನು ಕಲಿತರು. ಇಂತಹ ನೃತ್ಯ ಶಾಲೆಗಳು ಇಂದಿಗೂ ನೃತ್ಯವನ್ನು ಅಮೆರಿಕನ್ನರಿಗೆ ಕಲಿಸುತ್ತಿವೆ.

ಬಾಲಸರಸ್ವತಿಯವರು 1963ರಲ್ಲಿ ಬ್ರಿಟನ್ನಿನ **ಎಡಿನ್‌ಬರೋ** ಕಲಾಮಹೋತ್ಸವದಲ್ಲಿ ಪಾಲ್ಗೊಂಡು, ತಮ್ಮ ನೃತ್ಯ ಪ್ರದರ್ಶನಗಳಿಂದ ಇಡೀ ಯೂರೋಪಿನ ಗಮನವನ್ನು ಸೆಳೆದರು. ಅದರಲ್ಲೂ, **ಕೃಷ್ಣಾ ನೀ ಬೇಗನೇ ಬಾರೋ** ಎಂಬ ಪುರಂದರ ದಾಸರ ಕೀರ್ತನೆಗೆ ನೀಡಿದ ಅಭಿನಯದಿಂದ ಪಾಶ್ಚಾತ್ಯರನ್ನು ಚಕಿತಗೊಳಿಸಿತು. ಬಾಲಸರಸ್ವತಿಯವರ ಅಭಿನಯವನ್ನು ತೋರಿಸಲು, ಜಗತ್ತಿನ ಶ್ರೇಷ್ಠ ನಿರ್ದೇಶಕರೆಂದು ಪ್ರಸಿದ್ಧರಾಗಿದ್ದ **ಸತ್ಯಜಿತ್ ರೇ** ಅವರು ಬಾಲಸರಸ್ವತಿಯವರನ್ನು ಕುರಿತು ಅರ್ಧ ಗಂಟೆ ಕಾಲದ ವರ್ಣ ಚಿತ್ರವೊಂದನ್ನು ತಯಾರಿಸಿದ್ದಾರೆ.

ಈಗ ಇನ್ನೊಬ್ಬ ಶ್ರೇಷ್ಠ ಗಾಯಕರನ್ನು ಅಧ್ಯಯನ ಮಾಡಬಹುದು. ಅವರೇ ಜಿ.ಎನ್.ಬಾಲಸುಬ್ರಹ್ಮಣ್ಯಂ. ಇವರು 1910ರಲ್ಲಿ ಹುಟ್ಟಿದರು. ಇವರು ಕರ್ನಾಟಕ ಸಂಗೀತ ವಿದ್ವಾಂಸರು ಹಾಗೂ ವಾಗ್ಗೇಯಕಾರರು ಮತ್ತು ನವಶೈಲಿಯ ಪ್ರವರ್ತಕರು. ಇವರು **ಜಿ.ಎನ್.ಬಿ.** ಎಂದೇ ಪ್ರಸಿದ್ಧರಾಗಿದ್ದವರು. ಇವರ ತಂದೆಯವರು ಜಿ.ವಿ.ನಾರಾಯಣ ಸ್ವಾಮಿಯವರು ಮದ್ರಾಸಿನ ಸಮೀಪದಲ್ಲಿದ್ದ ತಿರುವಲ್ಲಿಕ್ಕೇಣಿಯ ಹಿಂದೂ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು.

ಇವರು ನಾರಾಯಣಸ್ವಾಮಿಯವರ ಪುತ್ರರಾಗಿ 6–6–1910ರಂದು ಜನಿಸಿದರು. ಸಂಗೀತ ಪರಿಸರದಲ್ಲಿ ಬೆಳೆದ ಜಿ.ಎನ್.ಬಿ.ಯವರಿಗೆ ಮನೆಯ ಪಕ್ಕದಲ್ಲಿ ವಾಸವಾಗಿದ್ದ ಪಿಟೀಲು ವಿದ್ವಾಂಸರಾಗಿದ್ದ **ಕರೂರು ಚಿನ್ನಸ್ವಾಮಿ ಅಯ್ಯರ್, ಬೂದನೂರು ಕೃಷ್ಣಮೂರ್ತಿ ಶಾಸ್ತ್ರಿ** ಮತ್ತು **ಪಲ್ಲಡಂ ಸಂಜೀವರಾವ್** ಮುಂತಾದವರ ಸಂಗೀತ ಕಚೇರಿಗಳನ್ನು ಕೇಳುವ ಅವಕಾಶ ದೊರಕಿತು. ಇವರ ತಂದೆ ನಾರಾಯಣಸ್ವಾಮಿಯವರು, ತಮ್ಮ ಮಗನಲ್ಲಿದ್ದ ಸಂಗೀತ ಪ್ರತಿಭೆಯನ್ನು ಗುರುತಿಸಿ, ಮನೆಯಲ್ಲಿಯೇ ಸಂಗೀತಾಭ್ಯಾಸಕ್ಕೆ ಅವಕಾಶ ಮಾಡಿಕೊಟ್ಟರು. ನಾಲ್ಕು ವರ್ಷಗಳ ನಂತರ ಇವರಿಗೆ ಪಟ್ನಮ್ ಸುಬ್ರಹ್ಮಣ್ಯಂ ಅವರ ಶಿಷ್ಯರಾಗಿದ್ದ ಗುರುಸ್ವಾಮಿ ಭಾಗವತರಲ್ಲಿಯೂ ಹಾಗೂ ತ್ಯಾಗರಾಜಸ್ವಾಮಿಗಳ ವಂಶಕ್ಕೆ ಸೇರಿದ್ದ ಸಂಗೀತ ಪಾಠಕ್ಕೆ ಅವಕಾಶವಾಯಿತು.

ಇವರು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ತಮಿಳು ಭಾಷೆಯ ಶಿಕ್ಷಣವನ್ನು ಪಡೆಯಲು ನಾರಾಯಣಸ್ವಾಮಿ ಸಹಕರಿಸಿದರು. ಕಾಲೇಜು ಶಿಕ್ಷಣದಲ್ಲಿ ಇವರು ಇಂಗ್ಲಿಷ್ ಲಿಟರೇಚರ್ ಆರಿಸಿಕೊಂಡು ಪ್ರೆಸಿಡೆನ್ಸಿ ಕಾಲೇಜಿನಿಂದ 1928ರಲ್ಲಿ ಇಂಗ್ಲಿಷ್ ಲಿಟರೇಚರ್‌ನಲ್ಲಿ ಬಿ.ಎ.ಆನರ್ಸ್ ಪದವಿಯನ್ನು ಪಡೆದರು. 1930ರಲ್ಲಿ ಅಣ್ಣಾಮಲೈ ವಿಶ್ವವಿದ್ಯಾನಿಲಯದಲ್ಲಿ ಸಂಗೀತ ಕಾಲೇಜು ಆರಂಭವಾದಾಗ ಎಂ.ಎ. ಪದವಿಯನ್ನು ಪಡೆದರು.

ಇವರ ತಂದೆಯವರಿಗೆ ತಮ್ಮ ಮಗನು ವಕೀಲನಾಗಬೇಕೆಂಬ ಆಸೆಯಿತ್ತು. ಆದರೆ ಅರಿಯಾಕುಡಿ ರಾಮಾನುಜ ಅಯ್ಯಂಗಾರ್ಯರ ಸಲಹೆಯ ಮೇರೆಗೆ, ಅವರ ಮಗ ಸಂಗೀತದಲ್ಲೇ ಮುಂದುವರಿಯಲು ಸಮ್ಮತಿಸಿದರು. ಆಗ ತಾನೇ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭವಾಗಿದ್ದ ಸಂಗೀತ ಡಿಪ್ಲೊಮಾ ತರಗತಿಗೆ ಸೇರಿ ಜಿ.ಎನ್.ಬಿ.ಯವರು ಫಸ್ಟ್ ರ‍್ಯಾಂಕ್‌ನಲ್ಲಿ ಉತ್ತೀರ್ಣರಾದರು.

ನಂತರ ಮದರಾಸಿನ ಕಪಾಲೀಶ್ವರ ದೇವಾಲಯದಲ್ಲಿ ಮುಸರಿಯವರ ಕಚೇರಿಯು ಏರ್ಪಾಡಾಗಿತ್ತು. ಎಷ್ಟು ಹೊತ್ತಾದರೂ ಅವರು ಸಭೆಗೆ ಬರಲೇ ಇಲ್ಲ. ಜನಗಳ ಆಶಯದಂತೆ ತ್ಯಾಗರಾಜ ಸ್ವಾಮಿಗಳಿಗೆ ಮನಸ್ಸಿನಲ್ಲಿಯೇ ವಂದಿಸಿ, ಜಿ.ಎನ್.ಬಿ.ಯವರು ತಮ್ಮ ಕಚೇರಿಯನ್ನು ಆರಂಭಿಸಿದರು. ಈ ಸಂಗೀತ ಕಚೇರಿಯಿಂದ ಜಿ.ಎನ್.ಬಿ.ಯವರು ತಮ್ಮ ಕೊನೆಯ ಉಸಿರು ಇರುವವರೆಗೂ ಸಂಗೀತ ಕಚೇರಿಗಳನ್ನು ನಡೆಸಿದರು. 1939ರಿಂದ 1941ರವರೆಗೆ ದಕ್ಷಿಣ ಭಾರತದಲ್ಲಿ ತಿರುವಾಂಕೂರು ಹಾಗೂ ಎಟ್ಟಿಯಾ ಪುರದ ಸಂಸ್ಥಾನಗಳ ಆಸ್ಥಾನ ವಿದ್ವಾಂಸರಾಗಿದ್ದರು. 1939ರಲ್ಲಿ ಮದರಾಸಿನ ಆಕಾಶವಾಣಿ ವಿಭಾಗದ ಹಾಗೂ ತಿರುವನಂತಪುರದ **ಸ್ವಾತಿ ತಿರುನಾಳ್ ಸಂಗೀತ** ಕಾಲೇಜಿನ ಪ್ರಾಂಶುಪಾಲರೂ ಹಾಗೂ 1960ರಲ್ಲಿ ಭಾರತ ಸರ್ಕಾರದ ರಾಷ್ಟ್ರ ಪ್ರಶಸ್ತಿಯನ್ನೂ ಪಡೆದರು. 1962ರಲ್ಲಿ ಮದ್ರಾಸ್ ಮ್ಯೂಸಿಕ್ ಅಕ್ಯಾಡೆಮಿಯಿಂದ **ಸಂಗೀತ ಕಲಾನಿಧಿ** ಪ್ರಶಸ್ತಿಯನ್ನೂ ಪಡೆದರು. **ಭಾಮಾ ವಿಜಯ, ಸತಿ ಅನಸೂಯಾ, ವಾಸವದತ್ತಾ, ರುಕ್ಮಾಂಗದಾ** ಮತ್ತು **ಶಕುಂತಲಾ** ಎಂಬ ನಾಟಕಗಳಲ್ಲಿ ಅಭಿನಯಿಸಿ ಇವರು ಪ್ರಖ್ಯಾತರಾದರು.

ಜಿ.ಎನ್.ಬಿ.ಯವರಿಗೆ ಹಿಂದೂಸ್ಥಾನೀ ಸಂಗೀತದಲ್ಲಿಯೂ ಆಸಕ್ತಿಯಿದ್ದಿತು. ಒಂದು ಸಾರಿ ಬಡಾ ಗುಲಾಂ ಅಲಿಖಾನರ ಗಾಯನವನ್ನು ಕೇಳಿ ತಮಗಾದ ಆನಂದವನ್ನು ತಡೆಯಲಾರದೆ, ಅಲಿಖಾನರಿಗೆ ಪೀತಾಂಬರವನ್ನು ಹೊದ್ದಿಸಿ ಜಿ.ಎನ್.ಬಿ.ಯವರು ಸಾಷ್ಟಾಂಗ ನಮಸ್ಕಾರ ಮಾಡಿದರು. ಜಿ.ಎನ್.ಬಿ.ಯವರು ಅಲಿಖಾನರು ತಂಗಿದ್ದ ಮನೆಗೆ ಹೋಗಿದ್ದಾಗ ಖಾನರು **ಆಂದೋಳಿಕಾ** ರಾಗವನ್ನು ಹಾಡಿದಾಗ ಜಿ.ಎನ್.ಬಿ.ಯವರು ಖಾನರ ಪಾದ ಮುಟ್ಟಿ ನಮಸ್ಕರಿಸಿದರು.

ಜಿ.ಎನ್.ಬಿ.ಯವರು ತ್ರಿಸ್ಥಾಯಿಯಲ್ಲೂ ಹಾಗೂ ತ್ರಿಕಾಲಗಳಲ್ಲೂ ಕೃತಿಗಳನ್ನು ಅದ್ಭುತವಾಗಿ ಹಾಡುತ್ತಿದ್ದರು. ತಮ್ಮ ಪ್ರತಿಯೊಂದು ಸಂಗೀತ ಕಚೇರಿಯಲ್ಲಿಯೂ ಉದಯೋನ್ಮುಖ ಕಲಾವಿದರು ಕಲಿಯಬೇಕು ಎಂದು ಜಿ.ಎನ್.ಬಿ. ಹೇಳುತ್ತಿದ್ದರು ಮತ್ತು ಯುವ ಕಲಾವಿದರಿಗೆ ಇದರಿಂದ ಪ್ರೋತ್ಸಾಹವೂ ದೊರಕುತ್ತಿದ್ದಿತು.

ಜಿ.ಎನ್.ಬಿ.ಯವರು ಶಕ್ತಿಯುತವಾದ ಹಾಗೂ ರಸವತ್ತಾದ ಮತ್ತು ಮೈನವಿರೇಳಿಸುವಂತೆ ಹಾಡುತ್ತಿದ್ದರು. **ರಾಗಾಲಾಪನೆಯಲ್ಲಿ** ಜಿ.ಎನ್.ಬಿ.ಗೆ ಸಮಾನರೇ ಇರಲಿಲ್ಲ. ಇನ್ನೊಬ್ಬರು ಸಂಗೀತಗಾರರಾದ ಟಿ.ವಿ.ಸುಬ್ಬರಾಯರು ಹೇಳುವಂತೆ **ಸಂಗೀತ ಕೃತಿಗಳನ್ನು ಬಳಪದ ಕಲ್ಲಿನಲ್ಲಿ ಕಡೆದಿಟ್ಟ ವಿಗ್ರಹಗಳಂತೆ** ಇವರು ಹಾಡುತ್ತಿದ್ದರು (ಮೆಲು ದನಿಯಲ್ಲಿ). ಇವರ ಕೃತಿಗಳಲ್ಲಿ ಮುಖ್ಯವಾದವುಗಳೆಂದರೆ **ಕಾಂಬೋಜಿ, ನಾರಾಯಣಿ ಹಾಗೂ ದೀಪಕ** ರಾಗಗಳು. ಜಿ.ಎನ್.ಬಿ.ಯವರ ಸ್ವರ ಪ್ರಸ್ತಾರದಲ್ಲಿ ಒಂದು ನವೀನತೆಯು ಕಾಣುತ್ತಿದ್ದಿತು. **ಸುಬ್ರಹ್ಮಣ್ಯಾಯ ನಮಸ್ತೆ** ಎಂಬ ಕೃತಿಯಲ್ಲಿ ಮನುಷ್ಯರ ತಾಪತ್ರಯಗಳನ್ನೂ, ಹಾಗೂ **ನಿಧಿಚಾಲ ಸುಖಮಾ** ಎಂಬ ಕೃತಿಯಲ್ಲಿ ತ್ಯಾಗರಾಜ ಸ್ವಾಮಿಗಳನ್ನು, ಇವರು ಮನಸಾರೆ ವಂದಿಸಿದ್ದಾರೆ. **ಮಾಳವಿ, ಆಂದೋಳಿಕಾ** ಮುಂದಾದ ರಾಗಗಳನ್ನು ಹಾಡುವಾಗ ವಿಸ್ತಾರವಾಗಿ ಹಾಡುತ್ತಿದ್ದುದು ಇವರ ಇನ್ನೊಂದು ವೈಶಿಷ್ಟ್ಯ.

ಇವರು ಹಾಡುತ್ತಿದ್ದ ರಾಧಾ ಸಮೇತ ಕೃಷ್ಣ ಕೃತಿಯು ಪ್ರತಿಯೊಂದು ಕಚೇರಿಯಲ್ಲೂ ಇರುತ್ತಿದ್ದಿತು. ಇವರಿಗೆ ತಮಿಳು, ಸಂಸ್ಕೃತ, ತೆಲುಗು ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ವಿಶೇಷವಾದ ಪಾಂಡಿತ್ಯವಿದ್ದಿತು. ಇದರಿಂದಾಗಿ ಇವರು ನಾಲ್ಕೂ ಭಾಷೆಗಳಲ್ಲಿ **ದೇವಿ, ಸುಬ್ರಹ್ಮಣ್ಯ, ಶ್ರೀರಾಮ** ಮತ್ತು **ಗಣಪತಿ** ಮುಂತಾದವರನ್ನು ಕುರಿತು ಹಲವು ಕೃತಿಗಳನ್ನು ವಿವಿಧ ರಾಗಗಳಲ್ಲಿ ರಚಿಸಿದ್ದಾರೆ. ಇವರು ರಚಿಸಿದ **ಗಾನಭಾಸ್ಕರ ಮಣಿ ಮಾಲೈ** ಇಂದಿಗೂ ಪ್ರಚಾರದಲ್ಲಿವೆ. **ಸದಾ ಪಾಲಯ, ರಂಜನಿ ನಿರಂಜನಿ, ಮಮಕುಲೇಶ್ವರಂ, ಪರಮ ಕೃಪಾಸಾಗರೀ, ಪರಾಙ್ಮುಖ ಮೇಲ** ಮುಂತಾದ ಬರೆದ ಕೃತಿಗಳು ಜನಪ್ರಿಯವಾಗಿವೆ. ಜಿ.ಎನ್.ಬಿ.ಯವರು ಸಂಗೀತ ವಿದ್ವಾಂಸರಲ್ಲಿರಬೇಕಾದ ಎಲ್ಲ ಗುಣಗಳನ್ನೂ ಹಾಗೂ ಶ್ರೇಷ್ಠತೆಯನ್ನು ಹೊಂದಿದ್ದರು. ತರುಣ ಪೀಳಿಗೆಯ ಸಂಗೀತಗಾರರು ಜಿ.ಎನ್.ಬಿ. ಅವರ ಶೈಲಿಯಿಂದ ಪ್ರಭಾವಿತರಾಗಿದ್ದಾರೆ. ಜಿ.ಎನ್.ಬಿ.ಯವರ ಶಿಷ್ಯ ವರ್ಗದಲ್ಲಿ ಮುಖ್ಯರಾದವರೆಂದರೆ ಎಂ.ಎಲ್. **ವಸಂತಕುಮಾರಿ, ಟಿ.ಆರ್.ಬಾಲಸುಬ್ರಹ್ಮಣ್ಯಂ, ಸೋಮೇಶ್ವರ ಬಾಬು, ಎಸ್.ಬಾಲಸುಬ್ರಹ್ಮಣ್ಯಂ, ಟಿ.ವಿ.ವಿಶ್ವನಾಥನ್, ಮಧುರೈ ಗಣೇಶನ್, ಎನ್.ಕಲ್ಯಾಣ ರಾಮನ್, ತಿರುಚ್ಚೂರು** ವಿ.ರಾಮಚಂದ್ರನ್ ಮತ್ತು **ಎಲ್.ಕೃಷ್ಣನ್** ಮುಂತಾದವರು ಪ್ರಮುಖರು.

ಜಿ.ಎನ್.ಬಿ.ಯವರು ತಿರುವಲ್ಲಿ ಕೇಣಿಯಲ್ಲಿ 1965ರಂದು ನಿಧನರಾದರು.


ಚಿರತೆ ದಾಳಿ: ಹಸು ಸಾವು

ಹನಗೋಡು, ಜೂ.12(ಮಹೇಶ್)– ಚಿರತೆ ದಾಳಿಯಿಂದ ಒಂದು ಹಸು ಸಾವನ್ನಪ್ಪಿದ್ದು, ಮತ್ತೊಂದು ಹಸು ಗಾಯಗೊಂಡಿರುವ ಘಟನೆ ಸಮೀಪದ ಮುತ್ತುರಾಯನ ಹೊಸಹಳ್ಳಿ ಮೀಸಲು ಅರಣ್ಯ ಪ್ರದೇಶದಂಚಿನ ಹುಣಸೇಗಾಲ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಾಗರಾಜೇಗೌಡರು ಸೇರಿದ ಹಸುಗಳ ಮೇಲೆ ಚಿರತೆ ದಾಳಿ ನಡೆಸಿದೆ. ಇವರು ಶನಿವಾರ ಸಂಜೆ ಹಸುಗಳನ್ನು ಜಮೀನಿನಲ್ಲಿ ಮೇಯಲು ಬಿಟ್ಟಿದ್ದ ವೇಳೆ ಏಕಾಏಕಿ ಚಿರತೆ ದಾಳಿ ನಡೆಸಿದೆ. ಪರಿಣಾಮ ಒಂದು ಹಸು ಮೃತಪಟ್ಟಿದ್ದು, ಮತ್ತೊಂದು ಹಸು ತೀವ್ರ ಗಾಯಗೊಂಡಿದೆ. ಇನ್ನುಳಿದ ಜಾನುವಾರುಗಳು ಗಾಬರಿಗೊಂಡು ದಿಕ್ಕಪಾಲಾಗಿ ಓಡಿವೆ.

ವಿಷಯ ತಿಳಿದು ಸ್ಥಳಕ್ಕೆ ಡಿಆರ್‌ಎಫ್‌ಒ ಅನುದೀಪ್ ಭೇಟಿ ನೀಡಿ, ಪರಿಶೀಲಿಸಿದ ನಂತರ ಮಾತನಾಡಿ, ಮುತ್ತುರಾಯನ ಹೊಸಳ್ಳಿ ಮೀಸಲು ಅರಣ್ಯ ಪ್ರದೇಶದಲ್ಲಿ ಚಿರತೆಗಳು ಹೆಚ್ಚಾಗಿದೆ. ಚಿರತೆ ದಾಳಿಯಿಂದ ಹಸು ಸಾವನ್ನಪ್ಪಿದ್ದು, ಹಸುವಿನ ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಕೂಡಲೇ ಸರ್ಕಾರಕ್ಕೆ ವರದಿ ಸಲ್ಲಿಸಿ ಸೂಕ್ತ ಪರಿಹಾರ ಕೊಡಿಸಲಾಗುವುದು ಎಂದು ಭರವಸೆ ನೀಡಿದರು.

ಜ್ಞಾನಧಾರ ಪ್ರಥಮ ದರ್ಜೆ ಕಾಲೇಜಿನಲ್ಲಿ ಪರಿಸರ ದಿನಾಚರಣೆ



ಹುಣಸೂರು, ಜೂ.12(ಕೆಕೆ)– ಮನು ಕುಲದ ಒಳಿತಿಗೆ ಸಂಜೀವಿನಿಯಾಗಿರುವ ಮರಗಿಡಗಳನ್ನು ನೆಟ್ಟು ಪೋಷಿಸುವ ಕೆಲಸವನ್ನು ಪ್ರತಿಯೊಬ್ಬ ಪ್ರಜೆಯು ಅನುಸರಿಸುವ ಅಗತ್ಯವಿದೆ ಎಂದು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಜ್ಞಾನಧಾರ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಗಿಡಗಳನ್ನು ನೆಟ್ಟು ಮಾತನಾಡಿದ ಅವರು, ಪ್ರಕೃತಿ ತನ್ನ ಸೊಬಗನ್ನು ಉಳಿಸಿಕೊಂಡು ಪ್ರಾಣಿ ಪಕ್ಷಿ, ಮನುಷ್ಯನ ಬದುಕಿಗೆ ಆಸರೆಯಾಗಿದೆ. ಅದೇ ರೀತಿ ಪ್ರಕೃತಿ ತನ್ನ ಸಮತೋಲನ ಕಾಪಾಡಿಕೊಳ್ಳಬೇಕಾದರೆ ನಾವೆಲ್ಲರೂ ವರ್ಷದಲ್ಲಿ ಒಂದು ದಿನ ಮಾತ್ರ ಪರಿಸರ ದಿನಾಚರಣೆ ಆಚರಿಸಿ ಸಂಭ್ರಮಿಸದೆ, ವಿದ್ಯಾರ್ಥಿಗಳು ಪ್ರತಿದಿನ ಒಂದು ಗಿಡ ನೆಡುವ ಮೂಲಕ ಮುಂದಿನ ಪೀಳಿಗೆಗೆ ನೆರವಾಗಬೇಕು ಎಂದರು.

ಉಪನ್ಯಾಸಕರಾದ ಅನುಷಾ, ಸುಮ, ರೇವತಿ, ಸಹನಾ, ಮೋನಿಷಾ, ಅಮೃತ, ವೇಣುಗೋಪಾಲ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮನೆಯ ಬೀಗ ಮುರಿದು ನಗದು, ಚಿನ್ನಾಭರಣ ದೋಚಿದ ಕಳ್ಳರು

ಹುಣಸೂರು, ಜೂ.12(ಕೆಕೆ)–ಮನೆಯ ಬೀಗ ಮುರಿದು ಕಳ್ಳರು ಬೀರುವಿನಲ್ಲಿದ್ದ 8.10 ಲಕ್ಷ ರೂ. ನಗದು, 53 ಗ್ರಾಂ. ಚಿನ್ನಾಭರಣ ದೋಚಿರುವ ಘಟನೆ ತಾಲೂಕಿನ ಮಾರಗೌಡನಹಳ್ಳಿಯಲ್ಲಿ ನಡೆದಿದೆ.

ತಾಲೂಕಿನ ಗಾವಡಗೆರೆ ಹೋಬಳಿಯ ಗ್ರಾಮದ ಲೇ.ರಾಮೇಗೌಡರ ಪತ್ನಿ ಮಹದೇವಮ್ಮರ ಮನೆಯಲ್ಲೇ ಕಳ್ಳತನ ನಡೆದಿದೆ. ಮಹದೇವಮ್ಮರ ಪುತ್ರ ನಾಲ್ಕೈದು ದಿನಗಳ ಹಿಂದಷ್ಟೇ ಹುಣಸೂರಿನ ಬ್ಯಾಂಕ್‌ವೊಂದರಲ್ಲಿ ಸಾಲ ಪಡೆದು ಹಣವನ್ನು ಮಾರಗೌಡನಹಳ್ಳಿಯ ಮನೆಯ ಬೀರುವಿನಲ್ಲಿಟ್ಟಿದ್ದರು. ಮಹದೇವಮ್ಮ ಹಾಗೂ ಮತ್ತೋರ್ವ ಪುತ್ರ ಕಾರ್ಯ ನಿಮಿತ್ತ ಹುಣಸೂರಿನ ಮನೆಯಲ್ಲಿದ್ದರು. ಇದನ್ನು ಅರಿತ ಖದೀಮರು ಮನೆಯ ಬೀಗ ಮುರಿದು ಒಳನುಗ್ಗಿ, ಬೀರುವಿನ ಲಾಕರ್ ಒಡೆದು ನಗದು–ಚಿನ್ನಾಭರಣ ದೋಚಿಸಿದ್ದಾರೆ. ಮಹದೇವಮ್ಮ ನವರು ಗ್ರಾಮಕ್ಕೆ ಹಿಂದಿರುಗಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಮಹದೇವಮ್ಮ ಪ್ರಕರಣ ದಾಖಲಿಸಿದ್ದು, ಗ್ರಾಮಕ್ಕೆ ಎಸ್‌ಪಿ ಚೇತನ್, ಡಿವೈಎಸ್‌ಪಿ ರವಿಪ್ರಸಾದ್, ಇನ್ಸ್‌ಪೆಕ್ಟರ್ ಚಿಕ್ಕಸ್ವಾಮಿ ಭೇಟಿ ನೀಡಿ ಪರಿಶೀಲಿಸಿ, ಮುಂದಿನ ಕ್ರಮಕ್ಕೆಗೊಂಡಿದ್ದಾರೆ.

ಕತ್ತು, ಹಿಮ್ಮಡಿ ಕೊಯ್ದು ಯುವಕನ ಕೊಲೆಗೆ ಯತ್ನ

ನಂಜನಗೂಡು, ಜೂ.12(ಸುದರ್ಶನ)– ಕತ್ತು ಹಾಗೂ ಹಿಮ್ಮಡಿಗಳನ್ನು ಕೊಯ್ದು ಯುವಕನ ಕೊಲೆಗೆ ಯತ್ನಿಸಿದ ಘಟನೆ ತಾಲೂಕಿನ ಹೆಡಿಯಾಲ ಸಮೀಪದ ನಾಗಣಾಪುರ ಗ್ರಾಮದ ಸಾಧನಮಡು ಹಳ್ಳದ ಕ್ರಾಸ್ ಬಳಿ ನಡೆದಿದೆ. ಯುವಕನನ್ನು ಮೈಸೂರು ತಾಲೂಕು ಬೀರಿಹುಂಡಿ ಗ್ರಾಮದ ಅಭಿಷೇಕ್ (21) ಎಂದು ಗುರುತಿಸಲಾಗಿದೆ. ಪರಿಚಿತ ವ್ಯಕ್ತಿಗಳು ಈತನನ್ನು ಶನಿವಾರ ರಾತ್ರಿ ಈ ಸ್ಥಳಕ್ಕೆ ಕರೆದುಕೊಂಡು ಬಂದು ಆತನ ಕತ್ತು ಹಾಗೂ ಹಿಮ್ಮಡಿಗಳನ್ನು ಕೊಯ್ದು ಹಳ್ಳದಲ್ಲಿ ಬಿಸಾಕಿ ಪರಾರಿಯಾಗಿದ್ದಾರೆ ಎನ್ನಲಾಗಿದೆ. ತೀವ್ರವಾಗಿ ಗಾಯಗೊಂಡ ಯುವಕ ಹಳ್ಳದಿಂದ ನಾಗಣಪುರ ಮುಖ್ಯ ರಸ್ತೆಗೆ ತೆವಳಿಕೊಂಡು ಬಂದಿದ್ದಾನೆ. ಜಮೀನಿಗೆ ತೆರಳುತ್ತಿದ್ದ ಸ್ಥಳೀಯರು ತೀವ್ರ ರಕ್ತಸ್ರಾವದಲ್ಲಿದ್ದ ಯುವಕನ ರಕ್ಷಿಸಿ ಆಂಬ್ಯುಲೆನ್ಸ್ ಮೂಲಕ ಕೆ.ಆರ್.ಆಸ್ಪತ್ರೆಗೆ ರವಾನಿಸಿದ್ದಾರೆ. ಮಾಹಿತಿ ಅರಿತ ಹುಲ್ಲಹಳ್ಳಿ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಮಹೇಶ್ ಕುಮಾರ್ ಕೊಲೆಯತ್ನ ಪ್ರಕರಣ ದಾಖಲಿಸಿಕೊಂಡು ದುಷ್ಕರ್ಮಿಗಳ ಸೆರೆಗೆ ಜಾಲ ಬೀಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

2023ರಲ್ಲಿ ಜೆಡಿಎಸ್ ನಂ.1 ಸ್ಥಾನಕ್ಕೆ!

ಬೆಂಗಳೂರು, ಜೂ.12– 2023ಕ್ಕೆ ಕುಮಾರಸ್ವಾಮಿ ಸಿಎಂ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸೇರಿ ಫೌಂಡೇಶನ್ ಹಾಕಿದ್ದಾರೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ಹೇಳಿದ್ದಾರೆ. ಮಾಧ್ಯಮದವರ ಜೊತೆ ಮಾತನಾಡಿದ ಅವರು,



ಇವತ್ತಿನ ಮುಹೂರ್ತ ಬರೆದಿಟ್ಟುಕೊಳ್ಳಿ.. ಬಿಜೆಪಿಯವರಿಗೆ ಜೆಡಿಎಸ್ ನಂಬರ್ 1 ಆಗಿ ಬರತ್ತೆ ಎಂಬುದು ಗೊತ್ತಾಗಿದೆ. ಕಾಂಗ್ರೆಸ್ ಮೂರನೇ ಸ್ಥಾನಕ್ಕೆ ಹೋಗೋದು ಗೊತ್ತಾಗಿದೆ. ನಿಮ್ಮವರು 10 ಜನ ಜೆಡಿಎಸ್‌ಗೆ ಬರ್ತಾರೆ ಎಂದು ಬಿಜೆಪಿ, ಕಾಂಗ್ರೆಸ್ ನಾಯಕರಿಗೆ ಇಬ್ರಾಹಿಂ ತಿರುಗೇಟು ನೀಡಿದರು.

ಸಿದ್ದರಾಮಯ್ಯರನ್ನು ವಿರೋಧ ಪಕ್ಷದಿಂದ ತೆಗೆದು ಹಾಕೋ ತಾಕತ್ತಿದೆಯಾ? ಸುರ್ಜೆವಾಲಾ ಅವರವರ ಪಾಲು ತೆಗೆದು ಕೊಂಡು ಊರು ಬಿಟ್ಟರು. ಅವನು ಬಂದ ಸೂಟ್ ಕೇಸ್, ಇವನು ಬಂದ ಸೂಟ್ ಕೇಸು. ಸೂಟ್ ಕೇಸ್ ಇಸ್ಕೊಳ್ಳೋದು ಬಹುತ್ ಅಚ್ಚಾ ಹೈ ಅಂತಾ ಹೇಳೋದು. ದೆಹಲಿಯಿಂದ ಬಂದವರೆಲ್ಲ ಹೀಗೆ ಸೂಟ್ ಕೇಸ್ ಎತ್ಕೊಂಡು ಹೋಗೋದು ಎಂದು ತಿಳಿಸಿದರು.

ಸಿದ್ದರಾಮಯ್ಯ, ಬಿಎಸ್‌ವೈ ಜೊತೆಗೆ ಈಗ್ಲೂ ಡೀಲ್: ಏರ್‌ಪೋರ್ಟ್‌ನಲ್ಲಿ ಸಿದ್ದರಾಮಯ್ಯ, ಯಡಿಯೂರಪ್ಪ ಜೊತೆಗೆ ಈಗಲೂ ಡೀಲ್ ಮಾಡ್ಕೊಂಡಿದ್ದಾರೆ. ಸಿಟಿ ರವಿ ಅದಕ್ಕೆ ಕಾಂಗ್ರೆಸ್ ಆಫೀಸಿಗೆ ಹೋಗಿ ಅಭಿನಂದನೆ ಸಲ್ಲಿಸಿದ್ದಾರೆ ಎಂದ ಇಬ್ರಾಹಿಂ, ಜೆಡಿಎಸ್ ಕಾರ್ಯಕರ್ತರಿಗೆ ನೋವಿದೆ, ಜನರಲ್ಲಿ ಆಕ್ರೋಶ ಇದೆ. ಇವರು ಬಿಬಿಎಂಪಿ ಚುನಾವಣೆ ಮಾಡಲ್ಲ ಗೊತ್ತಿದೆ. ಕುಮಾರಸ್ವಾಮಿ ಬಗ್ಗೆ ಗುಬ್ಬಿ ಶ್ರೀನಿವಾಸ್ ಮಾತಾಡ್ತಿದ್ದಾನೆ ಅಂತ ಯಾರೂ ತಲೆ ಕೆಡಿಸಿಕೊಳ್ಳಬೇಡಿ. ನಾಯಿ ಮನುಷ್ಯನಿಗೆ ಕಚ್ಚುತ್ತದೆ ಹೊರತು ಮನುಷ್ಯ ನಾಯಿಗೆ ಕಚ್ಚುವುದಿಲ್ಲ ಎಂದು ಜೆಡಿಎಸ್ ರಾಜ್ಯಾಧ್ಯಕ್ಷರು ತಿಳಿಸಿದರು.

ಯೋಗಿ ಆದಿತ್ಯನಾಥ್ ಭದ್ರತೆಯಲ್ಲಿ ಲೋಪ; 8 ಪೊಲೀಸರ ಅಮಾನತು

ಲಖನೌ: ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಭದ್ರತೆಯಲ್ಲಿ ಲೋಪದ ನಂತರ ಓರ್ವ ಇನ್ಸ್‌ಪೆಕ್ಟರ್ ಹಾಗೂ ಸಬ್ ಇನ್ಸ್‌ಪೆಕ್ಟರ್ ಸೇರಿದಂತೆ 8 ಮಂದಿ ಪೊಲೀಸರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.



ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ. ಪಿ. ನಡ್ಡಾ ಅವರನ್ನು ಸ್ವಾಗತಿಸಲು ಗೋರಕ್ ಪುರ ವಿಮಾನ ನಿಲ್ದಾಣಕ್ಕೆ ಯೋಗಿ ಆದಿತ್ಯ ನಾಥ್ ಶುಕ್ರವಾರ ತೆರಳುತ್ತಿರುವಾಗ ಭದ್ರತೆಯಲ್ಲಿ ಲೋಪ ಉಂಟಾಗಿತ್ತು. ಈ ಘಟನೆ ಯನ್ನು ಗಂಭೀರವಾಗಿ ತೆಗೆದುಕೊಳ್ಳಲಾಗಿದ್ದು, ಶನಿವಾರ ಎಂಟು ಪೊಲೀಸರನ್ನು ಗೋರಕ್ ಪುರ ಎಸ್‌ಎಸ್‌ಪಿ ವಿಪಿನ್ ತಾಡಾ ಅಮಾನತು ಮಾಡಿದ್ದಾರೆ. ಶುಕ್ರವಾರ ಬೆಳಗ್ಗೆ 11–28 ಸುಮಾರಿನಲ್ಲಿ ಜೆ.ಪಿ. ನಡ್ಡಾ ಅವರನ್ನು ಬರಮಾಡಿಕೊಳ್ಳಲು ಸಿಎಂ ಗೋರಕ್‌ಪುರ ವಿಮಾನ ನಿಲ್ದಾಣಕ್ಕೆ ತೆರಳುತ್ತಿದ್ದಾಗ ಕುಶ್ಮಾಹಿ ರಸ್ತೆಯಿಂದ ಅನೇಕ ವಾಹನಗಳು ಸಿಎಂ ಎದುರಿಗೆ ಬಂದಿದ್ದವು. ಈ ಘಟನೆ ಸಂಬಂಧ ತನಿಖೆಗೆ ಆದೇಶಿಸಿದ್ದ ತಾಡಾ, ಲೋಪ ಕಂಡುಬಂದ ಹಿನ್ನೆಲೆಯಲ್ಲಿ 8 ಪೊಲೀಸರನ್ನು ಸೇವೆಯಿಂದ ಅಮಾನತು ಮಾಡಿದ್ದಾರೆ.

ನಾಳೆ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ

ಮೈಸೂರು, ಜೂ.12– ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನಾಚರಣೆ ಅಂಗವಾಗಿ ಜೂ.14ರಂದು ಬೆಳಗ್ಗೆ 9 ಗಂಟೆಗೆ ಡಿಸಿ ಕಚೇರಿ ಮುಂಭಾಗ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಚಾಲನೆ ನೀಡುವರು. ಜೂ.14 ರಂದು ಬೆಳಗ್ಗೆ 10 ಗಂಟೆಗೆ ಕಲಾಮಂದಿರ ಸಭಾಂಗಣದಲ್ಲಿ ಆಚರಿಸಲಾಗುವುದು. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಎಂ.ಎಲ್.ರಘುನಾಥ್ ಕಾರ್ಯಕ್ರಮ ಉದ್ಘಾಟಿಸುವರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SRI VINAYAKA VENTURES
SRI SAI BUILDING SOLUTIONS
• PRODUCTS • SERVICES • SOLUTIONS
[GUIDE TO HOME BUILDING]
KUPPLURU NEAR RING ROAD J P NAGAR MYSORE
8660352905

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

TV ಕೆಟ್ಟಿದೆಯೇ? LCD, LED TV
ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven Doorstep ಸರ್ವಿಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವಿಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

ಶ್ರೀ ಗೌರಿಶಂಕರ ಟೂರಿಸ್ಟ್
10-07-22 (1 ದಿನ) ಕೋಟಿಲಿಂಗ ಘಾಟಿ ಸುಬ್ರಹ್ಮಣ್ಯ ಇತ್ಯಾದಿ.
12-08-22 (7 ದಿನ) ಕಾಶಿ, ಪ್ರಾಯಾಗ್‌ರಾಜ್, ಅಯೋಧ್ಯ, ಗಯಾ, ಬುದ್ಧಗಯಾ ಇತ್ಯಾದಿ.
8-10-22 (14 ದಿನ) ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಉತ್ತರಕಾಶಿ, ಮಸುರಿ, ಹರಿದ್ವಾರ್, ಋಷಿಕೇಶ್ ಇತ್ಯಾದಿ. (ವಿಮಾನ, ಟ್ರೈನ್ ಮತ್ತು ಎ.ಸಿ. ಬಸ್ಸು) (ಊಟ, ವಸತಿ ಸೇರಿರುತ್ತದೆ)
9620002114

ಹೊಸ ಚೀಟಿಗಳ ಪ್ರಾರಂಭ
ಸೀಬಿ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ, ಮೈಸೂರು / ಹಾಸನ

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574



SUNZONE SOLAR SYSTEM
VM Double Road, Kuvempunagar, Mysuru
9845175443

ತಕ್ಷಣ ಬೇಕಾಗಿದ್ದಾರೆ
Office ಕೆಲಸಕ್ಕೆ 21 ಯುವತಿಯರು ತಕ್ಷಣ ಬೇಕಾಗಿದ್ದಾರೆ. ವಯಸ್ಸಿನ ಮಿತಿ 18–29 (ಹೆಚ್ಚಿನ ಆದ್ಯತೆ. ಸೂರ್ಯ ಬೇಕರಿ, ಹೆಬ್ಬಾಳ್, ಗೋಕುಲಂ, ಬಸವನಗುಡಿ, ಕುಂಬಾರ ಕೊಪ್ಪಲು)
ಅನು: 7619219839

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
GOLD COMPANYಯಲ್ಲಿ ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ ಸಂಬಳ= 10000+ Incentives ಉಳಿದುಕೊಳ್ಳಲು ರೂಮ್ ವ್ಯವಸ್ಥೆ ಇರುತ್ತದೆ. ಕೂಡಲೇ ಸಂಪರ್ಕಿಸಿ –
7338667866

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura & Gokulam
Call: 7829937469, 9901803394
ONLINE TRAINING AVAILABLE

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ವೆಯಿಟರ್ಸ್, ಕೌಂಟರ್ ಬಾಯ್ಸ್, ಚಾಟ್ಸ್, ಜ್ಯೂಸ್ ಮಾಸ್ಟರ್, ಕ್ಯಾಪ್ಟನ್‌ಗಳು ಬೇಕಾಗಿದ್ದಾರೆ. ಆಸಕ್ತರು ನೇರವಾಗಿ ವಿವರಗಳೊಡನೆ ಸಂಪರ್ಕಿಸಿ. ವ್ಯವಸ್ಥಾಪಕರು:
ಹೋಟೆಲ್ ವಿಷ್ಣುಭವನ್,
ಬೀಮಾ ಜುವೆಲ್ಸ್ ಕೆಳಗೆ, ಬಿ ಎನ್ ರಸ್ತೆ, ಬಸ್ ನಿಲ್ದಾಣದ ಎದುರು ಮೈಸೂರು

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ತಕ್ಷಣ ಬೇಕಾಗಿದ್ದಾರೆ
HOME BASSED
E-CODE GAS SAFE

EDUCATION	WORK TIME	SALARY
SSLC,PUC,DIP Any Degree	4 HOURS	8000/- To 16000/-

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

TEACHERS TRAINING
NURSERY/ MONTESSORI/ KINDERGARTEN
ನೀವು ಒಬ್ಬ ಶಿಕ್ಷಕಿ ಯಾಗಬೇಕೇ ! SSLC ಪಾಸಾಗಿದೆ ಯಲ್ಲವೇ, ತಕ್ಷಣ ಸಂಪರ್ಕಿಸಿ , ತರಬೇತಿ ಪಡೆಯಿರಿ ನಂತರ ತಕ್ಷಣ ಕೆಲಸ PUC & DEGREE PASS OR FAIL APPLY, N T T TRAINING, EXAM & CERTIFICATE, Regs, By Govt of NCT (New Delhi)
9113980741

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

S.M. GOLD
ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5200 ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿ ಇಟ್ಟಿರುವ ಚಿನ್ನಾಭರಣಕ್ಕೆ ಹಣ ಬೇಕೆ ಕೂಡಲೇ ಸಂಪರ್ಕಿಸಿ.(T&C)
8050518881

ಬೇಕಾಗಿದ್ದಾರೆ
ಟಿಂಬರ್ ಮತ್ತು ಸಾಮಿಲ್‌ನಲ್ಲಿ ಕೆಲಸ ಮಾಡಲು Accountant ಬೇಕಾಗಿದ್ದಾರೆ
ಸಂಬಳ: 12000-14000
Tally ಮಾಡಿರುವವರಿಗೆ ಪ್ರಾಮುಖ್ಯತೆ
8095997232

MUDA APPROVED SITE FOR SALE
30x40 West Facing @ 1650/ Sq.ft. Immdiate Reg. & Bank Loan available Next to Lalbahadur Shastri Nagar & 1.5 kms from Ring Road.
7795609173

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9743217566
9108418233

SITE FOR SALE
20x40 & 20x40 Near Kavitha Bakery, J.P.Nagar
9739867473

ಪ್ರಮಾಣ ಪತ್ರ
ಶ್ರೀ ಶಶಿಕುಮಾರ್ ಆರ್., ಮನೆ ನಂ. 78, 4ನೇ ಮೇನ್, ನ್ಯೂ ಸ್ಟ್ರೀಟ್, ಕುಂಬಾರಕೊಪ್ಪಲು, ದೇವರಾಜ ಮೊಹಲ್ಲಾ, ಮೈಸೂರಿನಲ್ಲಿ ವಾಸವಿರುವ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಆಧಾರ್ ಕಾರ್ಡ್ (ನಂ. 2200 2202 8859), ಹಾಗೂ ಪಡಿತರ ಚೀಟಿ, ಐಡಿ ಕಾರ್ಡ್, ಬ್ಯಾಂಕ್ ಖಾತೆಯಲ್ಲಿ ನನ್ನ ಹೆಸರು ಶಶಿಕುಮಾರ್ ಆರ್. ಎಂದು ನಮೂದಾಗಿದ್ದು, ನನ್ನ SSLC ಅಂಕಪಟ್ಟಿ ನಂಬರ್ 131495 ರಲ್ಲಿ ನನ್ನ ಹೆಸರು ಶ್ರೀನಿವಾಸ್ ಆರ್. ಎಂದು ನಮೂದಾಗಿರುತ್ತದೆ. ಶಶಿಕುಮಾರ್ ಆರ್. ಮತ್ತು ಶ್ರೀನಿವಾಸ್ ಆರ್. ಈ ಎರಡು ಹೆಸರು ಉಳ್ಳ ವ್ಯಕ್ತಿ ನಾನೊಬ್ಬನೇ ಆಗಿರುತ್ತೇನೆ, ಎಂದು ನೋಟರಿ ಸಿ. ಮಂಗಳಾ ರವರ ಎದುರು ದಿನಾಂಕ 7.6.2022 ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಶಶಿಕುಮಾರ್. ಆರ್.

ಬೇಕಾಗಿದ್ದಾರೆ
ನವಮ್ ಬ್ರೈಡಲ್ ಡೆಸ್ಟಿನೇಷನ್ (ಬಟ್ಟೆ ಅಂಗಡಿ) ಗೆ ಸೇಲ್ಸ್ ಮ್ಯಾನ್, ಅಕೌಂಟೆಂಟ್, ಸೇಲ್ಸ್ ಗರ್ಲ್, ಹೆಲ್ಪರ್ಸ್ ಹಾಗೂ ಪ್ಯಾಕಿಂಗ್ ಮಾಡುವವರು ಬೇಕಾಗಿದ್ದಾರೆ.
ಸ್ಥಳ: ಕುವೆಂಪುನಗರ, ಮೈಸೂರು.
Mob: 74831-85989

ಬೇಕಾಗಿದ್ದಾರೆ
ಮೈಸೂರು ನಗರ, ಬನ್ನೂರು ರಸ್ತೆಯ ಕಂಪನಿಯಲ್ಲಿ 15,000/– ಸಂಬಳವಿರುತ್ತದೆ. ಮಾನಂದವಾಡಿ ರಸ್ತೆಯ ಉದ್ಬೂರು, ಅಂತರ ಸಂತೆ ಏರಿಯಾ, ಗದ್ದಿಗೆ ರಸ್ತೆಯ ಕಾರ್ಖಾನೆ ಯಲ್ಲಿ ಕೆಲಸ ಮಾಡಲು ಅನುಭವವಿರುವ SSLC, PUC ಪಾಸಾಗಿರುವ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
9035050656, 9035050653

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕ ಪ್ರದೇಶ ದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 30 ವರ್ಷ. ವಿದ್ಯಾರ್ಹತೆ: 7ನೇ ತರಗತಿಯಿಂದ PUC, ITI ಮತ್ತು Diploma (Mechanical). PF ಮತ್ತು ESI ಸೌಲಭ್ಯವಿರುತ್ತದೆ. (ಯಾವುದೇ ಶುಲ್ಕವಿರುವುದಿಲ್ಲ). ಸಂಪರ್ಕಿಸಿ:
Mob: 8277047300

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಿವಾನ್ಸ್ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

ಬ್ಯುಟಿಷಿಯನ್ ಕೆಲಸಕ್ಕೆ ಬೇಕಾಗಿದ್ದಾರೆ
ಗ್ರೀನ್‌ಟೆಚ್ ಲೇಡಿಸ್ ಪಾರ್ಲರ್, ವಿದ್ಯಾರಣ್ಯಪುರಂ, ಮೈಸೂರು
8746089729

ವೀರಶೈವ ಲಿಂಗಾಯತ ವಿವಾಹ ವೇದಿಕೆ
ಎಲ್ಲಾ ವೀರಶೈವ ಲಿಂಗಾಯತ ವಧು ವರರಿಗೆ ನೇರ ಸಂಪರ್ಕಿಸಿ. ನಿಮ್ಮ ಫೋಟೋ & ಬಯೋಡೇಟಾ ವಾಟ್ಸಾಪ್ ಮಾಡಿರಿ
9449408551

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

Office Work
ಟೆಲಿಕಾಲಿಂಗ್ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಅನುಭವ ಉಳ್ಳವರಿಗೆ ವಿಶೇಷ ಆದ್ಯತೆ)
Fix Salary + Incentive
9060606659

FOR SALE
1) 30x40 10 lakhs, HD Kote Road
2) 40x60 commercial Jayanagar
3) 25x40 House Ramakrishna Nagar
4) 30x40 G+2 Srirampura
5) 12x36 North G+1 floor Kuvempunagar
6) 30x40 G+floor New House Bogadi Near Hari Vidyalaya.
PRAKRUTHI PROPERTIES
90359 90359, 95386 90359

WANTED
Driver for own vehicle.
Contact:
Mob: 9886745981

ತಕ್ಷಣ ಬೇಕಾಗಿದ್ದಾರೆ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿ ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree, Pass / Fail ಆದವರಿಗೆ Packing, Helper, Checking, Maintence, Line incharge, Billing, fomt office, TelePhone attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000–39000 (ESI+PF+OT) ಸೇರಿ.
9663704915 / 9980630131

ಸೈಟು ಮಾರಾಟಕ್ಕಿದೆ
15x12 ಮೀಟರ್
ಶ್ರೀ ರಾಘವೇಂದ್ರನಗರ ಬಡಾವಣೆ, ಚಿಕ್ಕ ಹರದನಹಳ್ಳಿ (ನಾಯ್ಡು ಸರ್ಕಲ್ ಹತ್ತಿರ) ಮೈಸೂರು
7892248345
9164590443

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ ವೇತನ + ಓಟಿ 18000 ರಿಂದ 30000
9538811223 / 9538811104

ಮನೆ ಮಾರಾಟಕ್ಕಿದೆ
22 x 23 ರಲ್ಲಿ 19 x 23 ಅಡಿ ವಿಸ್ತೀರ್ಣವುಳ್ಳ ಸೀಟಿನ ಮನೆ ಮಾರಾಟಕ್ಕಿದೆ. (ಸಂಪು, ಟ್ಯಾಂಕ್, ವೆಟ್ರಿಫೈಡ್ ಟೈಲ್ಸ್, ಸಿಂಗಲ್ ರೂಂ, ಅಡುಗೆಮನೆ, ಹಾಲು, ನೀರಿನ ಮನೆ). Contact:
Mob: 9448553730

HOUSE FOR LEASE
3BHK, 2nd Floor, J.P.Nagar, Mysore-31.
Broker Excuse
Contact:
9902235465 / 9380367231

2 ಮನೆಗಳು ಭೋಗ್ಯಕ್ಕೆ ಇವೆ
(4.50 ಲಕ್ಷ ಮತ್ತು 5.50 ಲಕ್ಷ)
1) ಮೈಸೂರು ನಗರ ಚಾಮುಂಡಿಪುರಂ, ಜೆ.ಎಲ್‌ಬಿ ರಸ್ತೆ, 1ನೇ ಮಹಡಿ, ವರಾಂಡ, ಹಾಲ್, 1 ರೂಂ ಇತರೆ ಎಲ್ಲಾ ಸೌಕರ್ಯಗಳೊಡನೆ, ಪೂರ್ವಾಭಿಮುಖ (4.50 ಲಕ್ಷ.)
2) 1ನೇ ಮಹಡಿ, ವರಾಂಡ, ಹಾಲ್, 2 ರೂಂ, ಗ್ರಾನೈಟ್ ಮತ್ತು ಟೈಲ್ಸ್, ಇತರೆ ಎಲ್ಲಾ ಸೌಕರ್ಯಗಳೊಡನೆ. (5.50 ಲಕ್ಷ)
8105087957 / 8197692128
9845120632

ಶಿಕ್ಷಕಿಯರು ಬೇಕಾಗಿದ್ದಾರೆ
ಸದ್ವಿವೇಕ ಆಂಗ್ಲ ಮಾಧ್ಯಮ ಶಾಲೆ, ವಿಜಯನಗರ 4ನೇ ಹಂತ, ಬಸವನಪುರ, ಮೈಸೂರು – 32. NST, PUC, D.Ed, T.Ch, BA, B.Sc, B.Ed, M.A ಆದ ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ: L.E ಮಂಜುನಾಥ M.A, M.Phil, B.Ed, ಕಾರ್ಯದರ್ಶಿ, ಸದ್ವಿವೇಕ ಆಂಗ್ಲ ಮಾಧ್ಯಮ ಶಾಲೆ
9986567404

ಮುಡಾ ಸೈಟ್ ಬೇಕಾಗಿದೆ
ಮುಡಾ ಹಾಗೂ ಮುಡಾ ಅಪ್ರೂವ್ಡ್ ಸೈಟ್ ಬೇಕಾಗಿದೆ. 40x60 E/F ಅಥವಾ N/F ಅರವಿಂದ ನಗರ, ಶಾರದಾದೇವಿ ನಗರ, SBM ಲೇ ಔಟ್, ರಾಜರಾಜೇಶ್ವರಿನಗರ, ದಟ್ಟಗಳ್ಳಿ, ರಾಮಕೃಷ್ಣನಗರ, ಸುತ್ತಾಮುತ್ತಾ ಮಾಲೀಕರು ನೇರವಾಗಿ ಸಂಪರ್ಕಿಸಿ. ಬ್ರೋಕರ್ಸ್‌ಗಳಿಗೆ ಅವಕಾಶವಿರುವುದಿಲ್ಲ. ಸಂಪರ್ಕಿಸಿ:
9980733384

ವಧು ವರರ ಮಾಹಿತಿ ಕೇಂದ್ರ
ಒಕ್ಕಲಿಗ / ಲಿಂಗಾಯತ / ಬ್ರಾಹ್ಮಣ ಮತ್ತು ಎಲ್ಲಾ ಜಾತಿಯ BE / B.Tech / MBA / MS / MBBS / MD ಹಾಗೂ ಎಲ್ಲಾ ಡಿಗ್ರಿ / ಮಾಸ್ಟರ್ ಡಿಗ್ರಿ ದೇಶಿಯ / ವಿದೇಶಿಯ ವಧು – ವರರ ಮಾಹಿತಿಗೆ ಸಂಪರ್ಕಿಸಿ.
ಅಂಚೆ ಪೇದೆ ಮ್ಯಾಟ್ರಿಮೋನಿ
website: www.anchepedhematrimony.com
7349224222 / 7259395800

WANTED TEACHERS
Ideal School Yelawala English Medium
B.Sc, B.Sc, B.Ed (Maths) & Science
M.Sc, M.Sc, B.Ed (Maths) & Science
RTD. Teachers can also apply.
9900593211 / 9845353761

WANTED TEACHERS
For Montessori School in Bogadi.
9741781179

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದು ಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ: 14000 ದಿಂದ 18000 (ESI, PF ಸೌಲಭ್ಯ ಇರುತ್ತದೆ)
8050699742 / 7892480649

ಬೇಕಾಗಿದ್ದಾರೆ
1) ವಾಷಿಂಗ್ ಮಹಿಳೆರು / ಪುರುಷರು – 2 ನಂ.
2) ಹೌಸ್ ಕೀಪಿಂಗ್ ಬಾಯ್ಸ್ – 2 ನಂ.
ಫುಲ್ ಟೈಮ್ ಅಥವಾ ಪಾರ್ಟ್ ಟೈಮ್ (ಸಂಜೆ 6 ಗಂಟೆ ವರೆಗೆ)
ದ ಕೋರಮ್ ಹೋಟೆಲ್, #2257/1, ವಿನೋಭಾ ರಸ್ತೆ, ಕಲಾಮಂದಿರ ಹತ್ತಿರ, ಮೈಸೂರು.
9620274630

ಸುವರ್ಣಾವಕಾಶ
ನಿವೃತ್ತಿ, ಸ್ವಯಂ ನಿವೃತ್ತಿ, ಗೃಹಿಣಿಯರಿಗೆ ಸ್ವಯಂ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part Time / Full Time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed Salary / PF-ESI, Age:- above 30 years.
9008799156 / 9513395132

SITES FOR SALE
20x30 - 12.60 Lakhs
30x40 - 25.20 Lakhs
Bank Loan upto 75%, Ready for Registration, Near Gurur Bus Stop, Ramabainagar, Mysore, DTCP approved, (Corporation Limit) 1.5 kms from J P Nagar Ring Road.
8660105902

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
2921/ಎ, ಸರಸ್ವತಿಪುರಂ, ಮೈಸೂರು
11B, 9&11A ಖಾತಾಗಳಿಗೂ ಮುಡಾ & ಕಾರ್ಪೋರೇಷನ್ ಖಾತೆ ಇದ್ದರು, ಇಲ್ಲದಿದ್ದರೂ ಹಾಗೂ 15,000 ಮೇಲ್ಪಟ್ಟು ಸಂಬಳ ಇರುವವರಿಗೆ ಪರ್ಸನಲ್ ಲೋನ್ ಹಾಗೂ ಇಂಡಸ್ಟ್ರಿಯಲ್ ಮಾರ್ಟ್‌ಗೇಜ್ ಲೋನ್ ಸೌಲಭ್ಯ ದೊರೆಯುತ್ತದೆ. ಸಂಪರ್ಕಿಸಿ.
8088647887

ತಕ್ಷಣ ಬೇಕಾಗಿದ್ದಾರೆ
ಗ್ರಾಮೀಣ ಯುವಕ ಯುವತಿಯರು Age (18-24) Earn (12,500/- ರಿಂದ 18,500/-pm) Freshers only. 10th, PUC, BBM, ITI, Diploma ಆದವರಿಗೆ ಯಾವುದೇ ಶುಲ್ಕವಿರುವುದಿಲ್ಲ Project Trainee / Promoters ಗಳಾಗಿ ಮೈಸೂರಿನಲ್ಲಿ Walk in Interview (11am to 3.30pm) ಉಚಿತ ವಸತಿ. Call ಕಾಲ್:
9342827788 / 9353475598

ಬೇಕಾಗಿದ್ದಾರೆ
Home Nurse ಕೆಲಸಕ್ಕೆ ಯುವಕ – ಯುವತಿಯರು ತಕ್ಷಣ ಬೇಕಾಗಿದ್ದಾರೆ. 14,000/– ಸಂಬಳ, ಅನುಭವವಿಲ್ಲದವರಿಗೆ ತರಬೇತಿಯನ್ನು ನೀಡಿ ಗೌರವ ಧನವನ್ನು ಸಹ ನೀಡಲಾಗುತ್ತದೆ. ಊಟ ವಸತಿ ಉಚಿತ. ವಿದ್ಯಾರ್ಹತೆ: 7th, SSLC, PUC ಅಥವಾ ಯಾವುದೇ ಡಿಗ್ರಿ ಪಾಸ್ ಅಥವಾ ಫೇಲ್ ಸಂಪರ್ಕಿಸಿ:
9916905188

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿಗೆ SSLC / PUC Pass or Pass / Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
BENAKA - ITI College, Near Cuvery Circle, Dr|| Rajkumar Road, Raghavendra Nagar, Mysore-29
9342123467 / 9141756695

ಕಳೆದಿದೆ
ಅಪೂರ್ವ ಎನ್. ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಡದಹಳ್ಳಿ ಗ್ರಾಮದ ಸರ್ವೆ ನಂ.117/1, ಇತರೆ ನಿರ್ಮಿಸಿರುವ ಬಡಾವಣೆಯಲ್ಲಿನ ನಿವೇಶನ ಸಂಖ್ಯೆ 27 ರ ಖಾತಾ ವರ್ಗಾವಣೆ ಪತ್ರ ಕಳೆದು ಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ.
7411424515

Sri Narayanananda Vidyalaya (English Medium School)
Hinkal, Mysuru-30
REQUIRED LADY TEACHERS
1) NST / Montessori,
2) P.U.C./ B.A., D.Ed (Hindi, EVS)
3) B.Sc / M.Sc., B.Ed (Science CBZ)
Contact: 7353711673
Walk in interview on 15.06.2022 (10.00 am to 1.00 pm)

ಕೆಲಸಕ್ಕೆ ಬೇಕಾಗಿದ್ದಾರೆ
ಇಂಡಿಯನ್ ಆಯಿಲ್ ಬಂಕ್ ವರಕೂಡು ಪೆಟ್ರೋಲ್ ಬಂಕ್‌ಗೆ ಕ್ಯಾಷಿಯರ್ ಹಾಗೂ ಹೆಲ್ಪರ್ಸ್ ಬೇಕಾಗಿದ್ದಾರೆ. ಊಟ ಹಾಗೂ ರೂಂ ಸೌಲಭ್ಯ ಇರುತ್ತದೆ.
ಸಂಬಳ: 10,000–12,000 ದವರೆಗೂ ಅನುಭವವುಳ್ಳವರಿಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗುವುದು. ಸಂಪರ್ಕಿಸಿ:
7483185989

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಸಂಬಳ ಊಟ, ವಸತಿಯೊಂದಿಗೆ 12,000 – 18,000 ರ ವರೆಗೆ.
9739292222 / 9035113222

ಮೈಸೂರಿನಲ್ಲಿ ಉದ್ಯೋಗ
(Consultancy ಅಲ್ಲ) ಕುವೆಂಪುನಗರದಲ್ಲಿ ನೂತನವಾಗಿ ಆರಂಭವಾಗಿರುವ FMGS Pvt. Ltd ಕಂಪನಿಗೆ SSLC (Pass) PUC, ITI, Dip, Any Degree, M.Com ಆಗಿರುವ 328 ಅಭ್ಯರ್ಥಿಗಳು ಬೇಕಾಗಿದ್ದಾರೆ. (Freshers + ಕನ್ನಡ ಬಲ್ಲವರಿಗೆ ಹೆಚ್ಚಿನ ಆದ್ಯತೆ) ವಯೋಮಿತಿ: 18-31 years, ತಿಂಗಳಿಗೆ:27,000-35,000, (Promotion+ ಉಚಿತ ವಸತಿ) ದಿವ್ಯಾ:
9663481922 / 9844219943

HOUSE FOR SALE
30X40 MUDA New 4 BHK Duplex, East Facing Door & Site, at Ramkrishnagar, Near Andolana Circle - Rs.1.55 Cr.
30X40 New 3 BHK Duplex with Borewell, N/F Site & E/F Door, Vijayanagar 4th Stage - Rs.1.58 Cr. (Brokers Excuse)
8660105902

ಬೇಕಾಗಿದ್ದಾರೆ
ನಂಜನಗೂಡಿನ ಟೌನ್ ಟೆನೀಸ್ ಕ್ಲಬ್‌ನಲ್ಲಿ ಕಛೇರಿಯ ಕೆಲಸಗಳನ್ನು ನಿರ್ವಹಿಸಲು ಸಹಾಯಕರು ಬೇಕಾಗಿದ್ದಾರೆ. ಬಿ.ಕಾಂ ಪದವೀಧರರು ಕಂಪ್ಯೂಟರ್ ಜ್ಞಾನವಿರುವವರು (ನಂಜನಗೂಡಿನ ನಿವಾಸಿಗಳು) ಮಾತ್ರ ನೇರವಾಗಿ
ಜಿ.ಕೆ.ನಾಗರಾಜು ಅಧ್ಯಕ್ಷರು (9448750305) ಅಥವಾ ಕಾರ್ಯದರ್ಶಿ ಎನ್‌ಮಂಜು (9886312716)
ಟೌನ್ ಟೆನೀಸ್ ಕ್ಲಬ್, ನಂಜನಗೂಡು ಇವರನ್ನು ಸಂಪರ್ಕಿಸಲು ಕೋರಲಾಗಿದೆ.

HOUSE FOR SALE
20x30 MUDA
New 3 BHK Duplex with North Facing Site & East Facing Door, Somnathnagar, Dattagalli. Rs.76 Lakhs (Opp 40x60 Sites)
Brokers Don't Call
8660105902

WANTED
Experienced Cooks / Asst. Cooks / For Industrial Catering, Best Salary ESI + PF.
Contact:
8951189182
9880656245

SUBSIDY LOAN FOR NEW BUSINESS
5 Lakhs to 50 Lakhs Loan
ಎಲ್ಲಾ ರೀತಿಯ Business Loan ಹಾಗೂ Manufacturing, Sales, Services ಗಳಿಗೆ Subsidy ಸಹಿತ Loan ಮಾಡಿಸಿಕೊಡಲಾಗುವುದು ಹಾಗೂ ಸರ್ಕಾರದಿಂದ ಅಂಗೀಕೃತವಾದ ಎಲ್ಲಾ ರೀತಿಯ ಸಾಲದ ಯೋಜನೆಗಳಿಗೆ ಸಂಬಂಧಿಸಿದ Project Report ನ್ನು ನಮ್ಮಲ್ಲಿ ತಯಾರಿಸಲಾಗುವುದು.
9620934944 / 9686773884

ಮಾತೃ ವೃದ್ಧಾಶ್ರಮ ಮತ್ತು ಆರೈಕೆ ಕೇಂದ್ರ
ನಮ್ಮಲ್ಲಿ ವಯಸ್ಸಾದ ವೃದ್ಧರು ಮತ್ತು ಮಹಿಳೆಯರು ಹಾಸಿಗೆ ಹಿಡಿದವರು, ಪಾರ್ಶ್ವವಾಯು ಪೀಡಿತರನ್ನು ನಮ್ಮಲ್ಲಿ ಆರೈಕೆ ಮಾಡಲಾಗುವುದು ಮತ್ತು ಪರುಷ & ಮಹಿಳೆರಿಗೆ ಪ್ರತೇಕ ಕೊಠಡಿ ವ್ಯವಸ್ಥೆಯಿರುತ್ತದೆ. ನಮ್ಮಲ್ಲಿ ನಿಯಮಿತ ವೈದ್ಯಕೀಯ ಸೌಲಭ್ಯ, ಬಿಸಿನೀರಿನ ವ್ಯವಸ್ಥೆ ಸಸ್ಯಹಾರಿ ಊಟ ಮತ್ತು ಆಂಬುಲೆನ್ಸ್ ಮತ್ತು ನರ್ಸಿಂಗ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ.
8861637804

ಟೀಚರ್ಸ್ ಬೇಕಾಗಿದ್ದಾರೆ
ಶಾಶ್ವತ್ ವಿದ್ಯಾಮಂದಿರ (ಆಂಗ್ಲಮಾಧ್ಯಮ) ಸಿದ್ಧರಾಮನಹುಂಡಿ ಶಾಲೆಗೆ ಶಿಕ್ಷಕಿಯರು ಬೇಕಾಗಿದ್ದಾರೆ. ಇಂಗ್ಲೀಷ್ ಗಣಿತ ಸ್ಪೋಕನ್ ಇಂಗ್ಲೀಷ್ ದೈಹಿಕ ಶಿಕ್ಷಕರು ಹಾಗೂ ವಾಹನ ಚಾಲಕರು.
9740032559 / 9986791152

ಬೇಕಾಗಿದ್ದಾರೆ
ಮನೆಯಲ್ಲಿ ಇದ್ದು ರೋಗಿಯನ್ನು ನೋಡಿಕೊಳ್ಳಲು ಅನುಭವವುಳ್ಳ ಹೋಂ ನರ್ಸ್ ಹಾಗೂ ಅಡುಗೆಯವರು ಮನೆ ಕೆಲಸದವರು ನುರಿತ ಮಹಿಳೆಯರು ಬೇಕಾಗಿದ್ದಾರೆ.
ಲಕ್ಷ್ಮೀ:
8951717070

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್‌ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಭಾದೆ, ಶತ್ರುಭಾದೇ, ದುಷ್ಟಶಕ್ತಿ, ಇಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ನಂಬಿ ಬನ್ನಿ. ಖಾಯಂ ವಿಳಾಸ: (Reliance Smart) ಹತ್ತಿರ, ATM ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಇಂದು ದಕ್ಷಿಣ ಪದವೀಧರ ಚುನಾವಣೆ: ಮಂಡ್ಯದಲ್ಲಿ ಸಿದ್ಧತೆ

● ಒಟ್ಟು 45 ಮತಕೇಂದ್ರಗಳ ಸ್ಥಾಪನೆ ● 180 ಸಿಬ್ಬಂದಿ ನಿಯೋಜನೆ

ಮಂಡ್ಯ, ಜೂ.12(ಮೋಹನ್ ರಾಜ್)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಜೂ.13 ರಂದು ಮತದಾನ ನಡೆಯಲಿದ್ದು, ಮುಕ್ತ ಮತ್ತು ನ್ಯಾಯ ಸಮ್ಮತ ಚುನಾವಣೆಗೆ ಜಿಲ್ಲೆ ಸನ್ನದ್ಧವಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಕೆಆರ್.ಪೇಟೆ–3326, ನಾಗಮಂಗಲ–2959, ಪಾಂಡವಪುರ–3705, ಮಂಡ್ಯ–15925, ಮದ್ದೂರು–10360, ಶ್ರೀರಂಗಪಟ್ಟಣ–3307, ಮಳವಳ್ಳಿ–7720 ಸೇರಿದಂತೆ ಒಟ್ಟು 47,302 ಮತದಾರರು ಇದ್ದಾರೆ.



ಕರ್ನಾಟಕ ದಕ್ಷಿಣ ಪದವೀಧರರ ಚುನಾವಣೆಗೆ ಸಂಬಂಧಿಸಿದಂತೆ ಕೆ.ಆರ್.ಪೇಟೆ–3, (ಮಿನಿ ವಿಧಾನಸೌಧದ 3 ವಿವಿಧ ಕೊಠಡಿ) ನಾಗಮಂಗಲ–3 (ಮಿನಿ ವಿಧಾನಸೌಧದ 3 ವಿವಿಧ ಕೊಠಡಿ), ಪಾಂಡವಪುರ–4 (ಮಿನಿ ವಿಧಾನಸೌಧದ 1 ಕೊಠಡಿ ಹಾಗೂ ತಾಲೂಕು ಕಚೇರಿಯ 3 ವಿವಿಧ ಕೊಠಡಿ), ಮಂಡ್ಯ–15 (ಮಂಡ್ಯ ವಿವಿ ವಾಣಿಜ್ಯ ವಿಭಾಗದ 7 ವಿವಿಧ ಕೊಠಡಿ ಹಾಗೂ ಮಂಡ್ಯ ವಿವಿ ವಿಜ್ಞಾನ ವಿಭಾಗದ 8 ಕೊಠಡಿ) ಮದ್ದೂರು–10 (ಮಿನಿ ವಿಧಾನಸೌಧದ 2 ಕೊಠಡಿ, ತಾಪಂ ಕಚೇರಿಯ 2 ಕೊಠಡಿ, ಸರ್ಕಾರಿ ಮಹಿಳಾ ಕಾಲೇಜಿನ ಹಳೆ ಕಟ್ಟಡದ 3 ಕೊಠಡಿ ಹಾಗೂ ಸರ್ಕಾರಿ ಮಹಿಳಾ ಕಾಲೇಜಿನ ಹೊಸ ಕಟ್ಟಡದ 3 ಕೊಠಡಿ), ಶ್ರೀರಂಗಪಟ್ಟಣ–3(ಮಿನಿ ವಿಧಾನಸೌಧದ 3 ಕೊಠಡಿ), ಮಳವಳ್ಳಿ–7 (ಮಿನಿ ವಿಧಾನಸೌಧದ 2 ಕೊಠಡಿ ಹಾಗೂ ತಾಪಂ ಕಚೇರಿಯ ವಿವಿಧ 5 ಕೊಠಡಿ) ಸೇರಿದಂತೆ ಒಟ್ಟು 45 ಮತಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಪ್ರತಿ ಮತಗಟ್ಟೆಗೆ ಒಬ್ಬರು ಪ್ರಿಸೈಡಿಂಗ್ ಅಧಿಕಾರಿ ಹಾಗೂ ಮೂವರು ಪೋಲಿಂಗ್ ಅಧಿಕಾರಿಗಳು, ಒಬ್ಬರು ಮೈಕ್ರೋ ಅಬ್ಸರ್‌ವರ್ ಸೇರಿದಂತೆ 45 ಮೈಕ್ರೋ ಅಬ್ಸರ್‌ವರ್, ಪ್ರಿಸೈಡಿಂಗ್ ಅಧಿಕಾರಿಗಳು ಹಾಗೂ ಪೋಲಿಂಗ್ ಅಧಿಕಾರಿಗಳು ಸೇರಿದಂತೆ ಒಟ್ಟು 180 ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಪೊಲೀಸ್ ಬಂದೋಬಸ್ತ್: ಚುನಾವಣಾ ಕಾರ್ಯಕ್ಕೆ ನಾಲ್ವರು ಡಿಎಸ್‌ಪಿ, ಸಿಪಿಐ/ಪಿಐ– 15, ಎಸ್‌ಐ– 20, ಎಎಸ್‌ಐ–45, ಸಿಹೆಚ್‌ಸಿ/ಡಬ್ಲ್ಯೂಹೆಚ್‌ಸಿ–71, ಸಿಪಿಸಿ/ಡಬ್ಲ್ಯೂಪಿಸಿ–112 ಸಿಬ್ಬಂದಿ ಹಾಗೂ 9 ಡಿಎಆರ್ ತುಕಡಿ ನೇಮಿಸಲಾಗಿದೆ.

ಮತದಾರರ ವಿವರ	
ಮಂಡ್ಯ–	15925
ಕೆ.ಆರ್.ಪೇಟೆ–	3326
ನಾಗಮಂಗಲ–	2959
ಪಾಂಡವಪುರ–	3705
ಮದ್ದೂರು–	10360
ಶ್ರೀರಂಗಪಟ್ಟಣ–	3307
ಮಳವಳ್ಳಿ–	7720
ಒಟ್ಟು–	47,302

ಮಂಡ್ಯ ಸಾಹಿತ್ಯ, ಚಳವಳಿ, ಸಂಸ್ಕೃತಿಗೆ ಹೆಸರಾದ ಜಿಲ್ಲೆ

ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ಅಧ್ಯಕ್ಷ ಡಿ.ಎಸ್.ವೀರಯ್ಯ

ಮಂಡ್ಯ, ಜೂ.12(ಮೋಹನ್‌ರಾಜ್)– ಮಂಡ್ಯ ಸಾಹಿತ್ಯ, ಚಳವಳಿ, ಸಂಸ್ಕೃತಿಗೆ ಹೆಸರಾದ ಜಿಲ್ಲೆ. ಇಲ್ಲಿನ ಜನರು ಸ್ವಾಭಿಮಾನಿಗಳು, ಎಲ್ಲರನ್ನೂ ಪ್ರೀತಿ ವಿಶ್ವಾಸದಿಂದ ಕಾಣುತ್ತಾರೆ ಎಂದು ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ಅಧ್ಯಕ್ಷ ಡಿ.ಎಸ್.ವೀರಯ್ಯ ತಿಳಿಸಿದರು.

ನಗರದ ಕಲಾಮಂದಿರ ರಸ್ತೆಯಲ್ಲಿರುವ ಬಿಎಸ್‌ಎನ್‌ಎಲ್ ಮುಂಭಾಗದ ಜೆ.ಪಿ.ಸ್ಮಾರಕ ವಿದ್ಯಾಸಂಸ್ಥೆ ಆವರಣದಲ್ಲಿ ಭಾನುವಾರ ಜನಗಣ ಮುದ್ರಣ ಮತ್ತು ಪ್ರಕಾಶನ ವತಿಯಿಂದ ಏರ್ಪಡಿಸಿದ್ದ ನೆನಪು ಮಾಸುವ ಮುನ್ನ ಮಾಲಿಕೆಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಮಂಡ್ಯ ಜಿಲ್ಲೆ ಪುಸ್ತಕ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜಕೀಯ ಶಕ್ತಿ ಸಿಕ್ಕಾಗ ಜನಪರವಾಗಿ ಕೆಲಸ ಮಾಡಬೇಕು. ಜಿಲ್ಲೆಯ ಅನೇಕ ರಾಜಕಾರಣಿಗಳು ವಿಧಾನ ಪರಿಷತ್‌ನಲ್ಲಿ ಕೆಲಸ ಮಾಡಿದ್ದಾರೆ ಎಂದರು.

ಮೊದಲೆಲ್ಲಾ ರಾಜಕಾರಣಿಗಳು ಸಮಾಜಮುಖಿಯಾಗಿದ್ದರು. ಸರಳತೆ ಇತ್ತು. ಇಂದು ರಾಜಕಾರಣದ ಬಗ್ಗೆ ಚಿಂತಿಸಬೇಕಾದ ಅನಿವಾರ್ಯತೆ ಎದುರಾಗಿದೆ. ವಿಧಾನ ಪರಿಷತ್‌ನಲ್ಲಿ ಮಂಡ್ಯ ಜಿಲ್ಲೆ ಎಂಬ ಕೃತಿ ಹೊರ ತಂದಿರುವುದು ಶ್ಲಾಘನೀಯ ಎಂದರು.

ಮಂಡ್ಯ ಜಿಲ್ಲೆ ಹೋರಾಟದಲ್ಲಿದ್ದುಕೊಂಡು ರಾಷ್ಟ್ರ ಹಾಗೂ ರಾಜ್ಯಕ್ಕೆ ಅನೇಕ ಕೊಡುಗೆ ನೀಡಿದೆ. ಮುಖ್ಯಮಂತ್ರಿಯಾಗಿ ಬಿ.ಎಸ್.ಯಡಿಯೂರಪ್ಪ, ಎಸ್.ಎಂ.ಕೃಷ್ಣ ಕೆಲಸ ಮಾಡಿದ್ದಾರೆ. ಅನೇಕರು ಜಿಲ್ಲೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದರು.

ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ ಎಲ್ಲರನ್ನೂ ಸಶಕ್ತರನ್ನಾಗಿ ಮಾಡಿದೆ. ನಾಲ್ಕೂ ಅಂಗಗಳು ದೇಶದ ಬುನಾದಿಯಾಗಿದೆ. ಶಾಸಕಾಂಗದ ಪ್ರಾಮುಖ್ಯತೆಯನ್ನು ಪ್ರತಿಯೊಬ್ಬರೂ ಅರಿಯಬೇಕು. ಜನಪ್ರತಿನಿಧಿ ಆಯ್ಕೆ ಮಾಡಬೇಕಾದರೆ ಜನಮಾನಸಕ್ಕೆ ಸ್ಪಂದಿಸುತ್ತಾರೆಯೇ ಎಂಬುದನ್ನು ಅರಿಯಬೇಕು ಎಂದರು. ಸಮಾಜದಲ್ಲಿ ಕಡಿಮೆಯಾಗುತ್ತಿರುವ ಉತ್ತರದಾಯಿತ್ವವನ್ನು ಬೆಳೆಸಬೇಕಿದೆ. ಮೇಲ್ಮನೆ ಆಡಳಿತದಲ್ಲಿ ಬದ್ಧತೆ ಪ್ರದರ್ಶಿಸಬೇಕಾಗಿದೆ ಎಂದ ಅವರು, ಮಂಡ್ಯ ಬೆಳೆಯುತ್ತಿದೆ. ಡಿ.ಎಸ್.ವೀರಯ್ಯ ಅಧ್ಯಕ್ಷರಾಗಿರುವ ಕಾರಣ ಅವರ ಕೊಡುಗೆಯಂತೆ ಟ್ರಕ್ ಟರ್ಮಿನಲ್ ನಿರ್ಮಿಸಲು ಆಸಕ್ತಿ ವಹಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ ಜನಗಣ ಮುದ್ರಣ ಮತ್ತು ಪ್ರಕಾಶನದ ಮುಖ್ಯಸ್ಥ ಕೌಡ್ಲೆಚನ್ನಪ್ಪ ಇದ್ದರು.



ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಜೂ.12– ಪ್ರಸಕ್ತ ಸಾಲಿನ ಪರಿಶಿಷ್ಟ ಜಾತಿ ಹಾಗೂ ಪಂಗಡ ಉಪ ಯೋಜನೆ ಅಡಿ 2021ನೇ ಜ.1ರಿಂದ ಡಿ.31ರ ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಎಸ್ಸಿ,ಎಸ್ಟಿ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡಲು ಅರ್ಜಿಗಳನ್ನು ಆಹ್ವಾನಿದೆ.

ಆಸಕ್ತ ಕ್ರೀಡಾಪಟುಗಳು ಅರ್ಜಿ ನಮೂನೆಯನ್ನು ಕಚೇರಿ ವೇಳೆ ಉಚಿತವಾಗಿ ಪಡೆದು ಮೂಲ ದಾಖಲಾತಿಗಳೊಂದಿಗೆ ಭರ್ತಿ ಮಾಡಿ ಜೂ.20 ರೊಳಗೆ ಸಹಾಯಕ ನಿರ್ದೇಶಕರ ಕಚೇರಿ ಸರ್.ಎಂ.ವಿಶ್ವೇಶ್ವರಯ್ಯ ಒಳಾಂಗಣ ಕ್ರೀಡಾಂಗಣ ಮಂಡ್ಯ ಇವರಿಗೆ ಸಲ್ಲಿಸತಕ್ಕದ್ದು ಎಂದು ಪ್ರಕಟಣೆ ತಿಳಿಸಿದೆ.

ಸಾಯಿ ಅನಾಥಾಶ್ರಮಕ್ಕೆ ವಿಧಾನಸಭೆ ಮಾಜಿ ಸ್ಪೀಕರ್ ಭೇಟಿ



ಶ್ರೀರಂಗಪಟ್ಟಣ, ಜೂ.12–ತಾಲೂಕಿನ ಮೈಸೂರು–ಬೆಂಗಳೂರು ಹೆದ್ದಾರಿಯ ಕಾವೇರಿ ನದಿ ತೀರದಲ್ಲಿರುವ ಸಾಯಿ ಅನಾಥಾಶ್ರಮಕ್ಕೆ ಭಾನುವಾರ ವಿಧಾನಸಭೆ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಭೇಟಿ ನೀಡಿದರು.

ಮೈಸೂರಿನಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಬೆಂಗಳೂರಿಗೆ ವಾಪಸ್ಸಾಗುವ ಮಾರ್ಗಮಧ್ಯೆ ಆಶ್ರಮಕ್ಕೆ ಭೇಟಿ ನೀಡಿ, ಮಕ್ಕಳೊಂದಿಗೆ ಕಾಲ ಕಳೆದು ಊಟ ಮಾಡಿ ಮಾತನಾಡಿದ ಅವರು, ಮಕ್ಕಳು ಗುಣಮಟ್ಟದ ವಿದ್ಯಾಭ್ಯಾಸ ಪಡೆದು ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಸಾಯಿ ಸಾಯಿ ಟ್ರಸ್ಟ್ ಅಧ್ಯಕ್ಷ ಸಾಯಿ ಕುಮಾರ್ ಇತರರಿದ್ದರು.

ಬಾಲಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿ ಘೋಷಿಸಲು ಸಾರ್ವಜನಿಕ ಸಹಕಾರ ಅವಶ್ಯಕ: ಉಪವಿಭಾಗಾಧಿಕಾರಿ



ಮಂಡ್ಯ, ಜೂ.12– ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಘಗಳ ಸಹಾಯದೊಂದಿಗೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ನೆರವಿನಿಂದ ಬಾಲ ಕಾರ್ಮಿಕ ಪದ್ಧತಿ ವಿರುದ್ಧ ಸಾಕಷ್ಟು ಜಾಗೃತಿ ಮೂಡಿಸಲಾಗುತ್ತಿದ್ದು, ಮಂಡ್ಯವನ್ನು ಬಾಲ ಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿ ಘೋಷಿಸಲು ಇಲಾಖೆಯೊಂದಿಗೆ ಸಾರ್ವಜನಿಕರ ಸಹಕಾರ ಅತ್ಯವಶ್ಯಕ ಎಂದು ಎಸಿ ಆರ್.ಐಶ್ವರ್ಯ ತಿಳಿಸಿದರು.

ನಗರದ ಕರ್ನಾಟಕ ಸಂಘದಲ್ಲಿ ನಡೆದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬಾಲ ಕಾರ್ಮಿಕರಿಗೆ ಸಂಬಂಧಿಸಿದ ದೂರುಗಳನ್ನು 1098 ಸಹಾಯವಾಣಿಗೆ ಕರೆ ಮಾಡಿ ತಿಳಿಸಿ. ಸಮಾಜದ ಪ್ರತಿಯೊಬ್ಬ ವ್ಯಕ್ತಿ ಮತ್ತು ಸಂಘ ಸಂಸ್ಥೆಗಳ ಪಾತ್ರ ಮಹತ್ವದಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಒಟ್ಟಾಗಿ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ನಿರ್ಮೂಲನೆಗೆ ಶ್ರಮಿಸುವುದು ಅತ್ಯವಶ್ಯಕ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎ.ಎಂ.ನಳಿನಿಕುಮಾರಿ ಮಾತನಾಡಿ, ಅಂತಾರಾಷ್ಟ್ರೀಯ ಸಮುದಾಯಗಳ ಪಾಲ್ಗೊಳ್ಳುವಿಕೆಯಿಂದ ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕರ ನಿರ್ಮೂಲನೆಗಾಗಿ ಉತ್ತಮ ಪ್ರಯತ್ನಗಳು ನಡೆಯುತ್ತಿದ್ದು, ರಾಜ್ಯ ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಮುಕ್ತ ಹಾಗೂ ಮಕ್ಕಳ ಸ್ನೇಹಿ ರಾಜ್ಯವಾಗುತ್ತಾ ದಾಪುಗಾಲು ಇಡುತ್ತಿದೆ ಎಂದರು.

ಉಪವಿಭಾಗ ಕಾರ್ಮಿಕ ಅಧಿಕಾರಿ ಎಸ್.ಎಂ.ಮಂಜುಳಾದೇವಿ ಮಾತನಾಡಿ, ಬಾಲ ಕಾರ್ಮಿಕ ಪದ್ಧತಿ ಒಂದು ಸಾಮಾಜಿಕ ಸಮಸ್ಯೆಯಾಗಿದ್ದು, ದೇಶದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಅಡ್ಡಿಯಾಗಿದೆ ಎಂದರೆ ತಪ್ಪಾಗಲಾರದು. ಬಾಲ ಕಾರ್ಮಿಕ ಪದ್ಧತಿ ಒಂದು ಜಾಗತಿಕ ಸಮಸ್ಯೆಯಾಗಿರುವುದರಿಂದ ಬಾಲ ವ್ಯವಸ್ಥೆ ಹಾಗೂ ಕಿಶೋರ ವ್ಯವಸ್ಥೆ ಕಾರ್ಮಿಕ ಕಾಯ್ದೆ 1986ರ ಅನ್ವಯ ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳಲು ಹಾಗೂ 18 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧ ಎಂದರು.

2021–22ನೇ ಸಾಲಿನಲ್ಲಿ ಜಿಲ್ಲಾದ್ಯಂತ ಬಾಲ್ಯ ಮತ್ತು ಕಿಶೋರ ಕಾರ್ಮಿಕ ಸಮೀಕ್ಷೆ ನಡೆಸಲಾಗಿತ್ತು. ಸಮೀಕ್ಷೆಯಲ್ಲಿ 9 ಬಾಲ ಕಾರ್ಮಿಕರು ಹಾಗೂ 28 ಕಿಶೋರ ಕಾರ್ಮಿಕರನ್ನು ಪತ್ತೆ ಹಚ್ಚಲಾಗಿದ್ದು, ಸಂಬಂಧಪಟ್ಟ ಸಕ್ಷಮ ನ್ಯಾಯಾಲಯಗಳಲ್ಲಿ ಕಾನೂನು ಉಲ್ಲಂಘಿಸಿದ ಉದ್ಯೋಗದಾತರರ ವಿರುದ್ಧ ಒಟ್ಟು 34 ಪ್ರಕರಣ ದಾಖಲಿಸಲಾಗಿದ್ದು, ಜಿಲ್ಲೆಯಲ್ಲಿ 631 ಸಂಸ್ಥೆಗಳನ್ನು ತಪಾಸಣೆ ನಡೆಸಲಾಗಿದೆ ಎಂದರು.

ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಬಾಲಕಾರ್ಮಿಕ ಪದ್ಧತಿ ವಿರುದ್ಧ ಅರಿವು ಮೂಡಿಸಲು ಜಿಲ್ಲಾದ್ಯಂತ 15 ಬೀದಿ ನಾಟಕಗಳು, ಪಂಚಾಯಿತಿ ಮಟ್ಟದಲ್ಲಿ 7 ದಿನ ಜಾಗೃತಿ ವಾಹನ ಪ್ರಚಾರಗಳು ಹಾಗೂ ಕರಪತ್ರ ವಿತರಣೆ ಕಾರ್ಯಕ್ರಮ ನಡೆಸಲಾಗಿದೆ ಎಂದರು.

ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ನಿರ್ಮೂಲನೆಗೆ ಸಂಬಂಧಿಸಿದಂತೆ ಪ್ರಬಂಧಗಳು ಹಾಗೂ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಕೃಷ್ಣಪ್ರಸಾದ್‌ರಾವ್, ಜಿಪಂ ಯೋಜನಾ ನಿರ್ದೇಶಕ ಧನರಾಜ್, ಪೊಲೀಸ್ ಅಧಿಕಾರಿ ದೇವರಾಜ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಘಟಕದ ಅಧಿಕಾರಿ ಪಿ.ಅನ್ನದಾನಿ ಇತರರಿದ್ದರು.

ಕೆ.ಶೆಟ್ಟಹಳ್ಳಿ ಬಳಿ ಲಾರಿ ಪಲ್ಟಿ



ಶ್ರೀರಂಗಪಟ್ಟಣ, ಜೂ.12– ಚಾಲಕನ ನಿಯಂತ್ರಣ ಕಳೆದುಕೊಂಡ ಲಾರಿ ರಸ್ತೆ ಬದಿಯ ಡಿವೈಡರ್‌ಗೆ ಡಿಕ್ಕಿ ಹೊಡೆದು ಪಲ್ಟಿಯಾಗಿರುವ ಘಟನೆ ತಾಲೂಕಿನ ಕೆ.ಶೆಟ್ಟಹಳ್ಳಿ ಗ್ರಾಮದ ಬಳಿ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ನಡೆದಿದೆ.

ತಾಲೂಕಿನ ಗಣಂಗೂರಿನಿಂದ ಮಣ್ಣು ತುಂಬಿಕೊಂಡು ಬರುತ್ತಿದ್ದ ಲಾರಿ ಚಾಲಕನ ನಿಯಂತ್ರಣ ಕಳೆದುಕೊಂಡು ಕೆ.ಶೆಟ್ಟಹಳ್ಳಿ ಬಳಿ ರಸ್ತೆಬದಿಯ ಡಿವೈಡರ್‌ಗೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಈ ವೇಳೆ ಹೆದ್ದಾರಿಯ ಎರಡೂ ಬದಿ ರಸ್ತೆಗೂ ಮಣ್ಣು ಬಿದ್ದಿದೆ. ಪರಿಣಾಮ ಕೆಲಕಾಲ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಕ್ರೇನ್ ಮೂಲಕ ಲಾರಿ ಮತ್ತು ಹೆದ್ದಾರಿಯ 2 ಬದಿಯಲ್ಲಿ ಬಿದ್ದಿದ್ದ ಮಣ್ಣನ್ನು ತೆರವುಗೊಳಿಸಿ ರಸ್ತೆ ಸಂಚಾರ ಸುಗಮಗೊಳಿಸಿದ್ದಾರೆ. ಲಾರಿ ಪಲ್ಟಿಯಾದ ವೇಳೆ ಅಕ್ಕಪಕ್ಕ ಯಾವುದೇ ವಾಹನ ಬಾರದಿರುವುದರಿಂದ ಭಾರೀ ಅನಾಹುತ ತಪ್ಪಿದಂತಾಗಿದೆ. ಚಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಈ ಸಂಬಂಧ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭಾರತಿ ನಿಧನ

ನಾಗಮಂಗಲ, ಜೂ.12– ಪಟ್ಟಣದ ನಿವಾಸಿ ಶ್ರೀಧರ್ ಅವರ ಪತ್ನಿ ಭಾರತಿ(43) ಶನಿವಾರ ರಾತ್ರಿ ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಪುತ್ರಿ ಸೇರಿ ದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ರುದ್ರಭೂಮಿಯಲ್ಲಿ ಭಾನುವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಅರಮನೆ ಆವರಣದಲ್ಲಿ 16 ಸಾವಿರ ಯೋಗ ಪಟುಗಳಿಂದ ಪೂರ್ವಾಭ್ಯಾಸ ಯೋಗ ಪ್ರದರ್ಶನ

ಒಂದನೇ ಪುಟದಿಂದ

ಮುಂದಿನ ಭಾನುವಾರ (ಜೂ.19) ಮಹತ್ವದ ಪೂರ್ವಾಭ್ಯಾಸವನ್ನು ಕೇಂದ್ರ ಆಯುಷ್ ಇಲಾಖೆ ಆಯೋಜಿಸಲಿದೆ ಎಂದು ಹೇಳಲಾಗಿದೆ. ಮೇ 22ರಂದು ಮಹಾರಾಜ ಕಾಲೇಜು ಮೈದಾನದಲ್ಲಿ, ಮೇ 29ರಂದು ಸುತ್ತೂರು ಮಠದಲ್ಲಿ ಪೂರ್ವಾಭ್ಯಾಸ ನಡೆಸಲಾಗಿತ್ತು. ಯೋಗ ಶಿಷ್ಟಾಚಾರದಡಿ ಮೊದಲ ಅಧಿಕೃತ ಪೂರ್ವಾಭ್ಯಾಸ ಕಳೆದ ಜೂ.5ರಂದು ಅರಮನೆ ಆವರಣದಲ್ಲಿ ನಡೆಸಲಾಗಿತ್ತು.

ಇಂದಿನ ಪೂವಾಭ್ಯಾಸ ಯೋಗ ಕಾರ್ಯಕ್ರಮವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಪ್ರಧಾನಿ ಮೋದಿಯವರು ಉದ್ದೇಶಪೂರ್ವಕವಾಗಿ ಜೂ.21 ಅನ್ನು ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಆಯ್ಕೆ ಮಾಡಿದ್ದಾರೆ. ಅಂದು ಸೂರ್ಯ ಉತ್ತರ ಧ್ರುವದಲ್ಲಿ 24 ಗಂಟೆಯೂ ಇರುತ್ತಾನೆ. ಹಾಗಾಗಿಯೇ ಮೋದಿಯವರು ಆ ದಿನವನ್ನು ಆಯ್ಕೆ ಮಾಡಿದ್ದಾರೆ. ಪ್ರತಿದಿನ ಯೋಗಾಭ್ಯಾಸ ಮಾಡುವುದರಿಂದ ಆರೋಗ್ಯಕರ ವಿಶ್ವವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಮೊರಾರ್ಜಿ ದೇಸಾಯಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಯೋಗದ ನಿರ್ದೇಶಕ ಡಾ.ಈಶ್ವರ ಬಸವಾರೆಡ್ಡಿ ಮಾತನಾಡಿ, ಮೈಸೂರು ಮಹಾರಾಜರು ಹಲವಾರು ಪುಸ್ತಕಗಳನ್ನು ಬರೆದಿದ್ದು, ಒಂದು ಪುಸ್ತಕದಲ್ಲಿ ಅರಮನೆ ಯೋಗಗುರು ಟಿ.ಕೃಷ್ಣಮಾಚಾರ್ಯ ಅವರನ್ನು ಆಧುನಿಕ ಯೋಗದ ಪಿತಾಮಹ ಎಂದು ಉಲ್ಲೇಖಿಸಲ್ಪಟ್ಟಿರುವುದನ್ನು ತಿಳಿಸಿದರು.

ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿಯವರ ಭೇಟಿ ಮೈಸೂರಿಗೆ ವಿಶೇಷ ಹೆಮ್ಮೆ ತರಲಿದೆ. ಯೋಗವನ್ನು ಮೊದಲು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪ್ರಾರಂಭಿಸಿದರು. ಅರಮನೆ ಹಿಂಭಾಗದಲ್ಲಿರುವ ಸಂಸ್ಕೃತ ಪಾಠಶಾಲೆಯಲ್ಲಿ ಯೋಗ ಪರಿಚಯಿಸಲಾಯಿತು. ಕೃಷ್ಣಮಾಚಾರ್ಯರು ಉಸಿರಾಟ ಮತ್ತು ದೈಹಿಕ ವ್ಯಾಯಾಮದ ಪ್ರಾಮುಖ್ಯತೆ, ಯೋಗ ಆಸನಗಳನ್ನು ಸಂಯೋಜಿಸಿದ ಮೊದಲ ಗುರುಗಳಲ್ಲಿ ಒಬ್ಬರಾಗಿದ್ದಾರೆ. ಅವರ ಶಿಷ್ಯರಾದ ಪಟ್ಟಾಭಿ ಜೋಯಿಸ್ ಮತ್ತು ಬಿಕೆಎಸ್ ಅಯ್ಯಂಗಾರ್ ಅವರು ಯೋಗವನ್ನು ವಿಶ್ವಾದ್ಯಂತ ಜನಪ್ರಿಯಗೊಳಿಸಿದರು ಎಂದು ತಿಳಿಸಿದರು.

ಇಂದಿನ ಕಾರ್ಯಕ್ರಮದಲ್ಲಿ ಯೋಗ ಫೆಡರೇಷನ್ ಆಫ್ ಮೈಸೂರು ಗೌರವಾಧ್ಯಕ್ಷರೂ ಆಗಿರುವ ಶಾಸಕ ಎಸ್.ಎ.ರಾಮದಾಸ್, ಸಂಸದ ಪ್ರತಾಪ್‌ಸಿಂಹ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷ ಎನ್.ವಿ.ಫಣೀಶ್, ಯೋಗ ಫೆಡರೇಷನ್ ಆಫ್ ಮೈಸೂರು ಅಧ್ಯದಕ್ಷ ಡಿ.ಶ್ರೀಹರಿ, ಉಪಾಧ್ಯಕ್ಷ ಸತ್ಯನಾರಾಯಣ, ಕಾರ್ಯದರ್ಶಿ ಡಾ.ಪಿ.ಎನ್.ಗಣೇಶ್‌ಕುಮಾರ್, ಶಶಿಕುಮಾರ್, ಖಜಾಂಚಿ ಬಿ.ಪಿ.ಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

ವಿಶೇಷ ವೇದಿಕೆ

ಜೂ.21ರಂದು ಮೋದಿ ಭಾಗವಹಿಸಲಿರುವ ಹಿನ್ನೆಲೆಯಲ್ಲಿ ಅರಮನೆಯ ಎದುರಿನ ಬಲರಾಮ–ಜಯರಾಮ ದ್ವಾರದ ಮುಂಭಾಗದಲ್ಲಿ ವಿಶೇಷ ವೇದಿಕೆ ಸಜ್ಜುಗೊಳಿಸಲಾಗುತ್ತಿದೆ. ವೇದಿಕೆಯಿಂದ ಅರಮನೆಯ ಅಂದ ಸವಿಯಲು ಸೂಕ್ತ ಸ್ಥಳವನ್ನು ವಿನ್ಯಾಸಗೊಳಿಸಲಾಗಿದೆ. ಪ್ರಧಾನಮಂತ್ರಿ ಹಾಗೂ ಯೋಗಪಟುಗಳು ಅರಮನೆಯ ಹಿನ್ನೆಲೆಯಲ್ಲಿ ಯೋಗ ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗುತ್ತಿದೆ.

ಜೂ.19ರ ಪೂರ್ವಾಭ್ಯಾಸದಲ್ಲಿ ಭಾಗವಹಿಸುವವರಿಗೆ ಮಾತ್ರ ಪ್ರಧಾನಿ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ

ಯೋಗ ಫೆಡರೇಷನ್ ಆಫ್ ಮೈಸೂರು ಗೌರವಾಧ್ಯಕ್ಷ, ಶಾಸಕ ರಾಮದಾಸ್

ಮೈಸೂರು, ಜೂ.12(ಆರ್‌ಕೆಬಿ)–ಕೇಂದ್ರ ಆಯುಷ್ ಇಲಾಖೆ 6X6 ಅಡಿ ಸ್ಥಳ ನೀಡುವಂತೆ ಸೂಚಿಸಿರುವಂತೆ ವೇದಿಕೆಯನ್ನು ಅರಮನೆಯ ಮುಂಭಾಗ ಸಿದ್ಧತೆ ಮಾಡಲಾಗುತ್ತಿದ್ದು, ಪ್ರತಿಯೊಬ್ಬರಿಗೆ 6X6 ಅಳತೆ ತೆಗೆದುಕೊಂಡರೆ ಈ ಸ್ಥಳದಲ್ಲಿ 15 ಸಾವಿರ ಜನರಿಗೆ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ನೋಂದಾವಣೆ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ ಎಂದು ಯೋಗ ಫೆಡರೇಷನ್ ಆಫ್ ಮೈಸೂರು ಗೌರವಾಧ್ಯಕ್ಷರೂ ಆಗಿರುವ ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.

ಮೈಸೂರಿನ ಅರಮನೆ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ಪೂವಾಭ್ಯಾಸದ ವೇದಿಕೆ ಕಾರ್ಯಕ್ರಮದ ಬಳಿಕ ಮಾಧ್ಯಮದೊಂದಿಗೆ ಪ್ರತಿಕ್ರಿಯಿಸಿದರು. ಯೋಗ ಕಾರ್ಯಕ್ರಮದಲ್ಲಿ 6ನೇ ತರಗತಿಯಿಂದ 92ರ ವಯೋವೃದ್ಧರವರೆಗೂ ಭಾಗವಹಿಸಲಿದ್ದಾರೆ. ಪೌರಕಾರ್ಮಿಕರು, ತೃತೀಯ ಲಿಂಗಿಗಳು, ಹೆಚ್‌ಐವಿ ಪಾಸಿಟಿವ್ ಮಕ್ಕಳು, ದೈಹಿಕ ವಿಕಲಾಂಗ ವ್ಯಕ್ತಿಗಳು ಸೇರಿದಂತೆ ವಿವಿಧ ವರ್ಗದ 42 ವರ್ಗದ ವ್ಯಕ್ತಿಗಳಿಗೆ ಯೋಗದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಯಾರ್‍ಯಾರು ಎಷ್ಟು ಸಂಖ್ಯೆಯಲ್ಲಿ ಇರಬೇಕೆಂಬ ಸೂಚನೆ ಬಂದಿದೆಯೋ ಆ ಪ್ರಕಾರವೇ ನೋಂದಣಿ ಪ್ರಕ್ರಿಯೆ ನಡೆದಿದೆ. ಅಂತಹ ವರ್ಗದವರಿಗೆ ಈಗಾಗಲೇ 126 ಯೋಗ ಶಿಕ್ಷಕರು ವಿವಿಧ 42 ಕಡೆಗಳಲ್ಲಿ ತರಬೇತಿ ನೀಡುತ್ತಿದ್ದಾರೆ. ಜೂ.19ರಂದು ನಡೆಯುವ ಪೂರ್ವಾ ಭ್ಯಾಸದಲ್ಲಿ ಭಾಗವಹಿಸುವವರಿಗೆ ಯಾರ್‍ಯಾರಿಗೆ ಅಧಿಕೃತ ಕಾರ್ಡ್ ವಿತರಿಸಲಾಗಿರುತ್ತದೆಯೋ ಅವರಿಗೆ ಮಾತ್ರ ಜೂ.21ರಂದು ಅಂತಾರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸುವ ವ್ಯವಸ್ಥೆ ಇದೆ ಎಂದರು. ಈಗಾಗಲೇ ನೋಂದಾವಣಿ ಅರ್ಜಿಯಲ್ಲಿ ಭಾಗವಹಿಸುವ ವ್ಯಕ್ತಿಯ ಹೆಸರು, ವಯಸ್ಸು, ಆಧಾರ್ ಸಂಖ್ಯೆ, ಕಡ್ಡಾಯವಾಗಿ 2 ಕೋವಿಡ್ ವ್ಯಾಕ್ಸಿನ್ ಪಡೆದಿರುವ ಬಗ್ಗೆ ಮಾಹಿತಿ ಪಡೆಯಲಾಗುತ್ತಿದೆ. ಅಲ್ಲದೆ ಭಾಗವಹಿಸುವವರಿಗೆ ಕೇಂದ್ರ ಸರ್ಕಾರದಿಂದಲೇ ಟೀ ಶರ್ಟ್‌ಗಳನ್ನು ನೀಡುವ ವ್ಯವಸ್ಥೆ ಇದೆ ಎಂದು ತಿಳಿಸಿದರು.



ಪೂವಾಭ್ಯಾಸ ಯೋಗ ಕಾರ್ಯಕ್ರಮವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಎಸ್.ಎ.ರಾಮದಾಸ್, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಇನ್ನಿತರರಿದ್ದಾರೆ.

ಜೂ.21ರ ಪ್ರಧಾನಿ ನರೇಂದ್ರ ಮೋದಿ ಯೋಗ ಕಾರ್ಯಕ್ರಮ ಅಂಕಿ ಸಂಖ್ಯೆಯಲ್ಲಿ ಸಂಸದ, ಶಾಸಕರ ಮಧ್ಯೆ ಗೊಂದಲ

● 7–8 ಸಾವಿರ ಜನರಿಗೆ ಮಾತ್ರ ಅವಕಾಶ: ಸಂಸದ ಪ್ರತಾಪ್‌ಸಿಂಹ ● ಇಲ್ಲ; 15 ಸಾವಿರ ಜನರಿಗೆ ಈಗಾಗಲೇ ಅವಕಾಶ ಆಗಿದೆ: ಶಾಸಕ ಎಸ್.ಎ.ರಾಮದಾಸ್

ಮೈಸೂರು, ಜೂ.12(ಆರ್‌ಕೆಬಿ)– ಪ್ರಧಾನ ಮಂತ್ರಿ ನರೇಂದ್ರ ಮೋದಿ ಭಾಗವಹಿಸುವ ಜೂ.21ರ ಅಂತಾರಾಷ್ಟ್ರೀಯ ಯೋಗ ದಿನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವ ಯೋಗಪಟುಗಳ ಅಂಕಿ ಸಂಖ್ಯೆಗೆ ಸಂಬಂಧಿಸಿದಂತೆ ಭಾನುವಾರ ಅರಮನೆ ಆವರಣದಲ್ಲಿ ಯೋಗ ರಿಹರ್ಸಲ್ ಸಂದರ್ಭದಲ್ಲಿ ಸಂಸದ ಪ್ರತಾಪ್‌ಸಿಂಹ– ಶಾಸಕ ರಾಮದಾಸ್ ನಡುವೆ ಸ್ವಲ್ಪ ಗೊಂದಲ ಉಂಟಾಯಿತು.

ಪ್ರಧಾನಿ ಭಾಗವಹಿಸುವ ಕಾರ್ಯಕ್ರಮದಲ್ಲಿ 7–8 ಸಾವಿರ ಜನ ಭಾಗವಹಿಸುತ್ತಾರೆಂದು ಸಂಸದ ಪ್ರತಾಪ್‌ಸಿಂಹ ಹೇಳಿದರೆ, ಇಲ್ಲ ಅಂದು 15–16 ಸಾವಿರ ಮಂದಿ ಭಾಗವಹಿಸುವ ಸಾಧ್ಯತೆ ಇದೆ ಎಂದು ಯೋಗ ಫೆಡರೇಷನ್ ಆಫ್ ಮೈಸೂರು ಗೌರವಾಧ್ಯಕ್ಷರೂ ಆಗಿರುವ ಶಾಸಕ ರಾಮದಾಸ್ ತಿಳಿಸಿದರು. ಮೋದಿ ಕಾರ್ಯಕ್ರಮದಲ್ಲಿ ಎಷ್ಟು ಜನ ಭಾಗವಹಿಸುತ್ತಾರೆಂಬ ಬಗ್ಗೆ ಇಬ್ಬರ ನಡುವೆ ಗೊಂದಲ ಇರುವುದು ಮಾಧ್ಯಮ ಮುಂದೆ ಬಯಲಾಯಿತು.

ಭಾನುವಾರದ ಯೋಗ ಪೂರ್ವಾಭ್ಯಾಸದ ವೇದಿಕೆ ಕಾರ್ಯಕ್ರಮದ ಬಳಿಕ ಸಂಸದ ಪ್ರತಾಪ್ ಸಿಂಹ ಮಾಧ್ಯಮಗಳ ಮುಂದೆ ಮಾತನಾಡುವಾಗ ಮೋದಿ ಭಾಗವಹಿಸುವ ಕಾರ್ಯಕ್ರಮದಲ್ಲಿ ಒಬ್ಬರಿಗೆ ಯೋಗ ಮಾಡಲು 6X6 ಅಡಿ ಜಾಗ ಬೇಕಾಗುತ್ತದೆ. ಅದಕ್ಕನುಗುಣವಾಗಿ ಅರಮನೆ ಎದುರಿನ ಜಾಗದಲ್ಲಿ ಗರಿಷ್ಠ 7–8 ಸಾವಿರ ಜನರಿಗೆ ಅವಕಾಶವಾಗುತ್ತದೆ ಎಂದು ವಿವರಿಸುತ್ತಿದ್ದರು. ಆಗ ಮಧ್ಯ ಪ್ರವೇಶಿಸಿದ ಶಾಸಕ ರಾಮದಾಸ್, ಈಗಾಗಲೇ 15 ಸಾವಿರ ನೋಂದಣಿ ಆಗಿದೆ. ಆಗಲೇ ಆದೇಶ ಸಹ ಮಾಡಿದ್ದಾರೆ ಎಂದರು.

ತಾವು ಮಾಧ್ಯಮದ ಮುಂದೆ ವಿವರಣೆ ನೀಡುವಾಗ ಮಧ್ಯ ಬಾಯಿ ಹಾಕಿದ ರಾಮದಾಸ್ ಅವರ ಬಗ್ಗೆ ಸಹಜವಾಗಿ ಸಂಸದ ಪ್ರತಾಪ್‌ಸಿಂಹ ಅವರಿಗೆ ಬೇಸರವಾಯಿತು. ಆಗ 'ನಾನು ಮಾತನಾಡುತ್ತಿದ್ದೇನೆ. ರಾಮದಾಸ್‌ಜೀ, ದಯವಿಟ್ಟು ಸಮಾಧಾನದಿಂದ ಇರಬೇಕು' ಎಂದು ಕೊಂಚ ಬೇಸರದಿಂದಲೇ ಹೇಳಿದರು. ಆಗ ರಾಮದಾಸ್ ವಾಸ್ತವ ಸ್ಥಿತಿಯನ್ನು ತಿಳಿಸಲು ಮುಂದಾಗಿದ್ದಾಗಿ ಗೊಣಗಿದರು. ನಂತರ ಮಾತು ಮುಂದುವರಿಸಿದ ಸಂಸದ ಪ್ರತಾಪ್ ಸಿಂಹ, ಅರಮನೆ ಎದುರು 7–8 ಸಾವಿರ ಜನರಿಗೆ ಅವಕಾಶ ಸಿಗುತ್ತದೆ. ಒಟ್ಟಾರೆ ಇಡೀ ಅರಮನೆ ಆವರಣದಲ್ಲಿ ಎಲ್ಲೆಲ್ಲಿ ಖಾಲಿ ಜಾಗ ಉಳಿದಿರುತ್ತದೆಯೋ ಇದನ್ನೆಲ್ಲಾ ಸೇರಿಸಿಕೊಂಡು 14–15 ಸಾವಿರ ಎಂದು ಯೋಚನೆ ಮಾಡಿದ್ದಾರೆ. ಆದರೆ ಮೋದಿಯವರ ಕಾರ್ಯಕ್ರಮದಲ್ಲಿ ಅವಕಾಶ ಇರುವುದು 7–8 ಸಾವಿರ ಜನರಿಗೆ ಮಾತ್ರ, ಉಳಿದ ಕಡೆ ಸ್ಕ್ರೀನ್‌ಗಳನ್ನು ಅಳವಡಿಸಲಾಗುವುದು ಎಂದರು.

ನಂತರ ಮಾಧ್ಯಮಗಳೊಂದಿಗೆ ಪ್ರತಿಕ್ರಿಯಿಸಿದ ಮೈಸೂರು ಯೋಗ ಫೆಡರೇಷನ್ ಅಧ್ಯಕ್ಷ, ಶಾಸಕ ಎಸ್.ಎ.ರಾಮದಾಸ್, ಜೂ.21ರ ಕಾರ್ಯಕ್ರಮದ ಎಲ್ಲಾ ಹಂತದ ಸಿದ್ಧತೆಗಳಲ್ಲಿ ನಾನು ಭಾಗವಹಿಸಿದ್ದೇನೆ. ಅಲ್ಲದೆ ಈಗಾಗಲೇ 15 ಸಾವಿರ ಮಂದಿ ಭಾಗವಹಿಸುವ ಕುರಿತು ಪ್ರತಿಯೊಬ್ಬರಿಗೆ 6X6 ಅಡಿ ಜಾಗ ಇಟ್ಟುಕೊಳ್ಳುವ ಅವಕಾಶ ಪಡೆಯಲಾಗಿದೆ. ಸಂಸದ ಪ್ರತಾಪ್‌ಸಿಂಹ ಅವರಿಗೆ ಈ ಬಗ್ಗೆ ಮಾಹಿತಿ ಇಲ್ಲದಿರಬಹುದು. ಹಾಗಾಗಿ ನಾನು ಕೇವಲ ಸಂಖ್ಯೆಗಳ ಬಗ್ಗೆ ಸ್ಪಷ್ಟನೆ ನೀಡಿದ್ದೇನಷ್ಟೆ, ಸಂಸದರೊಂದಿಗೆ ಯಾವುದೇ ಭಿನ್ನಾಭಿ ಪ್ರಾಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಆಯುಷ್ ಇಲಾಖೆ ಹೊಸ ಲಿಂಕ್ ಪ್ರಕಟ


ಈ ಸಂಬಂಧ ಶಾಸಕ ಎಸ್.ಎ.ರಾಮದಾಸ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರು ಪಾಲ್ಗೊಳ್ಳುವ ಅಂತಾರಾಷ್ಟ್ರೀಯ ಯೋಗದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬಯಸುವ ಯೋಗಪಟುಗಳ ಹೆಸರನ್ನು ನೋಂದಾಯಿಸುವ ಪ್ರಕ್ರಿಯೆಯನ್ನು ಶನಿವಾರದಿಂದ ಆರಂಭಿಸಲಾಗಿತ್ತು. ಸುಮಾರು 1500 ರಿಂದ 1800 ಮಂದಿ ಯೋಗಪಟುಗಳು ಹೆಸರು ನೋಂದಾಯಿಸಿದ್ದರು. ಆದರೆ, ಭದ್ರತಾ ಹಿತದೃಷ್ಟಿಯಿಂದ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳಲಿರುವ ಯೋಗಪಟುಗಳ ಐಡೆಂಟಿಟಿಗಾಗಿ ಆಧಾರ್ ಕಾರ್ಡ್ ನಂಬರ್ ನಮೂದು, ಕೊರೊನಾ ಲಸಿಕೆ ಪಡೆದಿರುವ ಮಾಹಿತಿ ನಮೂದು ಮಾಡಬೇಕಾದ ಹಿನ್ನೆಲೆಯಲ್ಲಿ ಗೂಗಲ್ ರಿಜಿಸ್ಟ್ರೇಷನ್ ಸ್ಥಗಿತಗೊಳಿಸಲಾಗಿದೆ. ನಾಳೆಯಿಂದ ಆಯುಷ್ ಇಲಾಖೆ ಹೊಸದಾಗಿ ನೋಂದಣಿ ಮಾಡುವ ಲಿಂಕ್ ಬಿಡುಗಡೆ ಮಾಡಲಿದೆ ಎಂದು ತಿಳಿಸಿದರು.

ಅರಮನೆ ಆವರಣದಲ್ಲಿ ಈ ಬಾರಿ 15 ಸಾವಿರ ಮಂದಿ ಯೋಗ ಮಾಡಲು ಅವಕಾಶ ದೊರೆಯಲಿದೆ. ಅದರಲ್ಲಿ, 5 ಸಾವಿರ ಮಂದಿಯನ್ನು ವಿವಿಧ ಯೋಗ ಶಾಲೆಗಳ ಯೋಗಪಟು, 25 ಮಂದಿ ತೃತೀಯಲಿಂಗಿಗಳು, 15 ಮಂದಿ ಹೆಚ್‌ಐವಿ ಪೀಡಿತರು, 100 ಮಂದಿ ಕ್ರೀಡಾಪಟುಗಳು, ಆಟೋ ಚಾಲಕರು, ಎನ್‌ಸಿಸಿ, ಎನ್‌ಎಸ್‌ಎಸ್, ಬೀದಿಬದಿ ವ್ಯಾಪಾರಿ, ಟಿಬೇಟಿಯನ್ನರು, ಶ್ರೀಶಕ್ತಿ ಸಂಘ, ಅರಣ್ಯ, ವೈದ್ಯಕೀಯ ಸೇರಿದಂತೆ ವಿವಿಧ ಇಲಾಖೆಯ ತಲಾ 50 ಮಂದಿಗೆ ಅವಕಾಶ ನೀಡಲಾಗುತ್ತದೆ. 8 ಸಾವಿರ ಮಂದಿ ಹೆಸರನ್ನು ಆನ್‌ಲೈನ್ ಮೂಲಕ ನೊಂದಣಿ ಮಾಡಿಕೊಳ್ಳಲಾಗುತ್ತದೆ. ಎರಡು ಸಾವಿರ ಮಂದಿಗೆ ಸ್ಥಳಾವಕಾಶ ಕಾಯ್ದಿರಿಸಲಾಗಿದ್ದು, ಅಂದು ಸಚಿವರು, ಕೇಂದ್ರದ ಅಧಿಕಾರಿಗಳು, ವಿವಿಧ ಕ್ಷೇತ್ರದ ಗಣ್ಯರು, ಅಧಿಕಾರಿ ವರ್ಗ ಸೇರಿದಂತೆ ಗಣ್ಯರಿಗೆ ಮೀಸಲಿಡಲಾಗುತ್ತದೆ ಎಂದು ತಿಳಿಸಿದರು.

ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಶ್ರೀಹರಿ ಮಾತನಾಡಿ, ಭದ್ರತೆಯ ಹಿತದೃಷ್ಟಿಯಿಂದ ಪ್ರಧಾನ ಮಂತ್ರಿಗಳ ಭದ್ರತಾ ವಿಭಾಗದ ಅಧಿಕಾರಿಗಳ ಸೂಚನೆ ಮೇರೆಗೆ ಈ ಹಿಂದೆ ನೋಂದಣಿ ಮಾಡಿಕೊಳ್ಳುತ್ತಿದ್ದ ಪ್ರಕ್ರಿಯೆ ಸ್ಥಗಿತಗೊಳಿಸಲಾಗಿದೆ. ಕೆಲವು ಮಾರ್ಪಾಡು ಮಾಡಿ ನಾಳೆಯಿಂದಲೇ ಆಯುಷ್ ಇಲಾಖೆ ನೋಂದಣಿ ಪ್ರಕ್ರಿಯೆಗೆ ಹೊಸ ಲಿಂಕ್ ಅನ್ನು ಬಿಡುಗಡೆ ಮಾಡಲಿದೆ. ಯೋಗ ಸಂಸ್ಥೆಗಳ ಪ್ರತಿನಿಧಿಸುವ ಯೋಗಪಟುಗಳ ಹೆಸರು ನೋಂದಾಯಿಸುವ ಪ್ರಕ್ರಿಯೆನ್ನು ಐದು ಕಡೆ ಯೋಗ ಸಂಸ್ಥೆಗಳು ಮಾಡುತ್ತಿವೆ ಎಂದರು.

ಯೋಗ ದಿನಚರಿಯ ಭಾಗವಾಗಲಿ: ದೇಶದ ಜನರಲ್ಲಿ ಮೋದಿ ಮನವಿ

ನವದೆಹಲಿ, ಜೂ.12– ಅಂತಾರಾಷ್ಟ್ರೀಯ ಯೋಗ ದಿನ (ಜೂ.21) ಹತ್ತಿರವಾಗುತ್ತಿರುವ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿಯವರು, ದೇಶವಾಸಿಗಳಲ್ಲಿ ಯೋಗವನ್ನು ತಮ್ಮ ದಿನಚರಿಯ ಭಾಗವಾಗಿಸಿಕೊಳ್ಳಲು ಮನವಿ ಮಾಡಿದ್ದಾರೆ. ಈ ಬಗ್ಗೆ ಕನ್ನಡದಲ್ಲಿಯೂ ಟ್ವೀಟ್ ಮಾಡಿರುವ ಅವರು, ಇನ್ನು ಕೆಲವೇ ದಿನಗಳಲ್ಲಿ ಜಗತ್ತು ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಿದೆ. ಯೋಗ ದಿನವನ್ನು ಆಚರಿಸುವಂತೆಯೇ ಯೋಗವನ್ನು ನಿಮ್ಮ ದಿನಚರಿಯ ಭಾಗವಾಗಿಸಿಕೊಳ್ಳಿ. ಅದರಿಂದಾಗುವ ಲಾಭ ಹಲವಾರು ಎಂದು ಬರೆದುಕೊಂಡಿದ್ದಾರೆ.





ಮೈಸೂರು ಮಿತ್ರ ಸೋಮವಾರ 13 ಜೂನ್ 2022

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ

ಮಸ್ಟರಿಂಗ್ ಪೂರ್ಣ; ಇಂದು ಮತದಾನ



ಚಾಮರಾಜನಗರ, ಜೂ.12–ದಕ್ಷಿಣ ಪದವೀಧರರ ಕ್ಷೇತ್ರದಿಂದ ರಾಜ್ಯ ವಿಧಾನ ಪರಿಷತ್‌ಗೆ ನಡೆಯುತ್ತಿರುವ ಚುನಾವಣಾ ಸಂಬಂಧ ಹಿನ್ನೆಲೆಯಲ್ಲಿ ಇಂದು ನಗರದಲ್ಲಿ ಮಸ್ಟರಿಂಗ್ ಪ್ರಕ್ರಿಯೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ನೇತೃತ್ವದಲ್ಲಿ ನಡೆಯಿತು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಭಾನುವಾರ ಬೆಳಗ್ಗೆ ಜಿಲ್ಲೆಯ 12 ಮತಗಟ್ಟೆಗಳಿಗೆ ನೇಮಕವಾಗಿರುವ ಮತಗಟ್ಟೆ ಅಧಿಕಾರಿ, ಸಹಾಯಕ ಮತಗಟ್ಟೆ ಅಧಿಕಾರಿ, ಮೈಕ್ರೋ ಅಬ್ಸರ್‌ವರ್‌ಗಳು ಹಾಜರಿದ್ದು, ಮಸ್ಟರಿಂಗ್ ಕಾರ್ಯ ಪೂರ್ಣಗೊಳಿಸಿದರು.

ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಖುದ್ದು ಹಾಜರಿದ್ದು, ಮಸ್ಟರಿಂಗ್ ಪ್ರಕ್ರಿಯೆ ವೀಕ್ಷಿಸಿದರು. ಮುಕ್ತ, ಪಾರದರ್ಶಕ ಹಾಗೂ ನ್ಯಾಯಸಮ್ಮತ ಚುನಾವಣೆಗೆ ಅಧಿಕಾರಿಗಳು ಕಟ್ಟುನಿಟ್ಟಾಗಿ ಕಾರ್ಯ ನಿರ್ವಹಿಸಬೇಕು. ಯಾವುದೇ ಲೋಪಗಳಿಗೆ ಅವಕಾಶವಾಗದಂತೆ ಚುನಾವಣಾ ಆಯೋಗದ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸಬೇಕು. ಯಶಸ್ವಿಯಾಗಿ ಚುನಾವಣಾ ಕರ್ತವ್ಯ ನಿರ್ವಹಿಸಬೇಕು ಎಂದು ಸೂಚಿಸಿದರು.

ಮತದಾರರ ಮಾಹಿತಿಗೆ ಸಹಾಯವಾಣಿ

ಚಾಮರಾಜನಗರ: ಪದವೀಧರರ ಕ್ಷೇತ್ರದ ಚುನಾವಣಾ ಸಂಬಂಧ ಸೋಮವಾರ ಮತದಾನ ನಡೆಯಲಿದ್ದು, ಜಿಲ್ಲಾ ವ್ಯಾಪ್ತಿಯ ಪದವೀಧರ ಮತದಾರರಿಗೆ ಅವರ ಮತಗಟ್ಟೆ ಸಂಖ್ಯೆ, ಮತದಾರರ ಪಟ್ಟಿಯಲ್ಲಿನ ಕ್ರಮಸಂಖ್ಯೆಯ ಮಾಹಿತಿ ತಿಳಿಸಲು ಎಲ್ಲಾ ತಾಲೂಕು ಕೇಂದ್ರಗಳಲ್ಲೂ ಸಹಾಯವಾಣಿ ಆರಂಭಿಸಲಾಗಿದೆ.

ಗುಂಡ್ಲುಪೇಟೆ ತಾಲೂಕಿಗೆ ಸಂಬಂಧಿಸಿದಂತೆ ಗ್ರಾಮಲೆಕ್ಕಾಧಿಕಾರಿ ಸಂತೋಷ್ ಬಡಿಗೇರ್ ಮೊ.7259506821, ಗ್ರಾಮಲೆಕ್ಕಾಧಿಕಾರಿ ಭಗವಂತರಾಯ ಮೊ. 9740503854, ಚಾಮರಾಜನಗರ ತಾಲೂಕಿಗೆ ಸಂಬಂಧಿಸಿದಂತೆ ಗ್ರಾಮ ಲೆಕ್ಕಾಧಿಕಾರಿ ಸಂಪಿಕ ಮೊ.9380054039, ಗ್ರಾಮಲೆಕ್ಕಾಧಿಕಾರಿ ಅನುಪಮಾ ಮೊ.8951767414, ಯಳಂದೂರು ತಾಲೂಕಿಗೆ ಸಂಬಂಧಿಸಿದಂತೆ ದ್ವಿತೀಯ ದರ್ಜೆ ಸಹಾಯಕ ಅಭಿನವ್‌ರಾಗ್ ಮೊ.9743655778, ಗ್ರಾಮ ಲೆಕ್ಕಾಧಿಕಾರಿ ನಂದಕುಮಾರ್ ಮೊ. 8183024048, ಕೊಳ್ಳೇಗಾಲ ತಾಲೂಕಿಗೆ ಸಂಬಂಧಿಸಿದಂತೆ ಗ್ರಾಮಲೆಕ್ಕಾಧಿಕಾರಿ ಸಿ.ಎಸ್.ಶ್ರೀಧರ್ ಮೊ.8105352950, ಗ್ರಾಮಲೆಕ್ಕಾಧಿಕಾರಿ ಬಿ.ಸುರೇಶ್ ಮೊ. 9110803094 ಹಾಗೂ ಹನೂರು ತಾಲೂಕಿಗೆ ಸಂಬಂಧಿಸಿದಂತೆ ದ್ವಿತೀಯ ದರ್ಜೆ ಸಹಾಯಕಿ ಮಹೇಶ್ವರಿ ಮೊ.6361589931, ಗ್ರಾಮಲೆಕ್ಕಾಧಿಕಾರಿ ಸೌಮ್ಯ ಮೊ. 9900947762 ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಬಳಿಕ ಮತಗಟ್ಟೆ ಅಧಿಕಾರಿಗಳು, ಸಹಾಯಕ ಮತಗಟ್ಟೆ ಅಧಿಕಾರಿ, ಸಿಬ್ಬಂದಿ, ಮೈಕ್ರೋ ಅಬ್ಸರ್‌ವರ್‌ಗಳು ಮತಪೆಟ್ಟಿಗೆ ಚುನಾವಣಾ ಸಾಮಗ್ರಿಗಳೊಂದಿಗೆ ಪೊಲೀಸರ ಭದ್ರತೆಯಲ್ಲಿ ನಿಯೋಜಿತ ಮತಗಟ್ಟೆಗಳಿಗೆ ಜೀಪ್ ಮೂಲಕ ತೆರಳಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿದೇವಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರರಾಜು, ಉಪ ವಿಭಾಗಾಧಿಕಾರಿ ಗೀತಾ ಹುಡೇದ, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ನೋಡೆಲ್ ಅಧಿಕಾರಿಗಳಾದ ಶಿಕ್ಷಣಾಧಿ ಕಾರಿ ಮಂಜುನಾಥ್, ಪರಿಸರ ಅಧಿಕಾರಿ ರಘುರಾವ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಕೆ.ಸುರೇಶ್ ಇತರರಿದ್ದರು.

ಬಾಲಕಾರ್ಮಿಕ ಪದ್ಧತಿ ತಡೆಗೆ ಸಮುದಾಯ ಸಹಭಾಗಿತ್ವ ಅಗತ್ಯ

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರರಾಜು ಅಭಿಮತ



ಚಾಮರಾಜನಗರ, ಜೂ.12–ಬಾಲ ಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ಬೇರುಸಮೇತ ಕಿತ್ತೊಗೆಯಲು ಸಮುದಾಯದ ಸಹಭಾಗಿತ್ವ ಅಗತ್ಯ ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರರಾಜು ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಪಂಚಾಯತ್ ಹಳೇ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನವನ್ನು ಇಂದು ವಿಶ್ವಾದ್ಯಂತ ಆಚರಿಸಲಾಗುತ್ತಿದ್ದು, ಬಾಲಕಾರ್ಮಿಕ ಪದ್ಧತಿಯನ್ನು ತಡೆದು ಜನ ಸಾಮಾನ್ಯರಲ್ಲಿ ಅರಿವು ಮೂಡಿಸಲು 2022ರಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಮಕ್ಕಳನ್ನು ಸಮಾಜದ ಸತ್ಪ್ರಜೆಗಳಾಗಿ ರೂಪಿಸಬೇಕಾದ ನಾಗರಿಕರೇ ಇಂದು ಬಾಲಕಾರ್ಮಿಕರಾಗಿ ದುಡಿಸಿಕೊಳ್ಳುತ್ತಿದ್ದಾರೆ. ಬಡತನ, ಅನಕ್ಷರತೆ ಹಾಗೂ ಅಜ್ಞಾನದಿಂದ ಇಂದು ಬಾಲಕಾರ್ಮಿಕ ಪದ್ಧತಿ ಜೀವಂತವಾಗಿದೆ ಎಂದು ವಿಷಾದಿಸಿದರು.

ರಾಜ್ಯದಲ್ಲಿ ಶೇ.43ರಷ್ಟು, ದೇಶದಲ್ಲಿ 10 ಮಿಲಿಯನ್ ಹಾಗೂ ಜಾಗತಿಕವಾಗಿ 160 ಮಿಲಿಯನ್ ಬಾಲಕಾರ್ಮಿಕ ಮಕ್ಕಳನ್ನು ಗುರುತಿಸಲಾಗಿದೆ. ಬಾಲಕಾರ್ಮಿಕರಾಗಿ ದುಡಿಯುವ ಕೆಲ ಮಕ್ಕಳು ವಿವಿಧ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವ ಸಂಭವವಿರು ತ್ತಿದೆ. 18 ವರ್ಷದೊಳಗಿನ ಮಕ್ಕಳನ್ನು ದುಡಿಮೆಗೆ ದೂಡದೇ ಉತ್ತಮ ಶಿಕ್ಷಣ ನೀಡಿ ಸಮಾಜದ ಮುಖ್ಯವಾಹಿನಿಗೆ ತರಬೇಕು. ಈ ನಿಟ್ಟಿನಲ್ಲಿ ಪ್ರತಿ ತಂದೆ ತಾಯಿ, ಪೋಷಕರು, ಜನಪ್ರತಿನಿಧಿಗಳು, ಸಮುದಾಯ, ಅಧಿಕಾ ರಿಗಳು ಕಾರ್ಯೋನ್ಮುಖರಾಗಬೇಕು ಎಂದು ಸುಂದರರಾಜು ತಿಳಿಸಿದರು.

ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷೆ ಸರಸ್ವತಿ, ಬಾಲಕಾರ್ಮಿಕ ಪದ್ಧತಿ ತಡೆಗಟ್ಟುವುದು ಕಾರ್ಮಿಕ ಇಲಾಖೆಯ ಕೆಲಸ ಮಾತ್ರವಲ್ಲ. ಸಂಬಂಧಿತ ಇಲಾಖೆಗಳಾದ ಶಿಕ್ಷಣ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಅರಣ್ಯ, ಸಾರಿಗೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಆದ್ಯ ಕರ್ತವ್ಯವಾಗಿದೆ. ಎಲ್ಲಾ ಮಕ್ಕಳಿಗೂ ಕಡ್ಡಾಯ ಶಿಕ್ಷಣ ನೀಡುವ ಮೂಲಕ 2025 ರೊಳಗೆ ಬಾಲ ಕಾರ್ಮಿಕ ಮುಕ್ತ ಭಾರತಕ್ಕೆ ಎಲ್ಲರೂ ಶ್ರಮಿಸಬೇಕು ಎಂದರು.

ಜಿಲ್ಲಾ ಹೆಚ್ಚುವರಿ ಪ್ರಧಾನ ನ್ಯಾಯಾಧೀಶೆ ನಿವೇದಿತಾ, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತ ಪ್ರತಿಜ್ಞಾವಿಧಿ ಬೋಧಿಸಿದರು. ಜಿಪಂ ಲೆಕ್ಕಾಧಿಕಾರಿ ಗಂಗಾಧರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಗೋವಿಂದ ರಾಜು ಹಾಗೂ ಮೈಸೂರಿನ ಡಾನ್ ಬಾಸ್ಕೋ ಸಮಾಜ ಸೇವಾ ಸಂಸ್ಥೆ ನಿರ್ದೇಶಕ ಫಾದರ್ ಸಿಜು ಥಾಮಸ್ ಮಾತನಾಡಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ.ಮಹದೇವಸ್ವಾಮಿ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಯೋಜನಾ ನಿರ್ದೇಶಕ ಎಂ. ಮಹೇಶ್, ಹಿರಿಯ ಕಾರ್ಮಿಕ ನಿರೀಕ್ಷಕಿ ವೀಣಾ, ತಾಲೂಕು ವೈದ್ಯಾಧಿಕಾರಿ ಡಾ. ಶ್ರೀನಿವಾಸ್, ಜಿಲ್ಲಾ ಗ್ಯಾರೇಜ್ ನೌಕರರ ಸಂಘದ ಅಧ್ಯಕ್ಷ ಫೈರೋಜ್‌ಖಾನ್, ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಟಿ.ಜೆ.ಸುರೇಶ್ ಇತರರಿದ್ದರು.

ವಿಧಾನಪರಿಷತ್ ಚುನಾವಣೆ

ಬಿಜೆಪಿ ಅಭ್ಯರ್ಥಿ ರವಿಶಂಕರ್, ಜೆಡಿಎಸ್ ಅಭ್ಯರ್ಥಿ ರಾಮು ವಿರುದ್ಧ ಎಫ್‌ಐಆರ್

ಚಾಮರಾಜನಗರ, ಜೂ.12–ವಿಧಾನಪರಿಷತ್ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯ ಬಿಜೆಪಿ ಅಭ್ಯರ್ಥಿ ಮೈವಿ. ರವಿಶಂಕರ್ ಹಾಗೂ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಅನುಮತಿ ಪಡೆಯದೇ ಜಾಹೀರಾತು, ಪಕ್ಷದ ಚಿಹ್ನೆಯೊಟ್ಟಿಗೆ ಮತದಾರರ ಪಟ್ಟಿಯನ್ನು ವೆಬ್‌ಸೈಟಿನಲ್ಲಿ ಅಪ್‌ಲೋಡ್ ಮಾಡಿದ ಇಬ್ಬರು ಅಭ್ಯರ್ಥಿಗಳ ವಿರುದ್ಧ ಚಾಮರಾಜನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಮರಾಜನಗರ ಪಟ್ಟಣ ಠಾಣೆಯಲ್ಲಿ ಐಪಿಸಿ 171(ಸಿ) ಅಡಿ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಭೀಮಸೇನ್ ಗುಡೂರ್ ಪ್ರಕರಣ ದಾಖಲಿಸಿದ್ದಾರೆ.

ಮಾಧ್ಯಮ ಸರ್ಟಿಫಿಕೇಷನ್ ಹಾಗೂ ಮಾನಿಟರಿಂಗ್ ಕಮಿಟಿಯಿಂದ ಯಾವುದೇ ಅನುಮತಿ ಪಡೆಯದೇ ಪಕ್ಷದ ಚಿಹ್ನೆಯಡಿ ಮತದಾರರ ಪಟ್ಟಿ ಅಪ್‌ಲೋಡ್ ಮಾಡಿದ್ದು ಹಾಗೂ ಜಾಹೀರಾತು ನೀಡಿದ್ದರಿಂದ ಈ ಪ್ರಕರಣ ದಾಖಲಾಗಿದೆ.

ಆಲೂರಿನಲ್ಲಿ ಸರಣಿ ಕಳ್ಳತನ

ಆಲೂರು, ಜೂ.12–ಎರಡು ಟೀ ಸ್ಟಾಲ್ ಹಾಗೂ ಸೇವಿಂಗ್ ಷಾಪ್ ಬೀಗ ಮುರಿದು ಕಳ್ಳತನ ಮಾಡಿರುವ ಘಟನೆ ಶನಿವಾರ ರಾತ್ರಿ ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದ ಬಸ್ ನಿಲ್ದಾಣದ ಬಳಿ ನಡೆದಿದೆ. ಗ್ರಾಮದ ಎಸ್.ಪಿ.ಮಹೇಶ್ ಹಾಗೂ ಪುಟ್ಟಣ್ಣಾ ಆರಾಧ್ಯ ಅವರಿಗೆ ಸೇರಿದ ಎರಡು ಟೀ ಸ್ಟಾಲ್ ಬೀಗ ಮುರಿದು ಎರಡು ಅಂಗಡಿಯಲ್ಲಿ ತಲಾ ಸಾವಿರಕ್ಕೂ ಹೆಚ್ಚು ನಗದು, ಚಿಲ್ಲರೆ ಹಣ, ಸಿಗರೇಟು–ಬೀಡಿ ಬಂಡಲ್ ಕಳ್ಳತನ ಮಾಡಿದ್ದಾರೆ. ಸೇವಿಂಗ್ ಷಾಪ್ ಬೀಗ ಮುರಿದು, ಬರಿಗೈಯಲ್ಲಿ ವಾಪಸ್ಸಾಗಿದ್ದಾರೆ. ಅಲ್ಲದೆ ಪಕ್ಕದಲ್ಲಿರುವ ಮಲ್ಲಣ್ಣ ಅವರ ಚಿಲ್ಲರೆ ಅಂಗಡಿ ಬೀಗ ಮುರಿಯುವ ವಿಫಲ ಯತ್ನ ಮಾಡಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿರುವ ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ಪರಿಶೀಲಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ

ಯಳಂದೂರಲ್ಲಿ ಶಾಂತಿ ಸಭೆ



ಯಳಂದೂರು, ಜೂ.12(ವಿ.ನಾಗರಾಜು)–ಪ್ರವಾದಿ ಮಹಮ್ಮದ್ ಪೈಗಂಬರ್ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿ ಉಚ್ಚಾಟನೆಯಾಗಿರುವ ಬಿಜೆಪಿ ರಾಷ್ಟ್ರೀಯ ವಕ್ತಾರೆ ನೂಪುರ್ ಶರ್ಮಾ ಹಾಗೂ ಬಿಜೆಪಿ ಮಾಧ್ಯಮ ಘಟಕದ ಮುಖ್ಯಸ್ಥ ನವೀನ್ ಕುಮಾರ್ ಜಿಂದಾಲ್ ವಿರುದ್ಧ ದೇಶದೆಲ್ಲೆಡೆ ಆಕ್ರೋಶ ವ್ಯಕ್ತವಾಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಪಟ್ಟಣ ಠಾಣೆಯಲ್ಲಿ ಮುಸ್ಲಿಂ ಮುಖಂಡರ ಶಾಂತಿ ಸಭೆ ನಡೆಸಲಾಯಿತು. ಪಿಎಸ್‌ಐ ಕರಿಬಸಪ್ಪ ನೇತೃತ್ವದಲ್ಲಿ ನಡೆದ ಸಭೆಯ ಅಧ್ಯಕ್ಷತೆಯನ್ನು ಸಿಪಿಐ ಎಂ.ಶಿವಮಾದಯ್ಯ ವಹಿಸಿದ್ದರು.

ಈ ವೇಳೆ ಮುಸ್ಲಿಂ ಮುಖಂಡರಾದ ನಯಾಜ್ ಖಾನ್, ಮುಜೀಬ್, ಜಿಯಾ ಉಲ್ಲಾ ಖಾನ್, ಫೈರೋಜ್ ಖಾನ್, ಇರಸವಾಡಿ ಗ್ರಾಮದ ಮುಸ್ಲಿಂ ಮುಖಂಡರು ಸೇರಿದಂತೆ ಮುಂತಾದವರು ಭಾಗವಹಿಸಿದ್ದರು.

ಪರಿಚಿತರ ಮನೆಯಲ್ಲೇ ಸರ ಕದ್ದವನ ಸೆರೆ



ಬೇಗೂರು, ಜೂ.12(ಕಿರಣ್)–ಪರಿಚಿತರ ಮನೆವೊಂದರಲ್ಲಿ 2 ಲಕ್ಷ 80 ಸಾವಿರ ರೂ. ಮೌಲ್ಯದ ಚಿನ್ನದ ಸರ ಎಗರಿಸಿದ್ದ ಕಳ್ಳನನ್ನು ಗುಂಡ್ಲುಪೇಟೆ ತಾಲೂಕಿನ ಬೇಗೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗುಂಡ್ಲುಪೇಟೆ ತಾಲೂಕಿನ ಯಡವನಹಳ್ಳಿ ಗ್ರಾಮದ ಬಸವರಾಜು ಬಂಧಿತ ಆರೋಪಿ. ಈತ ಕೆಲವು ದಿನಗಳ ಹಿಂದೆ ಗುಂಡ್ಲುಪೇಟೆಯ ಕೆಬ್ಬೇಪುರ ಗ್ರಾಮದ ಪರಿಚಿತರ ಮನೆಯಲ್ಲಿ 59 ಗ್ರಾಂ. ತೂಕದ ಸುಮಾರು 2 ಲಕ್ಷ 80 ಸಾವಿರ ರೂ. ಮೌಲ್ಯದ ಚಿನ್ನದ ಸರವನ್ನು ಕಳ್ಳತನ ಮಾಡಿದ್ದ. ಈ ಪ್ರಕರಣ ಭೇದಿಸಿರುವ ಬೇಗೂರು, ಮಾಲು ಸಮೇತ ಆರೋಪಿ ಯನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಕಿರಣ್‌ಕುಮಾರ್, ಸಬ್‌ಇನ್ಸ್‌ಪೆಕ್ಟರ್ ಜಗದೀಶ್ ಧೂಳಶೆಟ್ಟಿ, ಪ್ರೊಬೆಷನರಿ ಸಬ್‌ಇನ್ಸ್‌ಪೆಕ್ಟರ್ ಸುನಿಲ್, ಸಿಬ್ಬಂದಿ ಗಣೇಶ್, ಪ್ರದೀಪ್, ಚಾಲಕ ನಾಗೇಂದ್ರ ಭಾಗವಹಿಸಿದ್ದರು.

ಕೇಂದ್ರ ಸಚಿವ ನಿತಿನ್ ಗಡ್ಕರಿ ಭೇಟಿಯಾದ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್

ಚನ್ನರಾಯಪಟ್ಟಣ–ಸೋಮವಾರಪೇಟೆ–ಮಾಕುಟ್ಟ ರಸ್ತೆ ದ್ವಿಪಥಕ್ಕೆ ಮನವಿ

ಮಡಿಕೇರಿ,ಜೂ.12– ಕೊಡಗು ಜಿಲ್ಲೆಗೆ ವಿಶ್ರಾಂತಿಗೆ ಆಗಮಿಸಿರುವ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಭಾನುವಾರ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಭೇಟಿಯಾಗಿ ಕೊಡಗು ಜಿಲ್ಲೆಯ ರಸ್ತೆ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿ ಕುರಿತು ಚರ್ಚೆ ನಡೆಸಿದರು.

ಇದೇ ಸಂದರ್ಭ ಚನ್ನರಾಯಪಟ್ಟಣ–ಅರಕಲಗೂಡು–ಶನಿವಾರಸಂತೆ–ಸೋಮವಾರಪೇಟೆ–ಮಡಿಕೇರಿ–ವಿರಾಜಪೇಟೆ–ಮಾಕುಟ್ಟ ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಪರಿವರ್ತಿಸಲು ಅನುದಾನ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ನಿತಿನ್ ಗಡ್ಕರಿ, ಮುಂದಿನ ದಿನಗಳಲ್ಲಿ ಈ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮಾರ್ಪಡಿಸಲು ಕಾರ್ಯಕ್ರಮ ರೂಪಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಅಪ್ಪಚ್ಚು ರಂಜನ್ ತಿಳಿಸಿದ್ದಾರೆ.

ಕೇಬಲ್ ಕಾರ್: ಕೇಂದ್ರ ಸಚಿವರನ್ನು ಭೇಟಿ ಮಾಡಿದ ಕುರಿತು ಪ್ರತಿಕ್ರಿಯಿಸಿದ ಶಾಸಕ ಅಪ್ಪಚ್ಚು ರಂಜನ್, ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೇಬಲ್ ಕಾರ್ ಮಾಡುವ ಅವಕಾಶವಿದ್ದು, ಕೂಡಲೇ ಅಂದಾಜು ಪಟ್ಟಿ ಸಲ್ಲಿಸಲು ಅಗತ್ಯ ಕ್ರಮವಹಿಸುವಂತೆ ಸಚಿವರು ಸಲಹೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಸೋಮವಾರಪೇಟೆ ತಾಲೂಕಿನ ಮಲ್ಲಳ್ಳಿ ಜಲಪಾತದಲ್ಲಿ ಕೇಬಲ್ ಕಾರ್ ಮಾಡುವ ಕುರಿತು ಚಿಂತನೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಮಲ್ಲಳ್ಳಿ ಜಲಪಾತದಲ್ಲಿ ಕೇಬಲ್ ಕಾರ್‌ಗೆ ಚಿಂತನೆ



ಮಲ್ಲಳ್ಳಿ ಜಲಪಾತದ ಒಂದು ಬೆಟ್ಟದಿಂದ ಮತ್ತೊಂದು ಬೆಟ್ಟಕ್ಕೆ ಕೇಬಲ್ ಕಾರ್ ಅಳವಡಿಸುವ ಕುರಿತು ಈ ಹಿಂದೆಯೂ ಸ್ಥಳ ಪರಿಶೀಲನೆ ನಡೆಸಲಾಗಿತ್ತು. ಇದೀಗ ಮತ್ತೊಮ್ಮೆ ಸ್ಥಳ ಪರಿಶೀಲನೆ ನಡೆಸಿ, ಸರ್ವೆ ಮಾಡಿ ಯೋಜನೆಯ ಸಂಪೂರ್ಣ ವಿವರ ಮತ್ತು ಪ್ರಸ್ತಾವನೆಯನ್ನು ಕೇಂದ್ರ ಸಚಿವರಿಗೆ ಸಲ್ಲಿಸಲಾಗುತ್ತದೆ. ಮಡಿಕೇರಿ ಸುತ್ತಮುತ್ತಲಿನ ಪ್ರವಾಸಿ ತಾಣಗಳಲ್ಲಿ ಜನ ದಟ್ಟಣೆ ಇರುವುದನ್ನು ಮನಗಂಡು ಮಲ್ಲಳ್ಳಿ ಜಲಪಾತ ಸೂಕ್ತ ಎಂದು ಅಂದಾಜಿಸಲಾಗಿದೆ. ಇದರಿಂದ ಪ್ರವಾಸೋದ್ಯಮ ವ್ಯಾಪ್ತಿಯೂ ವಿಸ್ತಾರವಾಗಲಿದೆ ಎಂದು ಶಾಸಕ ಅಪ್ಪಚ್ಚು ರಂಜನ್ ಅಭಿಪ್ರಾಯಪಟ್ಟರು.

7 ಸಾವಿರ ಕೋಟಿ ಲಾಭ: ಕಾಫಿ, ಕರಿಮೆಣಸು, ಏಲಕ್ಕಿ ಕೊಡಗು ಜಿಲ್ಲೆಯ ಆರ್ಥಿಕತೆಯ ಮೂಲ ಆದಾಯ ಎಂದು ಸಚಿವ ನಿತಿನ್ ಗಡ್ಕರಿ ಅವರ ಗಮನ ಸೆಳೆದಿರುವುದಾಗಿ ಅಪ್ಪಚ್ಚು ರಂಜನ್ ಮಾಹಿತಿ ನೀಡಿದರು. ಕೊಡಗಿನ ಆರ್ಥಿಕತೆಯ ಕುರಿತು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಮಾಹಿತಿ ನೀಡಿದ ರಂಜನ್, ಜಿಲ್ಲೆಯಲ್ಲಿ ಅತೀ ಹೆಚ್ಚು ಪ್ರಮಾಣದಲ್ಲಿ ಕಾಫಿ ಹಾಗೂ ಕರಿಮೆಣಸು ಬೆಳೆಯಲಾಗುತ್ತದೆ. ಕಳೆದ 2 ವರ್ಷಗಳ ಹಿಂದೆ ಫಸಲು ಹಾಗೂ ದರವೂ ಇರಲಿಲ್ಲ, ಈ ಬಾರಿ ಕಾಫಿಗೆ ಉತ್ತಮ ದರ ದೊರೆತಿದೆ ಎಂದು ವಿವರಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ನಿತಿನ್ ಗಡ್ಕರಿ, ಕಾಫಿಯ ವಿದೇಶ ರಫ್ತಿನಿಂದ ಕೇಂದ್ರ ಸರಕಾರಕ್ಕೆ 7 ಸಾವಿರ ಕೋಟಿ ರೂ. ಆದಾಯ ಲಭಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಶಾಸಕ ಅಪ್ಪಚ್ಚು ರಂಜನ್ ಮಾಹಿತಿ ನೀಡಿದರು.

ಕಾಂಗ್ರೆಸ್ ಕಾರ್ಯಕರ್ತರು ಒಗ್ಗಟ್ಟಾಗಿರಬೇಕು

ವಿಧಾನಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ



ಮಡಿಕೇರಿ, ಜೂ.12– ಕಾಂಗ್ರೆಸ್ ಒಂದೇ ಕುಟುಂಬವಾಗಿದ್ದು, ಎಲ್ಲರೂ ಒಟ್ಟಾಗಿ ಮುನ್ನಡೆಯಬೇಕಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಕರೆ ನೀಡಿದರು.

ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಬ್ಲಾಕ್ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ಇತಿಹಾಸ ತುಂಬಾ ಶ್ರೀಮಂತವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಪಕ್ಷದ ಶಕ್ತಿ ಏಕೆ ಕುಂಠಿತವಾಗುತ್ತಿದೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಪಕ್ಷದಲ್ಲಿ ಯಾರಿಗೆ ಟಿಕೆಟ್ ನೀಡಿದರೂ ಅಸಮಾಧಾನಗೊಳ್ಳದೇ, ಪಕ್ಷದ ಅಭ್ಯರ್ಥಿ ಗೆಲ್ಲಿಸುವ ನಿಟ್ಟಿನಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡಬೇಕಿದೆ ಎಂದರು.

ಮಾಜಿ ಸಚಿವ ಬಿ.ಎ.ಜೀವಿಜಯ ಮಾತನಾಡಿ, ಪಕ್ಷದಲ್ಲಿ ಮೇಲು ಕೀಳೆಂಬ ಭಾವನೆ ಇರಬಾರದು. ಪಕ್ಷ ಕಟ್ಟುವ ಸಲುವಾಗಿ ಕಾರ್ಯಕರ್ತರೆಲ್ಲಾ ಕೆಲಸ ಮಾಡಬೇಕಿದೆ. ರಾಜ್ಯ ಹಾಗೂ ದೇಶದಲ್ಲಿ ಅಶಾಂತಿ ವಾತಾವರಣವಿದ್ದು, ಕೋಮು ಗಲಭೆ, ಪಠ್ಯ ಪುಸ್ತಕ ಕೇಸರೀಕರಣದಂತಹ ಹುನ್ನಾರ ನಡೆಯುತ್ತಿದೆ. ಇವೆಲ್ಲಾ ವಿಚಾರಗಳ ವಿರುದ್ಧ ಹೋರಾಟ ನಡೆಸಲು ಕಾಂಗ್ರೆಸ್‌ನಲ್ಲಿ ಒಗ್ಗಟ್ಟಿನ ಅವಶ್ಯಕತೆಯಿದೆ ಎಂದರು.

ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಎ.ಎಸ್.ಪೊನ್ನಣ್ಣ ಮಾತನಾಡಿ, ಪಕ್ಷ ಹಾಗೂ ಪಕ್ಷ ಸಿದ್ಧಾಂತಕ್ಕೆ ನಮ್ಮ ಬದ್ಧತೆ ಏನು ಎಂಬುದು ಮುಖ್ಯವಾಗಿದೆ. ಆದರೆ ಕೆಲವರು ಪ್ರತಿಷ್ಠೆಗಾಗಿ ಪಕ್ಷವನ್ನು ತೊರೆದು ಹೋಗುತ್ತಿದ್ದಾರೆ. ಸಾರ್ವಜನಿಕ ಜೀವನದಲ್ಲಿ ವೈಯಕ್ತಿಕ ಇಚ್ಛೆಗಳನ್ನು ಬದಿಗಿಡುವುದರೊಂದಿಗೆ ಶಿಸ್ತು ಮತ್ತು ಬದ್ಧತೆ ನಮಗೆ ನಾವೇ ಅಳವಡಿಸಿಕೊಂಡು ಪಕ್ಷ ಕಟ್ಟುವ ಕೆಲಸ ಮಾಡಬೇಕಿದೆ ಎಂದರು.

ಇದೇ ವೇಳೆ ಬ್ಲಾಕ್ ಕಾಂಗ್ರೆಸ್ ಸಮಿತಿ ವಿವಿಧ ಮುಂಚೂಣಿ ಘಟಕಗಳಿಗೆ ಆಯ್ಕೆಯಾಗಿರುವ ನೂತನ ಪದಾಧಿಕಾರಿಗಳ ಪದಗ್ರಹಣ ನಡೆಯಿತು. ಮಡಿಕೇರಿ ನಿವೃತ್ತ ಪೊಲೀಸ್ ಅಧಿಕಾರಿ ಪೆರುಮಾಳಪ್ಪ ಸೇರಿದಂತೆ ಹಲವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ವೇದಿಕೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜಾ ಉತ್ತಪ್ಪ, ಕಾಂಗ್ರೆಸ್ ನಾಯಕರಾದ ಟಿ.ಪಿ ರಮೇಶ್, ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎ.ಹಂಸ ಹೆಚ್.ಎಂ. ನಂದಕುಮಾರ್, ಮಂಥರ್ ಗೌಡ, ಕೆ.ಎ ಯಾಕೂಬ್ ಮತ್ತಿತರರಿದ್ದರು.

ಗ್ರೀನ್ ಸಿಟಿ ಫೋರಂ ಅಧ್ಯಕ್ಷರಾಗಿ ಚೆಯ್ಯಂಡ ಸತ್ಯ ಗಣಪತಿ ಆಯ್ಕೆ



ಚೆಯ್ಯಂಡ ಸತ್ಯ ಗಣಪತಿ



ಮೋಂತಿ ಗಣೇಶ್



ವ್ಯಾಂಡಮ್ ದಾಮೋದರ್

ಮಡಿಕೇರಿ,ಜೂ.12– ಗ್ರೀನ್ ಸಿಟಿ ಫೋರಂ ಅಧ್ಯಕ್ಷರಾಗಿ ಚೆಯ್ಯಂಡ ಸತ್ಯ ಗಣಪತಿ, ಪ್ರಧಾನ ಕಾರ್ಯದರ್ಶಿಯಾಗಿ ಮೋಂತಿ ಗಣೇಶ್ ಹಾಗೂ ಖಜಾಂಚಿಯಾಗಿ ವ್ಯಾಂಡಮ್ ದಾಮೋದರ್ ಆಯ್ಕೆಯಾಗಿದ್ದಾರೆ.

ನಿರ್ಗಮಿತ ಅಧ್ಯಕ್ಷ ಪಿ.ಕೃಷ್ಣಮೂರ್ತಿ ಅಧ್ಯಕ್ಷತೆಯಲ್ಲಿ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಫೋರಂ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ನಿರ್ದೇಶಕರಾಗಿ ಕುಕ್ಕೇರ ಜಯ ಚಿಣ್ಣಪ್ಪ, ಅಂಬೆಕಲ್ ನವೀನ್ ಕುಶಾಲಪ್ಪ, ಪಿ.ಕೃಷ್ಣಮೂರ್ತಿ, ಕಿರಿಯಮಾಡ ರತನ್ ತಮ್ಮಯ್ಯ, ಮಾದೇಟಿರ ತಿಮ್ಮಯ್ಯ, ಅಜ್ಜಮಾಡ ರಮೇಶ್ ಕುಟ್ಟಪ್ಪ, ಕನ್ನಂಡ ಕವಿತಾ ಬೊಳ್ಳಪ್ಪ, ಸವಿತಾ ಭಟ್, ಪೊಳಕಂಡ ರಾಜೇಶ್, ಪ್ರಜ್ಞಾ ರಾಜೇಂದ್ರ ಆಯ್ಕೆಯಾಗಿದ್ದಾರೆ.

ಕೊಡಗಿನಲ್ಲಿ ನಿಲ್ಲದ ಕಾಡಾನೆಗಳ ಉಪಟಳ





ನಾಪೋಕ್ಲು, ಜೂ.12ದುಗ್ಗಳ ಸದಾನಂದ)– ಕೊಡಗಿನಲ್ಲಿ ಕಾಡಾನೆಗಳ ಉಪಟಳ ಮುಂದುವರೆದಿದ್ದು, ನಾಪೋಕ್ಲು ಬಳಿ ಇತ್ತೀಚೆಗಷ್ಟೆ ಮರಂದೋಡ ಗ್ರಾಮದ ಕೆರೆಯಲ್ಲಿ ಸಾಕಲಾಗಿದ್ದ ಮೀನುಗಳನ್ನು ನಾಶಗೊಳಿಸಿದೆ.

ಇತ್ತೀಚೆಗಷ್ಟೇ ಎರಡು ಆನೆಗಳನ್ನು ಹಿಡಿದು ಸಾಗಿಸಲಾಗಿತ್ತು. ಉಳಿದ ಕಾಡಾನೆಗಳ ಹಿಂಡು ಇಲ್ಲೇ ಬೀಡು ಬಿಟ್ಟಿದ್ದು, ದಾಳಿ ಮುಂದುವರೆಸಿವೆ. ಪರಿಣಾಮವಾಗಿ ಮರಂದೋಡು ಗ್ರಾಮದ ಮಾರ್ತಂಡ ಪ್ರವೀಣ್ ಎಂಬವರ ಜಮೀನಿನಲ್ಲಿ ನಿರ್ಮಿಸಿದ್ದ ಕೆರೆಗೆ ದಾಳಿ ಮಾಡಿರುವ ಕಾಡಾನೆಗಳ ಹಿಂಡು ಕೆರೆಯಲ್ಲಿ ಸಾಕಿದ್ದ ಮೀನುಗಳನ್ನು ಧ್ವಂಸ ಮಾಡಿದೆ. ಅಲ್ಲದೆ ಪಕ್ಕದಲ್ಲಿದ್ದ ಬಾಳೆ ತೋಟಕ್ಕೂ ದಾಳಿ ಮಾಡಿದ್ದು. ಲಕ್ಷಾಂತರ ರೂ. ನಷ್ಟ ಉಂಟಾಗಿದೆ. ಅರಣ್ಯ ಇಲಾಖೆ ಆನೆಗಳನ್ನು ಹಿಡಿಯಲು ಕ್ರಮಕೈಗೊಳ್ಳಬೇಕಿದ್ದು, ನಷ್ಟ ಪರಿಹಾರ ಕೊಡಿಸುವಂತೆ ಪ್ರವೀಣ್ ಒತ್ತಾಯಿಸಿದ್ದಾರೆ.

ವಿರಾಜಪೇಟೆಯಲ್ಲಿ ಬೆಳೆಗಾರರ ವಿಚಾರ ಸಂಕಿರಣ



ವಿರಾಜಪೇಟೆ, ಜೂ.12– ಈ ಹಿಂದೆ ಇದ್ದಂತೆ ಕೇಂದ್ರ ಸರಕಾರ ಬೆಳೆಗಾರರಿಂದ ಕಾಫಿ ಖರೀದಿ ಮಾಡಿ ಉತ್ತಮ ಅಂತಾರಾಷ್ಟ್ರೀಯ ಮಾರುಕಟ್ಟೆ ಲಭಿಸುವಂತೆ ಕ್ರಮಕೈಗೊಳ್ಳುವಂತೆ ನೋಡಿಕೊಳ್ಳಬೇಕು ಎಂದು ಕೊಡಗು ಕಿಸಾನ್ ಸಭಾ ಘಟಕದ ಮುಖಂಡ ಡಾ. ದುರ್ಗಾಪ್ರಸಾದ್ ಆಗ್ರಹಿಸಿದರು.

ಅಖಿಲ ಭಾರತ ಕಾಫಿ ಬೆಳೆಗಾರ ಸಭೆಯ ಅಂಗವಾಗಿ ಭಾರತ ಕಿಸಾನ್ ಸಭಾ ಪ್ರಾಂತ ರೈತ ಸಂಘದ ವತಿಯಿಂದ ಪಟ್ಟಣದ ದೊಡ್ಡಟ್ಟಿ ಚೌಕಿಯಲ್ಲಿರುವ ದರ್ಶನ್ ಆರ್ಕಿಡ್ ಸಭಾಂಗಣದಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಬೆಳೆಗಾರರು ಬೆಲೆ ಏರಿಳಿತದಿಂದ ಪರಿತಪಿಸುತ್ತಿದ್ದು, ಹಾಗೂ ಉತ್ತಮ ದರ ನೀಡದೆ ಅನ್ಯರು ಲಾಭ ಮಾಡಿಕೊಳ್ಳುತ್ತಿದ್ದಾರೆ ಕೊಡಗಿನಲ್ಲಿ ಉತ್ತಮ ಗುಣ ಮಟ್ಟದ ಕಾಳುಮೆಣಸು ಬೆಳೆದರೂ ಹೊರಗಿನಿಂದ ಬರುವ ಕಾಳುಮೆಣಸಿನಿಂದ ಉತ್ತಮ ದರ ಸಿಗದೆ ಕಂಗಾಲಾಗಿದ್ದಾರೆ. ಹೊರಗಿನಿಂದ ಕಳ್ಳ ಸಾಗಣೆ ಮೂಲಕ ಭಾರತಕ್ಕೆ ಬರುತ್ತಿರುವ ಅಡಿಕೆಯಿಂದ ಬೆಳೆಗಾರರಿಗೆ ಸೂಕ್ತ ದರ ಸಿಗದಂತಾಗಿದೆ. ಮೆಣಸು ಮತ್ತು ಅಡಿಕೆ ಮ್ಯಾನ್ಮಾರ್ ದೇಶದಿಂದ ಮಣಿಪುರದ ಮೂಲಕ ಬಾಂಗ್ಲಾ ಗಡಿ, ಮತ್ತಿತರ ಕಡೆಯಿಂದ ಕಳ್ಳ ಸಾಗಣಿಕೆಯಲ್ಲಿ ಬರುತ್ತಿದ್ದು, ಇದರ ಗುಣ ಮಟ್ಟವೂ ಕಳಪೆಯಾಗಿದೆ. ಇದನ್ನು ಕೇಂದ್ರ ಸರಕಾರ ಕಟ್ಟುನಿಟ್ಟಾಗಿ ಪ್ರತಿಬಂಧಿಸಬೇಕು. ದೇಶದ ಬೆಳೆಗಾರರಿಗೆ ಅನುಕೂಲವಾಗುವಂತೆ ಮಾಡಬೇಕು. ಉಳ್ಳವರು ಸರಕಾರಿ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡಿರುವುದನ್ನು ಮರಳಿ ಪಡೆಯದೆ ಸರಕಾರ ಗುತ್ತಿಗೆ ನೀಡಲು ಹೊರಟಿದೆ. ತಲಾಂತರದಿಂದ ವಾಸಿಸುತ್ತಿರುವ ಪರಿಶಿಷ್ಟ ಪಂಗಡ ಮತ್ತು ವರ್ಗದವರಿಗೆ ಸರಕಾರಿ ಜಾಗ ಖಾಲಿ ಮಾಡುವಂತೆ ಸೂಚಿಸುತ್ತಿರುವುದು ವಿಪರ್ಯಾಸ ನಿಯಮದಂತೆ ಐದು ಎಕರೆಗಿಂತ ಕಡಿಮೆ ಜಾಗವನ್ನು ಸಕ್ರಮ ಮಾಡಿಕೊಡುವುದು ಉತ್ತಮ ಎಂದ ದುರ್ಗಾಪ್ರಸಾದ್, ಐದು ರಾಜ್ಯದ ಜನರಿಗೆ ಮಾರಕವಾಗಿರುವ ಕಸ್ತೂರಿರಂಗನ್ ವರದಿ ತಿರಸ್ಕಾರ ಆಗಬೇಕು ಎಂದು ಆಗ್ರಹಿಸಿದರು.

ವಿಚಾರ ಸಂಕಿರಣದಲ್ಲಿ ಮಡಿಕೇರಿಯ ಕಾಫಿ ಮಂಡಳಿಯ ಉಪನಿರ್ದೇಶಕ ಶಿವಕುಮಾರಸ್ವಾಮಿ ಕಾಫಿ ಬೆಳೆಯ ಕುರಿತು ಪ್ರಾತ್ಯಕ್ಷಿಕೆಯನ್ನು ನೀಡಿದರು. ಸಮಾರಂಭದಲ್ಲಿ ತಮಿಳುನಾಡು, ಕರ್ನಾಟಕ, ಕೇರಳ, ಆಂಧ್ರಪ್ರದೇಶದಿಂದಲೂ ಪ್ರತಿನಿಧಿಗಳು ಭಾಗವಹಿಸಿದ್ದರು. ಅಖಿಲ ಭಾರತ ಕಿಸಾನ್ ಸಭಾದ ಖಜಾಂಚಿ ಕೃಷ್ಣಪ್ರಸಾದ್, ಸದಸ್ಯರಾದ ಬಿಜು, ಕೃಷ್ಣನ್, ನಿಧೀಶ್, ಕರ್ನಾಟಕ ಕಿಸಾನ್ ಸಭಾದ ಅಧ್ಯಕ್ಷ ಬೈರಾರೆಡ್ಡಿ ಸಿಐಟಿಯು ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಸಿ.ಸಾಬು, ಶಾಜಿ ರಮೇಶ್ ಇತರರಿದ್ದರು.



ಕುಶಾಲನಗರ ಸಮೀಪದ ಹಾರಂಗಿ ಜಲಾಶಯದಲ್ಲಿ ಹೆಬ್ಬಾವು ಕಾಣಿಸಿಕೊಂಡು ಆತಂಕ ಮೂಡಿಸಿತ್ತು. ಸ್ನೇಕ್ ಪ್ರವೀಣ್ ಹಾಗೂ ಸ್ನೇಕ್ ಉದಯ್ ಆಗಮಿಸಿ ಜಲಾಶಯದ ಭದ್ರತೆಯ ಕೆಎಸ್‌ಐಎಸ್‌ಎಫ್ ಪೊಲೀಸರ ಜೊತೆ ಸೇರಿ ಹೆಬ್ಬಾವನ್ನು ಸುರಕ್ಷಿತವಾಗಿ ಹಿಡಿದು, ನಂತರ ಅರಣ್ಯ ಇಲಾಖೆಯ ವಶಕ್ಕೆ ಒಪ್ಪಿಸಿದರು.

ಅವನ ಮನೆ ಹಾಳಾಗಿ ಹೋಗ..!

ರೋಹಿತ್ ಚಕ್ರತೀರ್ಥ ವಿರುದ್ಧ ಸಿದ್ದರಾಮಯ್ಯ ಗುಡುಗು



ಬೆಂಗಳೂರು, ಜೂ.12–ಶಾಲಾ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಮನೆ ಹಾಳಾಗಿ ಹೋಗಲಿ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗುಡುಗಿದ್ದಾರೆ. ಬನ್ನೆರುಘಟ್ಟದಲ್ಲಿ ನಡೆದಂತ ಕರ್ನಾಟಕ ಭೋವಿ ಸಂಘದ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಅವನ್ಯಾರೋ ಗಿರಾಕಿ, ಶಾಲಾ ಪಠ್ಯದಲ್ಲಿ ಸಂವಿಧಾನ ಶಿಲ್ಪಿ ಎನ್ನುವುದನ್ನೇ ಬಿಟ್ಟಿದ್ದಾರೆ. ಹಾಗಾದ್ರೇ.. ಸಂವಿಧಾನ ಶಿಲ್ಪಿ ಅವನಾ ಎಂಬುದಾಗಿ ವ್ಯಂಗ್ಯವಾಡಿದರು. ಡಾ.ಬಿ.ಆರ್.ಅಂಬೇಡ್ಕರ್‌ಗೆ ಅವಮಾನ ಮಾಡಿದ್ದು ಸರಿಯಲ್ಲ. ಅವನ್ಯಾರೋ ರೋಹಿತ್ ಚಕ್ರತೀರ್ಥ ಎಂತಹ ನೀಚ ಇರಬೇಕು ನೋಡಿ.. ಅವನ ಮನೆ ಹಾಳಾಗಿ ಹೋಗಾ ಎಂದು ಕಿಡಿಕಾರಿದ್ದಾರೆ.

ಮಹಾರಾಷ್ಟ್ರದ ಕ್ಲಸ್ಟರ್ ವಿವಿಯಿಂದ ಗೌರವ ಡಾಕ್ಟರೇಟ್ ಸ್ವೀಕರಿಸಿದ ರತನ್ ಟಾಟಾ

ಬೆಂಗಳೂರು: ಖ್ಯಾತ ಉದ್ಯಮಿ ರತನ್ ಟಾಟಾ ಅವರಿಗೆ ಮಹಾರಾಷ್ಟ್ರದ ಎರಡನೇ ರಾಜ್ಯ ಕ್ಲಸ್ಟರ್ ವಿಶ್ವವಿದ್ಯಾಲಯವಾದ ಎಚ್‌ಎಸ್‌ಎನ್‌ಸಿ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.



ವಿಶ್ವವಿದ್ಯಾಲಯದ ವಿಶೇಷ ಘಟಿಕೋತ್ಸವ ಸಮಾರಂಭದಲ್ಲಿ ಮಹಾರಾಷ್ಟ್ರದ ರಾಜ್ಯಪಾಲ ಮತ್ತು ಎಚ್‌ಎಸ್‌ಎನ್‌ಸಿ ವಿಶ್ವವಿದ್ಯಾಲಯದ ಕುಲಪತಿ ಭಗತ್ ಕೋಶ್ಯಾರಿ ಅವರು ರತನ್ ಟಾಟಾ ಅವರಿಗೆ ಪದವಿ ಪ್ರದಾನ ಮಾಡಿದ್ದಾರೆ.

ರತನ್ ಟಾಟಾ ಅವರು ಅಭಿವೃದ್ಧಿ, ಶಿಕ್ಷಣ ಮತ್ತು ಎಲ್ಲರ ಉನ್ನತಿಯ ಸಿದ್ಧಾಂತ ಸಾಕಾರಕ್ಕಾಗಿ ಶ್ರಮಿಸುತ್ತಿದ್ದು, ಇದಕ್ಕಾಗಿ ಅವರಿಗೆ ಡಾಕ್ಟರೇಟ್ ನೀಡಿ ಗೌರವಿಸಲಾಗಿದೆ.

ರಾಜ್ಯದ ವಿವಿಧೆಡೆ ಜೂ.14ರವರೆಗೆ ಮಳೆ

ಬೆಂಗಳೂರು: ಕರ್ನಾಟಕದ ಕರಾವಳಿ ಮತ್ತು ದಕ್ಷಿಣ ಒಳನಾಡಿನಲ್ಲಿ ಮೂರು ದಿನ ಮಳೆ ಮುಂದುವರೆಯಲಿದೆ. ನೈರುತ್ಯ ಮುಂಗಾರು ಪ್ರಭಾವದಿಂದ ಇನ್ನೂ ತುಂತುರು



ಮಳೆಯಾಗುತ್ತಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಜೂನ್ ಮೊದಲ ವಾರದಲ್ಲಿಯೇ ನೈರುತ್ಯ ಮುಂಗಾರು ಕರ್ನಾಟಕಕ್ಕೆ ಆಗಮಿಸಿದೆ. ಆದರೆ 10 ದಿನಗಳಿಂದ ಮುಂಗಾರು ದುರ್ಬಲವಾಗಿದ್ದು, ಮಳೆಯಾಗುತ್ತಿಲ್ಲ. ಇದೀಗ ಕರ್ನಾಟಕದ ಕರಾವಳಿ ಹಾಗೂ ಮಲೆನಾಡಿನಲ್ಲಿ ಜೂನ್ 14ರ ತನಕ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ಕೊಡಗು, ದಕ್ಷಿಣಕನ್ನಡ, ಉತ್ತರಕನ್ನಡ, ಉಡುಪಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಗುಡುಗು, ಮಿಂಚು ಸೇರಿದಂತೆ ಮಳೆಯಾಗಲಿದೆ ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಒಂದನೇ ಪುಟದಿಂದ

ಪರಿಷತ್ ಚುನಾವಣೆ

1,41,961 ಮತದಾರರು: ನಾಲ್ಕು ಜಿಲ್ಲೆಗಳನ್ನು ಒಳಗೊಂಡಿರುವ ದಕ್ಷಿಣ ಪದವೀಧರರ ಕ್ಷೇತ್ರದಲ್ಲಿ ಈ ಬಾರಿ 1,41,961 ಮಂದಿ ಪದವೀಧರ ಮತದಾರರು ಹಕ್ಕು ಚಲಾಯಿಸಲು ನೋಂದಣಿ ಮಾಡಿಕೊಂಡಿದ್ದಾರೆ. 82,505 ಪುರುಷರು, 59,432 ಮಹಿಳೆಯರು ಹಾಗೂ ಇತರೆ 24 ಮತದಾರರು ಸೇರಿ 1,41,961 ಮಂದಿ ಮತದಾರರು ತಮ್ಮ ಹಕ್ಕನ್ನು ಚಲಾಯಿಸಿ ಅಭ್ಯರ್ಥಿಗಳ ಭವಿಷ್ಯ ಬರೆಯಲಿದ್ದಾರೆ.

ಕಣದಲ್ಲಿ 19 ಅಭ್ಯರ್ಥಿಗಳು: ಈ ಬಾರಿಯ ಚುನಾವಣೆಯಲ್ಲಿ ಪ್ರಮುಖ ರಾಜಕೀಯ ಪಕ್ಷಗಳಿಗೆ ಸಡ್ಡು ಹೊಡೆದಿರುವ ಪಕ್ಷೇತರರು ಮತ ವಿಭಜನೆಗೆ ಕಾರಣವಾಗಿ ಕೆಲವು ಅಭ್ಯರ್ಥಿಗಳಿಗೆ ಮಗ್ಗುಲು ಮುಳ್ಳಾಗುವ ಸಾಧ್ಯತೆ ಇದೆ. ಕಣದಲ್ಲಿ ಒಟ್ಟು 19 ಅಭ್ಯರ್ಥಿಗಳಿದ್ದು, ಯಾರ ಪಾಲಿಗೆ ಗೆಲುವು ಒಲಿಯಲಿದೆ ಎಂದು ಕಾದು ನೋಡಬೇಕಾಗಿದೆ. ಕಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ, ಬಿಜೆಪಿಯ ಮೈ.ವಿ.ರವಿಶಂಕರ್, ಜೆಡಿಎಸ್‌ನಿಂದ ಹೆಚ್.ಕೆ.ರಾಮು, ರೈತ ಸಂಘದ ಬೆಂಬಲಿತ ಅಭ್ಯರ್ಥಿ ಪ್ರಸನ್ನ ಎನ್.ಗೌಡ, ಎಸ್‌ಡಿಪಿಐನ ರಫತ್ ಉಲ್ಲಾ ಖಾನ್, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ಎನ್.ವೀರಭದ್ರಸ್ವಾಮಿ, ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್, ಬಿಎಸ್‌ಪಿ ಬೆಂಬಲಿತ ಡಾ.ಬಿ.ಹೆಚ್.ಚನ್ನಕೇಶವಮೂರ್ತಿ, ಪಕ್ಷೇತರರಾಗಿ ದಕ್ಷಿಣ ಪದವೀಧರರ ವೇದಿಕೆ ಅಧ್ಯಕ್ಷ ಎನ್.ಎಸ್.ವಿನಯ್, ಕಾವ್ಯಶ್ರೀ, ಎಂ.ಮಹೇಶ್, ಡಾ.ಜಿ.ಅರುಣಕುಮಾರ್, ಪುಟ್ಟಸ್ವಾಮಿ, ಡಾ.ಜಿ.ಸಿ.ರವೀಂದ್ರ, ಎಚ್.ಪಿ. ಸುಜಾತ, ಎನ್.ರಾಜೇಂದ್ರಸಿಂಗ್ ಬಾಬು, ಕೆ.ಪಿ.ಪ್ರಸನ್ನಕುಮಾರ್, ಎಸ್.ರಾಮು, ಡಾ.ಹೆಚ್.ಎಲ್.ವೆಂಕಟೇಶ್ ಕಣದಲ್ಲಿದ್ದು ಅಗ್ನಿಪರೀಕ್ಷೆ ಎದುರಿಸಲಿದ್ದಾರೆ.

ಕ್ಷೇತ್ರದಲ್ಲಿ 150 ಮತಗಟ್ಟೆ ಸ್ಥಾಪನೆ: ನಾಳೆ(ಜೂ.13) ಬೆಳಗ್ಗೆ 8ರಿಂದ ಸಂಜೆ 5 ಗಂಟೆವರೆಗೆ ಮತದಾನ ನಡೆಯಲಿದ್ದು, ಮೈಸೂರು ನಗರದಲ್ಲಿ 32, ಗ್ರಾಮಾಂತರ ಪ್ರದೇಶದಲ್ಲಿ 34, ಹಾಸನ ಜಿಲ್ಲೆಯಲ್ಲಿ 27, ಮಂಡ್ಯ ಜಿಲ್ಲೆಯಲ್ಲಿ 45, ಚಾಮರಾಜನಗರ ಜಿಲ್ಲೆಯಲ್ಲಿ 12 ಮತಗಟ್ಟೆಗಳು ಸೇರಿದಂತೆ ಒಟ್ಟು 150 ಮತಗಟ್ಟೆಗಳಲ್ಲಿ ಮತದಾನ ಪ್ರಕ್ರಿಯೆ ನಡೆಯಲಿದೆ. 150 ಮತಗಟ್ಟೆಗಳಲ್ಲಿ ಮೈಕ್ರೋ ಅಬ್ಸರ್ವರ್‌ಗಳನ್ನು ನೇಮಕ ಮಾಡಲಾಗಿದ್ದು, ಹಾಸನದಲ್ಲಿ 2, ಮಂಡ್ಯದಲ್ಲಿ 13, ಮೈಸೂರು ಜಿಲ್ಲೆಯ 2 ಮತಗಟ್ಟೆಗಳನ್ನು ಅತಿ ಸೂಕ್ಷ್ಮ ಮತಗಟ್ಟೆಗಳೆಂದು ಪರಿಗಣಿಸಲಾಗಿದೆ.

ಮಸ್ಟರಿಂಗ್: ಪ್ರತಿ ಮತಗಟ್ಟೆಗೆ ಒಬ್ಬರು ಅಧ್ಯಕ್ಷಾಧಿಕಾರಿ, ಇಬ್ಬರು ಸಹಾಯಕರು, ಇಬ್ಬರು ಪೇದೆಯನ್ನು ನಿಯೋಜಿಸಲಾಗಿದೆ. ಮೈಸೂರು ನಗರ ಸೇರಿದಂತೆ ಆಯಾಯ ತಾಲ್ಲೂಕು ಕೇಂದ್ರಗಳಲ್ಲಿ ಇಂದು ಬೆಳಗ್ಗೆ ಮಸ್ಟರಿಂಗ್ ನಡೆಯಿತು. ನಗರ ಪ್ರದೇಶ ವ್ಯಾಪ್ತಿಗೆ ಸೇರಿರುವ ಮತಗಟ್ಟೆಗಳಿಗೆ ಮೈಸೂರು ಪಾಲಿಕೆ ಕಚೇರಿ ಆವರಣದಲ್ಲಿ ಮಸ್ಟರಿಂಗ್ ಪ್ರಕ್ರಿಯೆ ನಡೆಸಲಾಯಿತು. ನಿಯೋಜಿತ ಬೂತ್‌ಗಳಿಗೆ ಸಿಬ್ಬಂದಿಗಳು ಮತಪತ್ರಗಳು, ಮತಪೆಟ್ಟಿಗೆ ಸೇರಿ ಇನ್ನಿತರ ಮತದಾನದ ಪರಿಕರಗಳನ್ನು ಹೊತ್ತುಕೊಂಡು ತೆರಳಿದರು.

ಬಿಗಿ ಪೊಲೀಸ್ ಬಂದೋಬಸ್ತ್: ಚುನಾವಣೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ನಗರದ ವ್ಯಾಪ್ತಿಯ ಮತಗಟ್ಟೆಗಳಿಗೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದ್ದು, ಆಯಾಯ ಪೊಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳಿಗೆ ಹೊಣೆ ವಹಿಸಲಾಗಿದೆ.

600 ಸಿಬ್ಬಂದಿ ನೇಮಕ: ಚುನಾವಣಾ ವೀಕ್ಷಕರಾಗಿ ವಿ.ಪೊನ್ನುರಾಜ್ ಅವರನ್ನು ನೇಮಕ ಮಾಡಲಾಗಿದೆ. 150 ಮತಗಟ್ಟೆಗಳಿಗೂ ಕೇಂದ್ರ ಸರ್ಕಾರದ ನೌಕರರನ್ನು ಮೈಕ್ರೋ ಅಬ್ಸರ್ವರ್‌ಗಳನ್ನು ನೇಮಕ ಮಾಡಲಾಗಿದೆ. 150 ಮತಗಟ್ಟೆಗಳಿಗೆ ವಿಡಿಯೋಗ್ರಫಿ ಮಾಡಲು ಕ್ರಮವಹಿಸಲಾಗಿರುತ್ತದೆ. ಚುನಾವಣಾ ಕಾರ್ಯಕ್ಕೆ 600 ಸಿಬ್ಬಂದಿ ನಿಯೋಜಿಸಲಾಗಿದೆ. ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಜೂ. 15 ರಂದು ಮತ ಎಣಿಕೆ ನಡೆಯಲಿದೆ. 28 ಟೇಬಲ್‌ಗಳನ್ನು ಸಿದ್ಧಪಡಿಸಲಾಗಿದೆ. ಮತದಾನ ಪ್ರಮಾಣದ ಶೇ.50ಕ್ಕಿಂತ ಹೆಚ್ಚು ಮತ ಪಡೆದರೆ ಮೊದಲನೇ ಸುತ್ತಿನಲ್ಲಿ ಎಣಿಕೆ ಮುಕ್ತಾಯಗೊಳ್ಳಲಿದೆ. ಇಲ್ಲದಿದ್ದರೆ ಎಣಿಕೆ ಕಾರ್ಯ 150ರಿಂದ 20 ಗಂಟೆ ನಡೆಯಲಿದೆ.

ನಗರ ವ್ಯಾಪ್ತಿಯಲ್ಲಿರುವ ಮತಗಟ್ಟೆಗಳು: ಪೀಪಲ್ಸ್ ಪಾರ್ಕ್ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಶ್ರೀಕಾಂತಮಹಿಳಾ ವಿದ್ಯಾಲಯ, ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು, ಮಹರ್ಷಿ ಶಿಕ್ಷಣ ಸಂಸ್ಥೆ, ರಾಮಕೃಷ್ಣ ವಿದ್ಯಾ ಕೇಂದ್ರ, ಶ್ರೀರಾಂಪುರ ಮಹಾಬೋಧಿ ವಿದ್ಯಾಮಂದಿರ, ರಾಮಕೃಷ್ಣನಗರ ರಾಮಕೃಷ್ಣ ವಿದ್ಯಾಕೇಂದ್ರ, ವಿಎಂವಿ ಬಾಲಬೋಧಿನಿ ಶಾಲೆ, ಕುವೆಂಪುನಗರ ಸರ್ಕಾರಿ ಪದವಿ ಪೂರ್ವ ಕಾಲೇಜು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಪದವಿ ಪೂರ್ವ ಕಾಲೇಜು ಕೊಠಡಿ ಸಂಖ್ಯೆ ಎರಡು ಕುಂಬಾರಕೊಪ್ಪಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಾತೃಮಂಡಳಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಮಾನಸಗಂಗೋತ್ರಿ ಮೈಸೂರು ವಿಶ್ವವಿದ್ಯಾನಿಲಯ ಶಿಕ್ಷಣ ಸಂಸ್ಥೆ, ಮಾನಸಗಂಗೋತ್ರಿ ಪ್ರೌಢಶಾಲೆ, ವಿಜಯನಗರ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪದವಿ ಪೂರ್ವ ಕಾಲೇಜು, ಕುಕ್ಕರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಲಷ್ಕರ್ ಮೊಹಲ್ಲಾ ದೊಡ್ಡಪೇಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ರಾಜೇಂದ್ರನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿದ್ಧಾರ್ಥನಗರ ಗೀತಾಶಿಶು ಶಿಕ್ಷಣ ಸಂಘ, ಸಿದ್ಧಾರ್ಥನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಮತಗಟ್ಟೆ ತೆರೆಯಲಾಗಿದೆ.

ಸಾಂದರ್ಭಿಕ ರಜೆ: ವಿಧಾನ ಪರಿಷತ್ ಚುನಾವಣೆಯ ಪದವೀಧರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿನ ಮತದಾರ ನೌಕರರಿಗೆ ವಿಶೇಷ ಸಾಂದರ್ಭಿಕ ರಜೆ ನೀಡುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಎಲ್ಲಾ ಸರ್ಕಾರಿ ಹಾಗೂ ಶಾಲಾ ಕಾಲೇಜು, ಅನುದಾನ ಹಾಗೂ ಅನುದಾನ ರಹಿತ, ಸಹಿತ ಶಿಕ್ಷಣ ಸಂಸ್ಥೆಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಚೇರಿಗಳು, ರಾಷ್ಟ್ರೀಕೃತ ಹಾಗೂ ಇತರೆ ಬ್ಯಾಂಕ್‌ಗಳಿಗೆ ಇತರ ಸಂಸ್ಥೆಗಳ ಪದವೀಧರ ಮತದಾರರಿಗೆ ಸಾಂದರ್ಭಿಕ ರಜೆ ನೀಡುವಂತೆ ಸರ್ಕಾರ ಸೂಚಿಸಿರುವುದರಿಂದ ಅನುಕೂಲವಾಗಲಿದೆ. ಮೈಸೂರು ನಗರ ಸೇರಿದಂತೆ ತಾಲ್ಲೂಕು ಕೇಂದ್ರಗಳಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ. ಭಾನುವಾರ ಬೆಳಗ್ಗೆಯಿಂದ ಸೋಮವಾರ ಮಧ್ಯರಾತ್ರಿ 12 ಗಂಟೆವರೆಗೆ ಬಾರ್‌ಗಳು, ವೈನ್‌ಸ್ಟೋರ್‌ಗಳು, ಬಾರ್ ಆಂಡ್ ರೆಸ್ಟೋರೆಂಟ್‌ಗಳನ್ನು ಮುಚ್ಚಲಾಗಿದೆ. ನಿಯಮ ಉಲ್ಲಂಘಿಸಿ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ.

ಗ್ರಾಮ ಮಟ್ಟಕ್ಕೆ ಎಬಿಜಿಪಿ ಚಟುವಟಿಕೆ ವಿಸ್ತರಿಸಿ

ಕೃಷಿಕರ ಸಮಸ್ಯೆ ಬಗೆಹರಿಸಲು ಹೆಚ್ಚು ಒತ್ತು ನೀಡಬೇಕು

ಗ್ರಾಹಕರ ಹಿತ ಚಿಂತನಾ ಸಭೆ ಉದ್ಘಾಟಿಸಿ ಎಬಿಜಿಪಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ವಿಜಯ್‌ಸಾಗರ್

ಮೈಸೂರು,ಜೂ.12(ಪಿಎಂ)– ಅಖಿಲ ಭಾರತೀಯ ಗ್ರಾಹಕ ಪಂಚಾಯತ್‌ನ (ಎಬಿಜಿಪಿ) ಚಟುವಟಿಕೆಗಳನ್ನು ತಾಲೂಕು ಮತ್ತು ಗ್ರಾಮ ಮಟ್ಟಕ್ಕೆ ಪರಿಣಾಮಕಾರಿಯಾಗಿ ವಿಸ್ತರಿಸಿ, ಕೃಷಿಕರ ಸಮಸ್ಯೆಗಳನ್ನು ಪರಿಹರಿಸಲು ಹೆಚ್ಚು ಒತ್ತು ನೀಡಬೇಕಿದೆ ಎಂದು ಎಬಿಜಿಪಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಹಾಗೂ ಮುಖ್ಯ ವಕ್ತಾರ ವಿಜಯ್ ಸಾಗರ್ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಮಾಧವ ಕೃಪಾದ ಸಭಾಂಗಣದಲ್ಲಿ ಎಬಿಜಿಪಿ ಮೈಸೂರು ಜಿಲ್ಲಾ ಘಟಕದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಗ್ರಾಹಕರ ಹಿತ ಚಿಂತನಾ ಸಭೆಯನ್ನು ಭಾರತಾಂಬೆ ತಾಯಿ ಚಿತ್ರಪಟಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಎಬಿಜಿಪಿ ಸಂಘಟನೆ ಆರ್‌ಎಸ್‌ಎಸ್‌ನ ಅಂಗ ಸಂಸ್ಥೆಗಳಲ್ಲಿ ಒಂದಾಗಿದ್ದು, ಇದು ರಾಷ್ಟ್ರ ಮಟ್ಟದ ಸಂಘಟನೆಯಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರತಿಯೊಬ್ಬರು ಒಂದಲ್ಲಾ ಒಂದು ರೀತಿಯಲ್ಲಿ ಗ್ರಾಹಕರೇ ಆಗಿರುತ್ತಾರೆ. ಆಸಕ್ತರು ನಮ್ಮ ಸಂಘಟನೆಯಲ್ಲಿ ತೊಡಗಿಸಿಕೊಂಡು ಗ್ರಾಹಕ ಜಾಗೃತಿಗೆ ಕೈಜೋಡಿಬಹುದು. ಎಬಿಜಿಪಿ ತನ್ನದೇ ವೆಬ್‌ಸೈಟ್ ಸಹ ಹೊಂದಿದೆ



ಮೈಸೂರಿನ ಮಾಧವ ಕೃಪಾದ ಸಭಾಂಗಣದಲ್ಲಿ ಎಬಿಜಿಪಿ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಗ್ರಾಹಕರ ಹಿತ ಚಿಂತನಾ ಸಭೆಯನ್ನು ಭಾರತಾಂಬೆ ತಾಯಿ ಚಿತ್ರಪಟಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಎಬಿಜಿಪಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ವಿಜಯ್ ಸಾಗರ್ ಉದ್ಘಾಟಿಸಿದರು.

ರಾಷ್ಟ್ರಾದ್ಯಂತ ನಡೆಸುವ ಬಹುತೇಕ ಎಲ್ಲಾ ಚಟುವಟಿಕೆಗಳ ಮಾಹಿತಿ ಇಲ್ಲಿ ದೊರೆಯಲಿದೆ. ಜೊತೆಗೆ ಆಸಕ್ತರು ಈ ವೆಬ್‌ಸೈಟ್ ಮೂಲಕವೇ ಸದಸ್ಯತ್ವ ಪಡೆದುಕೊಳ್ಳಲು ಅವಕಾಶವಿದೆ ಎಂದು ತಿಳಿಸಿದರು.

ಸಂಘಟನೆಯ ಚಟುವಟಿಕೆಗಳು ಸೇರಿದಂತೆ ಗ್ರಾಹಕರ ಜಾಗೃತಿಗೆ ಸಂಬಂಧಿಸಿದ ಸಾಕಷ್ಟು ಮಾಹಿತಿಗಳು ನಮ್ಮ ದ್ವೈಮಾಸಿಕ ಪತ್ರಿಕೆ 'ಗ್ರಾಹಕ ಭಾರತಿ'ಯಲ್ಲಿ ಲಭ್ಯವಾಗಲಿದೆ. ಕೋವಿಡ್ ಸಂದರ್ಭದಲ್ಲಿ ಕರ್ನಾಟಕದ ಗ್ರಾಹಕರ ಸಮಸ್ಯೆ ಪರಿಹರಿಸಲು ಅಗತ್ಯ ಮಾರ್ಗದರ್ಶನ ನೀಡುವ ಸಲುವಾಗಿ ಗ್ರಾಹಕ ಮಾರ್ಗದರ್ಶನ ಸೇವಾ ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ಆರಂಭಿಸಲಾಯಿತು. ಇಂದಿಗೂ ಇದು ಮುಂದುವರೆದಿದ್ದು, ಪ್ರತಿ ಶನಿವಾರ ಇದು ನಡೆಯುತ್ತಿದೆ ಎಂದರು.

ಎಬಿಜಿಪಿ ವತಿಯಿಂದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ (ಪಿಎಎಲ್) ಮೂಲಕವೂ ಗ್ರಾಹಕರ ಸಮಸ್ಯೆಗಳನ್ನು ಪರಿಹರಿಸಲಾಗಿದೆ. ಸರ್ಕಾರಿ ಕಚೇರಿ ವ್ಯವಸ್ಥೆಯಲ್ಲಿ ತಪ್ಪುಗಳಿದ್ದರೆ ಅದನ್ನು ಸರಿಪಡಿಸುವ ನಿಟ್ಟಿನಲ್ಲಿಯೂ ನಮ್ಮ ಸಂಘಟನೆ ಕಾರ್ಯನಿರ್ವಹಿಸುತ್ತಿದೆ. ಆದರೆ ಇದಕ್ಕಾಗಿ ಪ್ರತಿಭಟನಾ ಧರಣಿಯ ಹಾದಿಯನ್ನು ಹಿಡಿಯದೇ ಕಾನೂನಾತ್ಮಕ ಮಾರ್ಗದಲ್ಲಿ ಕಾರ್ಯನಿರ್ವಹಿಸುತ್ತಿದೆ. ನಮ್ಮ ಚಿಂತನೆ ಗ್ರಾಹಕರ ಹಿತವೇ ಆಗಿದೆ ಎಂದು ತಿಳಿಸಿದರು.

ಗ್ರಾಹಕರ ಹಕ್ಕುಗಳ ರಕ್ಷಣೆಗೆ 'ಗ್ರಾಹಕ ಸಂರಕ್ಷಣಾ ಕಾಯ್ದೆ 2019' ಮಹತ್ವದ ಕಾನೂನಿನ ಅಸ್ತ್ರವಾಗಿದೆ. ಸ್ವಾವಲಂಬಿ ಭಾರತದ ಉದ್ದೇಶಕ್ಕಾಗಿ ಬೇರೆ ಬೇರೆ ಸಂಘಟನೆಗಳ ಸಹಯೋಗದೊಂದಿಗೆ ಎಬಿಜಿಪಿ ಕಾರ್ಯನಿರ್ವಹಿಸಿದೆ ಎಂದರು. ಕರ್ನಾಟಕ ಪ್ರಾಂತ ಮುಖ್ಯ ಸಂಚಾಲಕ ರಾಜೇಶ್, ಮಹಿಳಾ ಪ್ರಮುಖರಾದ ಗಾಯಿತ್ರಿ ವಾಣಿ ಭಾಸ್ಕರ್, ಮೈಸೂರು ಜಿಲ್ಲಾಧ್ಯಕ್ಷ ರವಿಶಂಕರ್, ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್ ಮತ್ತಿತರರು ಹಾಜರಿದ್ದರು.

ವಿದ್ಯಾರ್ಥಿಗಳಿಂದ ನೃತ್ಯ ರೂಪಕದ ಮೂಲಕ ಪರಿಸರ ಜಾಗೃತಿ



ಮೈಸೂರು, ಜೂ.12(ಎಂಟಿವೈ)–ವಿಶ್ವ ಪರಿಸರ ದಿನದ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು ಡಿ.ಪೌಲ್ ಪ್ರಥಮ ದರ್ಜೆ ಕಾಲೇಜಿನ ಇಕೋ ಕ್ಲಬ್‌ನ 15ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮೈಸೂರಿನ ವಿವಿಧೆಡೆ ಪರಿಸರ ಗೀತೆಗೆ ನೃತ್ಯ ರೂಪಕ ಪ್ರದರ್ಶಿಸುವ ಮೂಲಕ ಗಮನ ಸೆಳೆದರು.

ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರುವುದರೊಂದಿಗೆ ಗಿಡ, ಮರ ಬೆಳೆಸುವುದು, ಪರಿಸರಕ್ಕೆ ಮಾರಕವಾಗಿರುವ ಏಕ ಬಳಕೆ (ಸಿಂಗಲ್ ಯೂಸ್) ಪ್ಲಾಸ್ಟಿಕ್ ತ್ಯಜಿಸುವುದೂ ಸೇರಿದಂತೆ ಮಹತ್ತರ ಸಂದೇಶ ರವಾನಿಸುವ ನಿಟ್ಟಿನಲ್ಲಿ ಕಾಲೇಜಿನ ಇಕೋ ಕ್ಲಬ್ ವಿದ್ಯಾರ್ಥಿಗಳು ಪರಿಸರ ಗೀತೆಗೆ ಸಾರ್ವಜನಿಕ ಸ್ಥಳಗಳಲ್ಲಿ ನೃತ್ಯವನ್ನು ಪ್ರದರ್ಶಿಸುವ ಮೂಲಕ ಗಮನ ಸೆಳೆದರಲ್ಲದೇ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂಬ ಸಂದೇಶವನ್ನು ಪರಿಣಾಮಕಾರಿಯಾಗಿ ಜನರ ಮನಮುಟ್ಟುವಂತೆ ಮಾಡಿದರು.

ನಗರ ಪೊಲೀಸರ ಅನುಮತಿ ಪಡೆದು ಮೈಸೂರಿನ ಅರಮನೆಯ ಉತ್ತರ ದ್ವಾರದ ಮುಂಭಾಗ, ಜಯಮಾರ್ತಾಂಡ ದ್ವಾರದ ಬಳಿ ಪರಿಸರ ಗೀತೆಗೆ ನೃತ್ಯ ರೂಪಕ ಪ್ರದರ್ಶಿಸಿದ ವಿದ್ಯಾರ್ಥಿಗಳು, ನಂತರ ಚಾಮುಂಡಿಬೆಟ್ಟದ ಬಸ್ ನಿಲ್ದಾಣ, ಮಹಿಷಾಸುರ ಪ್ರತಿಮೆ ಹಾಗೂ ದೇವಾಲಯದ, ನಂದಿ ವಿಗ್ರಹದ ಬಳಿ ಪರಿಸರ ಗೀತೆಗೆ ಹೆಜ್ಜೆ ಹಾಕಿದರು. ನಂತರ ಕಾರಂಜಿ ಕೆರೆ ಮುಖ್ಯ ದ್ವಾರದ ಬಳಿ, ಸೆಂಟ್ ಫಿಲೋಮಿನಾಸ್ ಚರ್ಚ್ ಬಳಿಯೂ ಪರಿಸರ ಸಂರಕ್ಷಣೆಯ ಸಂದೇಶ ಸಾರುವ ಮೂಲಕ ಎಲ್ಲರ ಪ್ರಶಂಸೆಗೆ ಪಾತ್ರರಾದರು.

ರೆವರೆಂಡ್ ಫಾ. ಶಿಜೋ, ಡಿ.ಪೌಲ್ ಪ್ರಥಮ ದರ್ಜೆ ಕಾಲೇಜಿನ ಪರಿಸರ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ. ಮಮತಾ ಸತ್ಯನಾರಾಯಣ, ಸಹಾಯಕ ಪ್ರಾಧ್ಯಾಪಕ ಲಂಕೇಶ್ ಧವನ್ ಹಾಗೂ ಕಾಲೇಜಿನ ಉಪನ್ಯಾಸಕ ವರ್ಗದ ನೇತೃತ್ವದಲ್ಲಿ ನಡೆದ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿಗಳಾದ ಎಸ್.ಪ್ರಜ್ವಲ್, ಲೋಕ ವೆಂಕಟೇಶ್, ರಾಹುಲ್ ಎಸ್.ಗಾರುಡಿಗ, ಹರ್ಷ, ನೇತ್ರಾವತಿ, ವೈಷ್ಣವಿ, ಶ್ವೇತಾ, ದಿಶಾ, ತೇಜಸ್ವಿನಿ, ಜೀವಿತಾ, ಹರ್ಷಿತಾ, ಸ್ವಾತಿ, ಸಯ್ಯದ್, ಪವನ್, ಜೋಶು ಪಾಲ್ಗೊಂಡಿದ್ದರು.



ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ದಕ್ಷಿಣ ವಲಯ 3ರ ವಿವೇಕ ಜಾಗ್ರತ ಬಳಗಗಳು ಭಾನುವಾರ ಆಯೋಜಿಸಿದ್ದ 'ವ್ಯಕ್ತಿತ್ವ ವಿಕಸನಕ್ಕಾಗಿಯೇ ಯೋಗ ಕಹಳೆ' ಚಿಂತನ ಕಾರ್ಯಕ್ರಮದಲ್ಲಿ ಕೋಟ ಮೂಡುಗಿಳಿಯಾರು ಸರ್ವಕ್ಷೇಮ ಆಸ್ಪತ್ರೆ ಹಾಗೂ ಸಂಶೋಧನಾ ಪ್ರತಿಷ್ಠಾನದ ವೈದ್ಯಕೀಯ ನಿರ್ದೇಶಕ ಡಾ.ವಿವೇಕ ಉಡುಪ ಅವರು ಯೋಗ, ಮತ್ತು ಧ್ಯಾನದಿಂದಾಗುವ ಅನುಕೂಲಗಳ ಬಗ್ಗೆ ತಿಳಿಸಿದರು.

ಮೈಸೂರಲ್ಲಿ ಮತ್ತೆ ಸರಗಳ್ಳರ ಕೈಚಳಕ

ಕುವೆಂಪುನಗರ, ವಿಜಯನಗರ ಠಾಣೆ ವ್ಯಾಪ್ತಿಯಲ್ಲಿ ಸರ ಕಳವು

ಮೈಸೂರು, ಜೂ.12(ಎಸ್‌ಬಿಡಿ)– ಮೈಸೂರು ನಗರದ ಎರಡು ಕಡೆ ಭಾನುವಾರ ಸಂಜೆ ಸರಕಳ್ಳತನವಾಗಿದ್ದು, ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ. ಕುವೆಂಪು ನಗರ ಹಾಗೂ ವಿಜಯ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಖದೀಮರ ಪತ್ತೆಗೆ ಪೊಲೀಸರು ತೀವ್ರ ಶೋಧ ನಡೆಸುತ್ತಿದ್ದಾರೆ.



ಮಧುವನ ಲೇಔಟ್ ನಿವಾಸಿ ಸುಮಾರು 50 ವರ್ಷದ ಮಹಿಳೆಯೊಬ್ಬರು ಸಂಜೆ 6.30ರ ಸಮಯದಲ್ಲಿ ಮನೆ ಸಮೀಪದ ಅಂಗಡಿಯಲ್ಲಿ ತರಕಾರಿ ಖರೀದಿಸಿ ಮನೆಗೆ ಹಿಂದಿರು ಗುತ್ತಿದ್ದಾಗ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು ಸುಮಾರು 45 ಗ್ರಾಂ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ವಿಷಯ ತಿಳಿದ ಕುವೆಂಪುನಗರ ಠಾಣೆ ಪೊಲೀಸರು ತಕ್ಷಣ ಸ್ಥಳಕ್ಕೆ ದೌಡಾಯಿಸಿ ಎಲ್ಲೆಡೆ ಹುಡುಕಾಟ ನಡೆಸಿದರಾದರೂ ಖದೀಮರು ಪತ್ತೆಯಾಗಿಲ್ಲ.


ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯ ಹಿನಕಲ್ ಫ್ಲೈಓವರ್ ಬಳಿಯೂ ಮಹಿಳೆಯೊಬ್ಬರ ಚಿನ್ನದ ಸರವನ್ನು ಖದೀಮರು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಘಟನೆ ನಡೆದಿರುವುದನ್ನು ಪೊಲೀಸರು ಖಚಿತಪಡಿಸಿದ್ದಾರಾದರೂ ಈ ಸಂಬಂಧ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ.

ವಿಜಯನಗರ 4ನೇ ಹಂತ, 2ನೇ ಫೇಸ್‌ನಲ್ಲಿ ಮೇ 31ರ ಸಂಜೆ 5.15ರ ವೇಳೆಯಲ್ಲಿ ವಾಯುವಿಹಾರದಲ್ಲಿದ್ದ ವೃದ್ಧೆಯ ಸರ ಕಿತ್ತುಕೊಳ್ಳುವ ಪ್ರಯತ್ನದಲ್ಲಿ ಸುಮಾರು 10 ಗ್ರಾಂ ಸರದ ತುಂಡು ಕಳ್ಳರ ಪಾಲಾಗಿತ್ತು. ಶಕ್ತಿನಗರ ಸಮೀಪದ ರಿಂಗ್‌ರಸ್ತೆಯಲ್ಲಿ ಜೂ.9ರಂದು ಬೆಳಗ್ಗೆ 6.30ರ ಸಮಯದಲ್ಲಿ ಖದೀಮರು ವಾಯುವಿಹಾರದಲ್ಲಿದ್ದ 17 ವರ್ಷದ ಯುವಕನ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಎಲ್ಲಾ ಪ್ರಕರಣದಲ್ಲೂ ಇಬ್ಬರು ಬೈಕ್‌ನಲ್ಲಿ ಬಂದು ದುಷ್ಕೃತ್ಯವೆಸಗಿರುವುದು ಗಮನಾರ್ಹ.

ವೃದ್ಧೆಯರು, ವಿದ್ಯಾರ್ಥಿಗಳನ್ನೇ ಗುರಿಯಾಗಿಸಿಕೊಂಡು ಚಿನ್ನದ ಸರ ಹಾಗೂ ಮೊಬೈಲ್ ಕಳವು ಮಾಡುವ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಪೊಲೀಸರು ನಗರದೆಲ್ಲೆಡೆ ಕಟ್ಟೆಚ್ಚರ ವಹಿಸಿದ್ದಾರೆ. ಮುಂಜಾನೆ, ಸಂಜೆ ಹಾಗೂ ರಾತ್ರಿ ವೇಳೆ ಗಸ್ತು ಹೆಚ್ಚಿಸಲು ಮುಂದಾಗಿದ್ದಾರೆ. ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದರ ಜೊತೆಗೆ ಸರಕಳ್ಳರ ಬಂಧನಕ್ಕೆ ವಿಶೇಷ ತಂಡಗಳು ಜಾಲ ಬೀಸಿವೆ ಎಂದು ತಿಳಿದುಬಂದಿದೆ.

ತೋಚಿದ್ದನ್ನು ಗೀಚುವವರು ಕವಿಯಾಗಲಾರರು

'ನಮಗಿಲ್ಲ ಹಕ್ಕಿಹಾಡು' ಭಾವಗೀತೆಗಳ ಸಂಕಲನ ಬಿಡುಗಡೆಯಲ್ಲಿ ಕವಿ ಬಿ.ಆರ್. ಲಕ್ಷ್ಮಣ್‌ರಾವ್ ಅಭಿಪ್ರಾಯ



ಮೈಸೂರು,ಜೂ 12(ಜಿಎ)– ತೋಚಿದ್ದನ್ನು ಗೀಚುವವರು ಎಂದೂ ಕವಿಯಾಗಲಾರರು ಎಂದು ಖ್ಯಾತ ಕವಿ ಬಿ.ಆರ್. ಲಕ್ಷ್ಮಣ್‌ರಾವ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ನೃಪತುಂಗ ಶಾಲೆ ಆವರಣದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ಯದುನಂದನ ಪ್ರಕಾಶನ ಮತ್ತು ಬೆಂಗಳೂರಿನ ಉಪಾಸನಾ ವತಿಯಿಂದ ಆಯೋಜಿಸಿದ್ದ ಡಾ. ಸಂತೋಷ ಚೊಕ್ಕಾಡಿ ಅವರು ಬರೆದಿರುವ 'ನಮಗಿಲ್ಲ ಹಕ್ಕಿಹಾಡು' ಭಾವಗೀತೆಗಳ ಸಂಕಲನ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡುತ್ತಿದ್ದರು.

ಭಾವಗೀತೆಗಳ ಕ್ಷೇತ್ರವು ನನ್ನ ನೆಚ್ಚಿನ ಕ್ಷೇತ್ರವಾಗಿದೆ. ಏಕೆಂದರೆ ನಾನು ಇದುವರೆಗೂ 9 ಕವನ ಸಂಕಲನಗಳನ್ನು ಬರೆದಿದ್ದರೂ ಸಹ ಜನರು ಮಾತ್ರ ನನ್ನ ಗುರುತಿಸುವುದು ಭಾವಗೀತೆಗಳ ಮೂಲಕ. ಅದು ಜನರ ಮನಸ್ಸಿನಲ್ಲಿ ಉಳಿಯುತ್ತದೆ ಎಂದರು.

ಮೊದಲು ಇದು ಲಿರಿಕಲ್ ಎಂದು ಇಂಗ್ಲಿಷ್‌ನಲ್ಲಿ ಇತ್ತು. ಅದನ್ನು ಕನ್ನಡದಲ್ಲಿ ಮೊದಲು ನವೋದಯ ಕಾವ್ಯ ಎಂದು ಕರೆಯಲ್ಪಡುತ್ತಿದ್ದರು. ನಂತರ ಭಾವಗೀತೆ ಎಂದು ಬಳಸಲು ಆರಂಭಿಸಿದರು. ಕುವೆಂಪು ಮತ್ತು ಬೇಂದ್ರೆ ಅವರು ಕವಿತೆಗಳನ್ನು ಬರೆಯುತ್ತಿದ್ದರು, ಆದರೆ ಅದು ಹಾಡಲು ಅಲ್ಲ. ನಂತರ ಕೆಲವರು ಅದನ್ನು ಗುರುತಿಸಿ ಭಾವಾನಾತ್ಮಕ ಸಾಲುಗಳನ್ನು ಹಾಡುಗಳಿಗೆ ಬಳಸಿಕೊಳ್ಳುತ್ತಿದ್ದರು ಎಂದು ಅವರು ಹೇಳಿದರು.

ನಿತ್ಯೋತ್ಸವದ ಮೂಲಕ ನಿಸಾರ್ ಅಹಮ್ಮದ್‌ರಿಂದ ಭಾವಗೀತೆಗಳ ಪರಂಪರೆ ಆರಂಭವಾಯಿತು. ಆದರೆ ಕವಿತೆಯೇ ಬೇರೆ, ಸಂಗೀತವೇ ಕವಿತೆ ಎಂಬುದು ತನ್ನ ಸತ್ವದಿಂದ ಉಳಿಯಬೇಕೇ ಹೊರತು ಸಂಗೀತದ ಸಹಾಯ ಬೇಕಿಲ್ಲ ಎಂದು ನವೋದಯ ಕಾಲದಲ್ಲಿ ವಿರೋಧಗಳು ವ್ಯಕ್ತವಾಗಿತ್ತು ಎಂದು ತಿಳಿಸಿದರು.

ನಿತ್ಯೋತ್ಸವ ಬಂದ ನಂತರ ಆಕಾಶವಾಣಿಯಿಂದ ಹೊಸಬರು ಸಹ ಭಾವಗೀತೆಗಳನ್ನು ಬರೆಯಿರಿ ಎಂದು ತಿಳಿಸಲಾಯಿತು. ಅದರಂತೆ ನಾವು ಭಾವಗೀತೆ ಸಂಕಲನಗಳನ್ನು ತಂದಿದ್ದು, ಆದರಿಂದ ನಾವು ಈ ಕ್ಷೇತ್ರಕ್ಕೆ ಬಂದಿದ್ದೇವೆ. ಭಾವಗೀತೆಗಳಲ್ಲೇ ನಾವು ಹೆಚ್ಚು ಜನರ ಮನಸ್ಸಿನಲ್ಲಿ ಉಳಿದುಕೊಂಡಿದ್ದೇವೆ. ಆದರಿಂದ ಕಾವ್ಯ ಎಂಬ ಸೌಧಕ್ಕೆ ಭಾವಗೀತೆ ಹೆಬ್ಬಾಗಿಲು ಇದ್ದಂತೆ ಎಂದು ಹೆಚ್.ಎಸ್.ವೆಂಕಟೇಶ ಮೂರ್ತಿ ಹೇಳುತ್ತಿರುತ್ತಾರೆ ಎಂದರು

ಇಂದಿನ ದಿನಗಳಲ್ಲಿ ಹೆಚ್ಚು ಜನರು ಸಂಗೀತ ಕ್ಷೇತ್ರಕ್ಕೆ ಬರುತ್ತಿದ್ದಾರೆ. ಆದರೆ ಅವರಲ್ಲಿ ಯಾವುದೇ ಹೊಸ ಐಡಿಯಗಳಿಲ್ಲ. ಜೊತೆಗೆ ಲಯ, ಛಂದಸ್ಸಿನ ಕಲ್ಪನೆ ಇಲ್ಲದೆ ತೋಚಿದ್ದನ್ನು ಗೀಚುತ್ತಿದ್ದಾರೆ. ತೋಚಿದ್ದನ್ನು ಗೀಚಿದರೆ ಯಾರೂ ಸಹ ಕವಿಗಳಾಗಲು ಸಾಧ್ಯವಿಲ್ಲ. ಹೊಸ ಕವಿತೆಗಳನ್ನು ಬರೆಯಬೇಕು. ಆದರೆ ಕವಿತೆಯೇ ಬೇರೆ, ಹಾಡು ಬರೆಯುವುದೇ ಬೇರೆ ಎಂದರು.

ಡಾ. ಸಂತೋಷ ಚೊಕ್ಕಾಡಿಯವರಿಗೆ ಲಯ, ಛಂದಸ್ಸು ಸೇರಿದಂತೆ ಎಲ್ಲದರ ಬಗ್ಗೆಯೂ ತಿಳಿದಿದ್ದು, ಅವರು ಬರೆದಿರುವ ಈ ಸಂಕಲನ ಲಯ ವೈವಿಧ್ಯತೆ ಮತ್ತು ವಸ್ತು ವೈವಿಧ್ಯತೆ ಹೊಂದಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕ ಪ್ರೊ.ಸಿ. ನಾಗಣ್ಣ, ಕನ್ನಡ ಉಪನ್ಯಾಸಕ ಡಾ.ಹೆಚ್.ಎಸ್. ಸತ್ಯನಾರಾಯಣ, ಸಂಗೀತ ನಿರ್ದೇಶಕ ಉಪಾಸನಾ ಮೋಹನ್, ಯದುನಂದನ ಪ್ರಕಾಶನದ ರಾಜೇಶ್ ಬಿ.ಹೊನ್ನೇನಹಳ್ಳಿ, ಭಾವಗೀತೆ ಗಾಯಕರಾದ ಮೇಘನಾ ಭಟ್ ಹಾಗೂ ಐಶ್ವರ್ಯ ಸುಧೀಂದ್ರ ಅವರು ಉಪಸ್ಥಿತರಿದ್ದರು.

ಬಹಿರಂಗ ಹರಾಜು ಪ್ರಕಟಣೆ

ಮೈಸೂರು, ಜೂ.12– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ವತಿಯಿಂದ ನಿರುಪಯುಕ್ತ ಸಾಮಗ್ರಿಗಳನ್ನು ವಿಲೇವಾರಿ ಮಾಡಲು ಜೂ.29ರ ಬೆಳಗ್ಗೆ 11 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಬಹಿರಂಗ ಹರಾಜನ್ನು ಆಯೋಜಿಸಲಾಗಿದೆ.

ಸಂಸ್ಥೆಯಲ್ಲಿ ತರಬೇತಿಗೆ ಉಪಯೋಗಿಸಿ ನಿರುಪಯುಕ್ತವಾಗಿ ಇರುವ ಸಣ್ಣ ಉಪಕರಣಗಳು ಎಂ.ಎಸ್, ಅಲ್ಯುಮಿನಿಯಂ, ಬ್ರಾಸ್ ಸ್ಕ್ರಾಪ್ ಮತ್ತು ಕಚ್ಚಾ ಸಾಮಗ್ರಿಗಳು, ಅನುಪಯುಕ್ತ ಯಂತ್ರೋಪಕರಣಗಳು ಹಾಗೂ ಪೀಠೋಪಕರಣಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತಿದ್ದು, ಹರಾಜಿನಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಜೂ.29 ರಂದು 10 ಗಂಟೆಗೆ ಹಾಜರಾಗಿ 5000 ರೂ.ಗಳನ್ನು ಠೇವಣಿಯಾಗಿ ಜಮಾ ಮಾಡಿ ಟೋಕನ್ ಪಡೆದು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಸಾಮಗ್ರಿಗಳನ್ನು ಸಂಸ್ಥೆಯ ಕಚೇರಿ ಸಮಯದಲ್ಲಿ (ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ) ಪರಿಶೀಲಿಸಲು ಅವಕಾಶವಿರುತ್ತದೆ ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆತ್ಮಕಥೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಕೆಲ ಕಾಂಗ್ರೆಸ್ ನಾಯಕರ ವಿರುದ್ಧ ಮೋಟಮ್ಮ ಅಸಮಾಧಾನ


ಬೆಂಗಳೂರು: ಕಾಂಗ್ರೆಸ್ ನಾಯಕಿ, ಮಾಜಿ ಸಚಿವೆ ಮೋಟಮ್ಮ ಅವರ ಆತ್ಮಕಥೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕೆಲ ಕಾಂಗ್ರೆಸ್ ನಾಯಕರ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ.



ಮಾಜಿ ಸಚಿವೆ ಮೋಟಮ್ಮ ಅವರು ಬರೆದಿರುವ 'ಬಿದಿರು ನೀನ್ಯಾರಿಗಲ್ಲದವಳು' ಹೆಸರಿನ ಆತ್ಮಕಥೆ ಲೋಕಾರ್ಪಣೆಗೊಂಡಿದೆ. ಇದರಲ್ಲಿ ಮಾಜಿ ಸಿಎಂ ಸೇರಿದಂತೆ ಹಲವರ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ. ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆತ್ಮಕಥೆ ಬಿಡುಗಡೆ ಮಾಡಲಾಯಿತು. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಪರಮೇಶ್ವರ್ ಹಾಗೂ ಡಿ.ಕೆ.ಶಿವಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಆತ್ಮಕತೆ ಲೋಕಾರ್ಪಣೆಗೊಳಿಸಿದ್ದರು. ಆತ್ಮಕತೆಯ 'ಬಿಸಿಲುಗುದುರೆ ಬೆನ್ನೇರಿ' ಎಂಬ ಭಾಗದಲ್ಲಿ ಸಿದ್ದರಾಮಯ್ಯ ವಿರುದ್ಧ ಮೋಟಮ್ಮ ಅಸಮಾಧಾನ ಹೊರಹಾಕಿದ್ದಾರೆ. ನನ್ನನ್ನು ಮಂತ್ರಿ ಮಾಡಬಹುದಿತ್ತು ಆದರೂ ಮಾಡಲಿಲ್ಲ. ಸಭಾಧ್ಯಕ್ಷೆ ಆಗುವ ಅವಕಾಶವೂ ಇತ್ತು. ಅದನ್ನು ಮಾಡಲಿಲ್ಲ. ಈ ಬಗ್ಗೆ ನನಗೆ ಇನ್ನೂ ಬೇಸರ ಇದೆ ಎಂದು ಬರೆದುಕೊಂಡಿದ್ದಾರೆ.

ಸೋನಿಯಾಗಾಂಧಿ ಆಸ್ಪತ್ರೆಗೆ ದಾಖಲು

ನವದೆಹಲಿ: ಇತ್ತೀಚೆಗೆ ಕೋವಿಡ್ ಸೋಂಕಿಗೆ ತುತ್ತಾಗಿದ್ದ ಕಾಂಗ್ರೆಸ್ ಅಧಿನಾಯಕಿ



ಸೋನಿಯಾ ಗಾಂಧಿ ಅವರ ಆರೋಗ್ಯದಲ್ಲಿ ಭಾನುವಾರ ಏರುಪೇರಾಗಿದ್ದು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಾಂಗ್ರೆಸ್ ಮೂಲಗಳ ಪ್ರಕಾರ ಸೋನಿಯಾ ಗಾಂಧಿ ಅವರನ್ನು ದೆಹಲಿಯ ಗಂಗಾರಾಮ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ. ಈ ಕುರಿತು ಮಾಹಿತಿ ನೀಡಿರುವ ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ, ಸೋನಿಯಾ ಗಾಂಧಿ ಅವರು ಕೋವಿಡ್ ಸಂಬಂಧಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಆದರೆ ಭಯ ಪಡುವ ಅಗತ್ಯವಿಲ್ಲ. ಅವರ ಆರೋಗ್ಯ ಸ್ಥಿರವಾಗಿದ್ದು, ಮುಂಜಾಗ್ರತಾ ಕ್ರಮವಾಗಿ ಅವರನ್ನು ಆಸ್ಪತ್ರೆಯಲ್ಲಿ ವೀಕ್ಷಣೆಯಲ್ಲಿಡಲಾಗಿದೆ ಎಂದು ಹೇಳಿದರು.

ಆತ್ಮ ನಿರ್ಭರ ಭಾರತಕ್ಕೆ ವಾಯುಸೇನೆ ಒತ್ತು

ದೇಶದಲ್ಲೇ ತಯಾರಾಗಲಿದೆ 96 ಜೆಟ್ ವಿಮಾನಗಳು

ನವದೆಹಲಿ: ಆತ್ಮ ನಿರ್ಭರ ಭಾರತಕ್ಕೆ ವಾಯುಸೇನೆ ಒತ್ತು ನೀಡುವ ನಿಟ್ಟಿನಲ್ಲಿ ವಾಯುಸೇನೆ ಸ್ವೀಕರಿಸಲಿರುವ ಯುದ್ಧ ವಿಮಾನಗಳ ಪೈಕಿ ಶೇ.90ರಷ್ಟು ಅಂದರೆ 96 ಜೆಟ್ ಯುದ್ಧ ವಿಮಾನಗಳನ್ನು ದೇಶದಲ್ಲಿಯೇ ತಯಾರಾಗಲಿವೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಆತ್ಮನಿರ್ಭರ ಭಾರತ ಯೋಜನೆಗೆ ದೊಡ್ಡ ಉತ್ತೇಜನದ ನಡುವೆಯೇ, ಭಾರತೀಯ ವಾಯು ಪಡೆಯು 114 ಯುದ್ಧ ವಿಮಾನಗಳನ್ನು ಸೇನೆಗೆ ಸ್ವಾಧೀನಪಡಿಸಿಕೊಳ್ಳಲು ಯೋಜಿಸುತ್ತಿದ್ದು, ಈ ಪೈಕಿ 96 ಜೆಟ್ ಯುದ್ಧ ವಿಮಾನಗಳನ್ನು ಭಾರತದಲ್ಲೇ ತಯಾರಿಸಲಾಗುತ್ತದೆ. ಉಳಿದ 18 ಯುದ್ಧ ವಿಮಾನಗಳನ್ನು ವಿದೇಶಿ ಮಾರಾಟಗಾರರಿಂದ ಆಮದು ಮಾಡಿಕೊಳ್ಳಲಾಗುವುದು ಎಂದು ವಾಯುಸೇನೆ ಮೂಲಗಳು ತಿಳಿಸಿವೆ.

ಭಾರತೀಯ ವಾಯುಪಡೆಯು 'ಬೈ ಗ್ಲೋಬಲ್ ಮತ್ತು ಮೇಕ್ ಇನ್ ಇಂಡಿಯಾ' ಯೋಜನೆಯಡಿಯಲ್ಲಿ 114 ಮಲ್ಟಿರೋಲ್ ಫೈಟರ್ ಏರ್‌ಕ್ರಾಫ್ಟ್‌ಗಳನ್ನು (ಒಖಈಂ) ಸ್ವಾಧೀನಪಡಿಸಿಕೊಳ್ಳುವ ಯೋಜನೆಯನ್ನು ಹೊಂದಿದೆ, ಅದರ ಅಡಿಯಲ್ಲಿ ಭಾರತೀಯ



ಕಂಪನಿಗಳು ವಿದೇಶಿ ಮಾರಾಟಗಾರರೊಂದಿಗೆ ಪಾಲುದಾರರಾಗಲು ಅವಕಾಶ ನೀಡುತ್ತವೆ. ಈ ಕುರಿತು ಸುದ್ದಿ ಸಂಸ್ಥೆ ವರದಿ ಮಾಡಿದ್ದು, ಇತ್ತೀಚೆಗೆ, ಭಾರತೀಯ ವಾಯುಪಡೆಯು ವಿದೇಶಿ ಮಾರಾಟಗಾರರೊಂದಿಗೆ ಸಭೆಗಳನ್ನು ನಡೆಸಿದ್ದು, ಅವರು ಮೇಕ್ ಇನ್ ಇಂಡಿಯಾ ಅಡಿಯಲ್ಲಿ ಯುದ್ಧ ವಿಮಾನಗಳನ್ನು ತಯಾರಿಸುವ ಪ್ರಸ್ತಾವವಿದೆ ಎನ್ನಲಾಗಿದೆ.

ಈ ಬಹು ಉದ್ದೇಶಿತ ಯೋಜನೆಯ ಪ್ರಕಾರ, ಆರಂಭಿಕ 18 ವಿಮಾನಗಳನ್ನು ಆಮದು ಮಾಡಿಕೊಂಡ ನಂತರ, ಮುಂದಿನ 36 ವಿಮಾನಗಳನ್ನು ದೇಶದೊಳಗೆ ತಯಾರಿಸಲಾಗುವುದು ಮತ್ತು ಪಾವತಿಗಳನ್ನು ಭಾಗಶಃ ವಿದೇಶಿ ಕರೆನ್ಸಿ ಮತ್ತು ಭಾರತೀಯ ಕರೆನ್ಸಿಯಲ್ಲಿ ಮಾಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಕೊನೆಯ 60 ವಿಮಾನಗಳು ಭಾರತೀಯ ಪಾಲುದಾರರ ಮುಖ್ಯ ಜವಾಬ್ದಾರಿಯಾಗಿದ್ದು, ಸರ್ಕಾರವು ಭಾರತೀಯ ಕರೆನ್ಸಿಯಲ್ಲಿ ಮಾತ್ರ ಪಾವತಿಗಳನ್ನು ಮಾಡುತ್ತದೆ. ಭಾರತೀಯ ಕರೆನ್ಸಿಯಲ್ಲಿ ಪಾವತಿ ಯೋಜನೆಯಲ್ಲಿ ಶೇಕಡಾ 60ಕ್ಕಿಂತ ಹೆಚ್ಚು 'ಮೇಕ್–ಇನ್–ಇಂಡಿಯಾ' ವಿಷಯವನ್ನು ಸಾಧಿಸಲು ಮಾರಾಟಗಾರರಿಗೆ ಸಹಾಯ ಮಾಡುತ್ತದೆ ಎಂದು ಮೂಲಗಳು ತಿಳಿಸಿವೆ.

ಬೋಯಿಂಗ್, ಲಾಕ್ಹೀಡ್ ಮಾರ್ಟಿನ್, ಸಾಬ್, ಮಿಗ್, ಇರ್ಕುಟ್ ಕಾರ್ಪೊರೇಷನ್ ಮತ್ತು ಡಸಾಲ್ಟ್ ಏವಿಯೇಷನ್ ಸೇರಿದಂತೆ ಜಾಗತಿಕ ವಿಮಾನ ತಯಾರಕರು ಈ ಪ್ರಮುಖ ಟೆಂಡರ್‌ನಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ನೆರೆಯ ಎದುರಾಳಿಗಳಾದ ಪಾಕಿಸ್ತಾನ ಮತ್ತು ಚೀನಾದ ಮೇಲೆ ತನ್ನ ಶ್ರೇಷ್ಠತೆಯನ್ನು ಕಾಯ್ದುಕೊಳ್ಳಲು ಭಾರತೀಯ ವಾಯುಪಡೆಯು ಈ 114 ಫೈಟರ್ ಜೆಟ್‌ಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ.

ರಫೇಲ್ ಯುದ್ಧವಿಮಾನಗಳ ಕಾರ್ಯಾಚರಣೆಯ ಲಭ್ಯತೆಯ ಬಗ್ಗೆ ಐಎಎಫ್ ಹೆಚ್ಚು ತೃಪ್ತವಾಗಿದೆ ಮತ್ತು ಭವಿಷ್ಯದ ವಿಮಾನಗಳಲ್ಲಿ ಇದೇ ರೀತಿಯ ಸಾಮರ್ಥ್ಯವನ್ನು ಬಯಸುತ್ತದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಮೈಸೂರು ಮಿತ್ರ

2-3 ತಿಂಗಳಲ್ಲಿ ರಾಜಕೀಯ ತೀರ್ಮಾನ



ಹನಗೋಡು, ಜೂ.12(ಮಹೇಶ್)- ಇನ್ನೂ 2-3 ತಿಂಗಳಲ್ಲಿ ಅಂತಿಮ ರಾಜಕೀಯ ನಿರ್ಧಾರ ಕೈಗೊಳ್ಳಲಿದ್ದೇನೆ ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಸಮೀಪದ ಮುದಗನೂರಿನಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರಾಜಕೀಯವಾಗಿ ನೀವು ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳಬೇಕು ಎಂದು ಬೆಂಬಲಿಗರು ಒತ್ತಾಯಿಸಿದಕ್ಕೆ ಪ್ರತಿಕ್ರಿಯಿಸಿದ ಅವರು, ನೀವು ನಮ್ಮ ಕುಟುಂಬದ ಜೊತೆ ಕಷ್ಟದ ಸಮಯದಲ್ಲಿ ಜೊತೆಯಲ್ಲಿ ಇದ್ದೀರಾ. ನಾವು ಸಹ ನಿಮ್ಮ ಕಷ್ಟ-ಸುಖಗಳನ್ನು ಹಂಚಿಕೊಳ್ಳುತ್ತ ಬಂದಿದ್ದೇವೆ. ಪ್ರತಿ ಚುನಾವಣೆಯಲ್ಲೂ ನಮ್ಮನ್ನೇ ಬೆಂಬಲಿಸಿಕೊಂಡು ಬಂದಿದ್ದೀರಾ. ಮುಂದೆಯೂ ನಮ್ಮ ಕುಟುಂಬದ ಸಂಬಂಧ ಇದೇ ರೀತಿ ಇರುತ್ತದೆ ಎಂದರು.

ಮುಂದಿನ ದಿನಗಳಲ್ಲಿ ಸಭೆ ಕರೆದು, ನಿಮ್ಮ ಸಮ್ಮುಖದಲ್ಲಿ ರಾಜಕೀಯ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷರಾದ ಸುಭಾಷ್, ಮುಖಂಡರಾದ ರವಿಗೌಡ, ಬಸವರಾಜ್, ಹನಗೋಡು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರವಿಕುಮಾರ್, ಬೆಟ್ಟೇಗೌಡ, ವೆಂಕಟೇಶ್, ಬಿ.ಟಿ.ಶ್ರೀನಿವಾಸ್, ಜವರೇಗೌಡ ಹಾಜರಿದ್ದರು.

ಮೂಗೂರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ

ದಿ.ರಾಚೇಗೌಡರ ಆದರ್ಶ ಯುವ ಪೀಳಿಗೆಗೆ ಮಾದರಿ



ತಿ.ನರಸೀಪುರ, ಜೂ.12(ಎಸ್‌ಕೆ)- ಮೂಗೂರಿನ ಸಂಭಾವಿತ ರಾಜಕಾರಣಿಯಾಗಿದ್ದ ದಿವಂಗತ ರಾಚೇಗೌಡರ ಆದರ್ಶಗಳು ಇಂದಿನ ಯುವ ಪೀಳಿಗೆಗೆ ಮಾದರಿ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೂಗೂರು ಗ್ರಾಮದ ಹಿರಿಯ ರಾಜಕಾರಣಿಯಾಗಿದ್ದ ರಾಚೇಗೌಡರ ಪುತ್ರ ಸೋಮಣ್ಣ ನವರ ಮನೆಗೆ ಭೇಟಿ ನೀಡಿ ಕುಶಲೋಪರಿ ವಿಚಾರಿಸಿದ ಅವರು, ಮೂಗೂರು ಗ್ರಾಮದ ರಾಜಕಾರಣದಲ್ಲಿ ತನ್ನದೇ ಛಾಪು ಮೂಡಿಸಿದ್ದ ರಾಚೇಗೌಡರು ಕಳಂಕರಹಿತ ರಾಜಕಾರಣಿಯಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದರು ಎಂದರು.

ರಾಜಕಾರಣಿಗಳ ನಿರಂತರ ಸಂಪರ್ಕದಲ್ಲಿದ್ದ ರಾಚೇಗೌಡರು ಗ್ರಾಮದ ಅಭಿವೃದ್ಧಿಗೆ ತಮ್ಮದೇ ರೀತಿಯಲ್ಲಿ ಕೊಡುಗೆ ನೀಡಿ ಎಲ್ಲಾ ಜನಾಂಗದವರ ಪ್ರೀತಿ-ವಿಶ್ವಾಸ ಗಳಿಸಿದ್ದರು. ಹಾಗಾಗಿ, ಯುವ ಮುಖಂಡರು ಅವರಲ್ಲಿದ್ದ ಸರಳತೆ, ಶಿಸ್ತು ಬದ್ಧ ರಾಜಕಾರಣವನ್ನು ಪಾಲಿಸಿ, ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಬೇಕಿದೆ ಎಂದರು.

ಈ ವೇಳೆ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ, ಜಿಪಂ ಮಾಜಿ ಸದಸ್ಯ ಎಂ.ಆರ್.ಸೋಮಣ್ಣ, ಮುಖಂಡರಾದ ಶಿವಮೂರ್ತಿ, ಶಿವು, ದಿಲೀಪ್, ಬಿ.ಮರಯ್ಯ, ಕೆ.ವಜ್ರೇಗೌಡ, ಪುರಸಭಾ ಮಾಜಿ ಅಧ್ಯಕ್ಷ ಬಸವಣ್ಣ, ಮಲ್ಲಿಕಾರ್ಜುನಸ್ವಾಮಿ, ನಾಗರಾಜು, ಗುರುಮೂರ್ತಿ, ವಾಟಾಳ್ ನಾಗೇಶ್, ಲತಾ, ಜಗದೀಶ್, ಅನುಪ್ ಗೌಡ, ಗುರುಮಲ್ಲ, ಮಾದೇಶ್, ಮಹದೇವ, ರಾಜು, ಮಹೇಶ್ ಇದ್ದರು.

ಬೆಟ್ಟದತುಂಗ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

ತಲಾ 6 ಜೆಡಿಎಸ್, ಕಾಂಗ್ರೆಸ್ ಬೆಂಬಲಿತರ ಆಯ್ಕೆ



ಬೆಟ್ಟದಪುರ, ಜೂ.12(ಶಿವದೇವ್)- ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಬೆಟ್ಟದತುಂಗ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ ಭಾನುವಾರ ನಡೆಯಿತು.

ಸಂಘದ ಕಚೇರಿಯಲ್ಲಿ ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಮತದಾನ ನಡೆಯಿತು. ನಂತರ ಸಂಜೆ 4ಗಂಟೆಗೆ ಫಲಿತಾಂಶ ಹೊರಬಿದ್ದಿತ್ತು ಒಟ್ಟು 12ಸದಸ್ಯರ ಬಲವಿರುವ ಸಂಘದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ಬೆಂಬಲಿತ ತಲಾ 6 ಸದಸ್ಯರು ಆಯ್ಕೆಯಾಗುವ ಮೂಲಕ ಸಮಬಲ ಸಾಧಿಸಿದರು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ಗಿರೀಶ್ ಕಾರ್ಯನಿರ್ವಹಿಸಿದರು.

ಜೆಡಿಎಸ್ ಬೆಂಬಲಿತರು: ಪ್ರಭುಗೌಡ, ಜಯಲಕ್ಷ್ಮೀ, ಮಣಿ, ಟಿ.ಸಿ.ಕೃಷ್ಣಅರಸ್, ಆರ್.ಈರಪ್ಪ, ದೇವರಾಜರಸ್ ಹಾಗೂ ಚೆಲುವೆ ಆಯ್ಕೆಯಾದರು.

ಕಾಂಗ್ರೆಸ್ ಬೆಂಬಲಿತರು: ಟಿ.ಅರವಿಂದ ರಾಜೇ ಅರಸ್, ಹುಚ್ಚೇಗೌಡ, ವಿಜಯ ರಾಜ್ ಅರಸ್, ಮರಿಗೌಡ, ಗೌರಮ್ಮ ಹಾಗೂ ಬಲರಾಮೇಗೌಡ ಆಯ್ಕೆಯಾದರು.

ಈ ವೇಳೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಮಕೃಷ್ಣೇಗೌಡ, ಗ್ರಾಪಂ ಮಾಜಿ ಉಪಾಧ್ಯಕ್ಷ ಮಧು, ಸದಸ್ಯೆ ಪ್ರೀತಿ, ಮುಖಂಡರಾದ ಕುಮಾರ್, ರಾಮೇಗೌಡ, ಕೃಷ್ಣೇಗೌಡ, ಸ್ವಾಮೇಗೌಡ, ಚಿಕ್ಕೇಗೌಡ, ಅರುಣ್‌ರಾಜ್ ಅರಸ್, ಸತೀಶರಾಜ್ ಅರಸ್ ಸೇರಿದಂತೆ ಇತರರು ಹಾಜರಿದ್ದರು.

ಕಾರ್ಯಕರ್ತರ ನಡುವೆ ಮಾತಿನ ಚಕಮಕಿ: ಚುನಾವಣೆಯಲ್ಲಿ ಜೆಡಿಎಸ್ ಹಾಗೂ ಕಾಂಗ್ರೆಸ್ ಬೆಂಬಲಿತರು ಜಯ ಗಳಿಸಿದ ಹಿನ್ನೆಲೆಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿ ಆವರಣದಲ್ಲಿ ಉಭಯ ಪಕ್ಷದ ಕಾರ್ಯಕರ್ತರು ವಿಜಯೋತ್ಸವ ಆಚರಿಸುತ್ತಿದ್ದ ವೇಳೆ ಪರಸ್ಪರ ಮಾತಿನ ಚಕಮಕಿ ಉಂಟಾಯಿತು. ಈ ವೇಳೆ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು. ಈ ವೇಳೆ ಪೊಲೀಸರು ಮಧ್ಯೆ ಪ್ರವೇಶಿಸಿ, ಪರಿಸ್ಥಿತಿ ನಿಯಂತ್ರಿಸಿದರು.

ಹಿಂದೂ ಸಾಮ್ರಾಜ್ಯ ನಿರ್ಮಾಣದ ರೂವಾರಿ ಶಿವಾಜಿ



ಗಾವಡಗೆರೆ, ಜೂ.12 (ಜಿವಿಎಸ್)- ಧರ್ಮ, ಸಂಸ್ಕೃತಿಗಳ ರಕ್ಷಣೆಗಾಗಿ ಹಿಂದೂ ಧರ್ಮದ ಉದ್ಧಾರಕ್ಕಾಗಿ ಭರತ ಭೂಮಿಯಲ್ಲಿ ಜನಿಸಿದ ವೀರ ಪುರುಷ ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕವನ್ನು ಸ್ವಾಭಿಮಾನಿ ಹಿಂದೂಗಳು ಹಿಂದೂ ಸಾಮ್ರಾಜ್ಯದ ದಿನೋತ್ಸವವನ್ನಾಗಿ ಆಚರಿಸಲಿದ್ದಾರೆ ಎಂದು ಸಮಾಜದ ಹಿರಿಯ ಮುಖಂಡ ಮಹದೇವ್ ರಾವ್ ಬಾಗಲ್ ತಿಳಿಸಿದರು.

ಹುಣಸೂರು ತಾಲೂಕಿನ ಗಾವಡಗೆರೆ ಗ್ರಾಮದ ಮರಾಠ ಭವನದಲ್ಲಿ ಶ್ರೀ ಶಿವ ಛತ್ರಪತಿ ಶ್ರೇಯೋಭಿವೃದ್ಧಿ ಸಮಿತಿಯ ಆಶ್ರಯದಲ್ಲಿ ನಡೆದ ಹಿಂದೂ ಸಾಮ್ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಶಿವಾಜಿ ಮಹಾರಾಜರ ಸಿಂಹಾಸನಾರೋಹಣವು ದೇಶ ಮತ್ತು ಧರ್ಮವನ್ನು ಪ್ರೀತಿಸುವವರ ಪಾಲಿಗೆ ವಿಜಯದ ಸಂಕೇತವೆಂದು ಭಾವಿಸಲಾಯಿತು. ಶಿವಾಜಿ ಮಹಾರಾಜರು ಸ್ವದೇಶ, ಸ್ವಧರ್ಮ, ಸ್ವಾಭಿಮಾನಗಳ ಜಾಗೃತಿ ಮೂಡಿಸುವ ಜೊತೆಗೆ, ಹಿಂದೂ ಸಾಮ್ರಾಜ್ಯ ನಿರ್ಮಾಣ ಮಾಡಿ ಹಿಂದೂಗಳಿಗೆ ಆತ್ಮಸ್ಥೈರ್ಯ ನೀಡಿದ ಮಹಾಪುರುಷ ಎಂದು ಬಣ್ಣಿಸಿದರು.

ಸತ್ಯ ಎಂಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಮಾತನಾಡಿದರು. ಅಧ್ಯಕ್ಷತೆಯನ್ನು ಸಮಿತಿ ಅಧ್ಯಕ್ಷರಾದ ಹೊನ್ನಪ್ಪ ರಾವ್ ಕಾಳಿಂಗ ವಹಿಸಿದ್ದರು. ಕಾರ್ಯಕ್ರಮದಲ್ಲಿ ಗೌರವಾಧ್ಯಕ್ಷೆ ಅನ್ನಪೂರ್ಣಬಾಯಿ, ಉಪಾಧ್ಯಕ್ಷ ನಾಗರಾಜ್‌ರಾವ್ ಮತಾಲೆ, ಸಂಘಟನಾ ಕಾರ್ಯದರ್ಶಿ ಜಿ.ವಿ. ಶ್ರೀನಾಥ್, ಲಕ್ಷ್ಮಣ್ ರಾವ್, ಪ್ರಕಾಶರಾವ್, ಸತೀಶ್, ನಾರಾಯಣ್ ರಾವ್, ನಾಗೇಶ್‌ರಾವ್ ಮುಂತಾದವರಿದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಆದರ್ಶ ಮೈಗೂಡಿಸಿಕೊಳ್ಳಿ



ಕೆ.ಆರ್.ನಗರ, ಜೂ.12(ಕೆಟಿಆರ್)- ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆದರ್ಶಗಳನ್ನು ನಾವೆಲ್ಲರೂ ಮೈಗೂಡಿಸಿ ಕೊಳ್ಳಬೇಕು ಎಂದು ರೈತ ಮುಖಂಡ ಹಾಗೂ ಹಿರಿಯ ಹೋರಾಟಗಾರ ಗರುಡಗಂಭಸ್ವಾಮಿ ಹೇಳಿದರು.

ಪಟ್ಟಣದ ಗರುಡಗಂಭ ವೃತ್ತದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಆಧುನಿಕ ಮೈಸೂರಿನ ನಿರ್ಮಾತೃ ತಮ್ಮ ಆಡಳಿತದಲ್ಲಿ ಸಮಾಜ ಸೇವೆಯನ್ನು ಮುಖ್ಯ ಗುರಿಯನ್ನಾಗಿರಿಸಿಕೊಂಡು ಆಡಳಿತ ನಡೆಸಿದವರು. ಇವರ ಕಾಲದಲ್ಲಿ ಎಲ್ಲಾ ಕ್ಷೇತ್ರದಲ್ಲಿಯೂ ಅಭಿವೃದ್ಧಿಯ ಮಹಾಪರ್ವವೇ ಆರಂಭವಾಯಿತು ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪ್ರಸಿದ್ಧ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿ ಇತಿಹಾಸವನ್ನು ನಿರ್ಮಿಸಿ, ನೂರಾರು ರೈತರಿಗೆ ಅನ್ನ ದಾತರಾಗಿದ್ದಾರೆ. ಇಂತಹ ಅಭಿವೃದ್ಧಿಪರ ರಾಜಕಾರಣಿಯನ್ನು ನಾವು ಇದುವರೆವಿಗೂ ನೋಡಿಲ್ಲ ಎಂದು ಅವರ ಕಾರ್ಯಕ್ರಮಗಳನ್ನು ಸ್ಮರಿಸಿದರು.

ಇವರ ಆಡಳಿತ ಅವಧಿಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ರಾಜ್ಯಾದ್ಯಂತ ನಡೆದಿದ್ದು, ನಮ್ಮ ತಾಲೂಕಿನಲ್ಲೂ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆದಿವೆ. ಅದರಲ್ಲಿ ಗರುಡಗಂಭ ಕೂಡ ಇವರ ಕಾಲದಲ್ಲಿ ಸ್ಥಾಪನೆಯಾಯಿತು ಎಂದು ಹೇಳಿದರು.

ಈ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಸಿಹಿವಿತರಿಸಿ ಮೈಸೂರು ಒಡೆಯರ್ ಅವರಿಗೆ ಜೈಕಾರಗಳನ್ನು ಕೂಗಿ, ಗೌರವ ನಮನ ಸಲ್ಲಿಸಿದರು.

ಕೃಷಿ ಪಂಡಿತ ಗೋಪಾಲ್‌ಗೌಡ, ಶಿವಾಜಿ ಗಣೇಶನ್, ಹೆಗ್ಗಂದೂರು ಪ್ರಭಾಕರ್, ಮಹದೇವ, ಎಲ್.ಐ.ಸಿ ಹೇಮಚಂದ್ರ, ಅರಕೆರೆ ಜಯಣ್ಣ, ಹರೀಶ್, ಗೋಕುಲ್ ಹೋಟಲ್ ನರಸಿಂಹ, ಎನ್.ಕೆ.ರೂಪ ಶಿವಾಜಿ, ಲಲಿತ ಸತ್ಯನಾರಾಯಣ, ಸೇರಿದಂತೆ ಇನ್ನಿತರರು ಹಾಜರಿದ್ದರು.

ಕಿತ್ತೂರು ಗ್ರಾಪಂ ಅಧ್ಯಕ್ಷರಾಗಿ ಕೆ.ಎಸ್. ನಳಿನಿ ಆಯ್ಕೆ



ಕಿತ್ತೂರು, ಜೂ.12- ಸಮೀಪದ ಕಿತ್ತೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆ ನಡೆಯಿತು.

ಅಧ್ಯಕ್ಷರಾಗಿ ನಳಿನಿ ಕೆ.ಎಸ್, ಉಪಾಧ್ಯಕ್ಷರಾಗಿ ಕೆ.ಆರ್ ವೀಣಾ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಗಳಿಗೆ ಒಂದೊಂದೇ ನಾಮಪತ್ರ ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಇವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು ಎಂದು ಚುನಾವಣಾಧಿಕಾರಿ ಹಾರಂಗಿ ಇಲಾಖೆಯ ಎಇಇ ಲೋಹಿತ್ ಘೋಷಣೆ ಮಾಡಿದರು. ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ನಳಿನಿ ಕೆ.ಎಸ್ ಮಾತನಾಡಿ, ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಮೊದಲ ಆದ್ಯತೆ ನೀಡಲಾಗುವುದು ಎಂದು ಹೇಳಿದರು. ಗ್ರಾಪಂ ಸದಸ್ಯರಾದ ಕಾವೇರಮ್ಮ ಕೆ.ಎ ದೀಪಕ್, ಬೇಲೂರಯ್ಯ, ರಾಜಮಣಿ, ಜಗದೀಶ್, ಜಯಶೀಲಾ, ರಜಿನಿ ವಸಂತ್, ಕೆ ಎಸ್ ದಿನೇಶ್ ಪ್ರಭಾವತಿ, ಬೋರೇಗೌಡ, ಗಿರಿಜಾ ಮಹದೇವ್ ನಟರಾಜ್, ಮಂಜಪ್ಪ ಗಣೇಶ್ ಪೂಜಾ ಶೋಭಾ ಪಿಡಿಒ ರಾಜಶೇಖರ್ ಹಾಗೂ ಗ್ರಾಮಸ್ಥರಾದ ಸಚಿನ್, ರಾಮೇಗೌಡ, ಪ್ರಕಾಶ್, ವೆಂಕಟೇಶ್ ಇದ್ದರು.

ಉಚಿತ ಸಿಇಟಿ ತರಬೇತಿ, ಅಣಕು ಪರೀಕ್ಷೆ ಕಾರ್ಯಾಗಾರ




ನಂಜನಗೂಡು, ಜೂ.12(ಸುದರ್ಶನ್)- ತಾಲೂಕಿನ ತಾಂಡವಪುರದ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಭಾನುವಾರ ಅಖಿಲಭಾರತ ವಿದ್ಯಾರ್ಥಿ ಪರಿಷತ್ ಮತ್ತು ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದ ಸಹಯೋಗದಲ್ಲಿ ಪಿಯುಸಿ ವಿದ್ಯಾರ್ಥಿಗಳಿಗೆ ಉಚಿತ ಸಿಇಟಿ ತರಬೇತಿ ಮತ್ತು ಅಣಕು ಪರೀಕ್ಷೆ ಕಾರ್ಯಾಗಾರ ನಡೆಯಿತು.

ಈ ವೇಳೆ ಪ್ರಾಂಶುಪಾಲ ಡಾ.ವೈ.ಟಿ.ಕೃಷ್ಣೇಗೌಡ ಮಾತನಾಡಿ, ಕೆಲವು ಶಿಕ್ಷಣ ಸಂಸ್ಥೆಗಳು ಸಿಇಟಿ ಪರೀಕ್ಷೆ ತರಬೇತಿ ಹೆಸರಿನಲ್ಲಿ ಸುಲಿಗೆ ಮಾಡುತ್ತಿದೆ. ಇದರಿಂದ ಪೋಷಕರಿಗೆ ಮತ್ತು ವಿದ್ಯಾರ್ಥಿಗಳಲ್ಲಿ ಆತಂಕ ಮನೆ ಮಾಡಿದೆ. ವಿದ್ಯಾರ್ಥಿಗಳಲ್ಲಿನ ಭಯವನ್ನು ಹೋಗಲಾಡಿಸಲು ಹಾಗೂ ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವೇದಿಕೆ ಒದಗಿಸುವ ಉದ್ದೇಶದಿಂದ ಉಚಿತ ಸಿಇಟಿ ಪರೀಕ್ಷೆ ತರಬೇತಿ ಮತ್ತು ಅಣಕು ಪರೀಕ್ಷೆ ನಡೆಸಿ ನೆರವಾಗಿದೆ. ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಎಬಿವಿಪಿ ವಿದ್ಯಾರ್ಥಿ ಪರಿಷತ್‌ನ ಹಿರಿಯ ಕಾರ್ಯಕರ್ತ ಮಂಜುನಾಥ್ ಮಾತನಾಡಿದರು. ಅಣಕು ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಶ್ರೀನಿವಾಸ್, ಪ್ರಮೋದ್‌ಕುಮಾರ್, ಸಲಾಮತ್, ಎಬಿವಿಪಿ ವಿದ್ಯಾರ್ಥಿ ಪರಿಷತ್‌ನ ಬಿ.ಎಂ.ಶಶಿಕುಮಾರ್ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

ಮನುಗನಹಳ್ಳಿ ಹಾಲು ಉತ್ಪಾದಕರ ಸಂಘಕ್ಕೆ ನಿರ್ದೇಶಕರ ಆಯ್ಕೆ



ಸರಗೂರು, ಜೂ.12(ನಾಗೇಶ್)- ತಾಲೂಕಿನ ಮನುಗನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಆಯ್ಕೆಯ ಸಂಬಂಧ ಭಾನುವಾರ ಚುನಾವಣೆ ನಡೆಯಿತು.

ಒಟ್ಟು 10 ನಿರ್ದೇಶಕರ ಸ್ಥಾನಗಳಿಗೆ ಒಟ್ಟು 14 ಮಂದಿ ನಾಮಪತ್ರ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಕಚೇರಿಯಲ್ಲಿ ಮತದಾನ ನಡೆಯಿತು. ಬಳಿಕ, ಮತ ಏಣಿಕೆ ನಡೆದು ಫಲಿತಾಂಶ ಹೊರ ಬಿದ್ದಿತ್ತು.

7 ಸಾಮಾನ್ಯ ಕ್ಷೇತ್ರ, 2 ಮಹಿಳಾ ಕ್ಷೇತ್ರ ಹಾಗೂ ಒಂದು ಪರಿಶಿಷ್ಟ ಜಾತಿಗೆ ನಡೆದ ಚುನಾವಣೆಯಲ್ಲಿ ಒಟ್ಟು 136 ಮತದಾರರ ಪೈಕಿ 132 ಸದಸ್ಯರು ಮತದಾನ ಮಾಡಿ ದರು. ಚುನಾವಣಾಧಿಕಾರಿಯಾಗಿ ರಿಟರ್ನಿಂಗ್ ಆಫೀಸರ್ ಡಿ.ಎಲ್. ಸುರೇಶ್ ಕರ್ತವ್ಯ ನಿರ್ವಹಿಸಿದ್ದರು.

ಸಾಮಾನ್ಯ ಅಭ್ಯರ್ಥಿ ಮೀಸಲಾತಿ: ಈರಪ್ಪ 99, ಎಸ್.ಮಂಜು 91, ಮಹದೇವಪ್ಪ 89, ಪರಶಿವಮೂರ್ತಿ 72, ಬಿ.ರಾಜಪ್ಪ 71, ಬಸವರಾಜಪ್ಪ 70, ಎಂ.ಎನ್. ಮಲ್ಲಿಕಾರ್ಜುನ 64 ಮತಗಳನ್ನು ಪಡೆದು ಜಯಗಳಿಸಿದ್ದಾರೆ.

ಮಹಿಳಾ ಮೀಸಲಾತಿ: ಜಯಂತಿ 98, ಸೌಭಾಗ್ಯ 78 ಮತ ಪಡೆದು ಆಯ್ಕೆಯಾಗಿದ್ದಾರೆ.

ಪರಿಶಿಷ್ಟ ಜಾತಿ ಮೀಸಲಾತಿ: ತಿಮ್ಮಯ್ಯ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರನ್ನು ಅವಿರೋಧ ಆಯ್ಕೆ ಎಂದು ಘೋಷಿಸಲಾಯಿತು.

ಈ ವೇಳೆ ರಾಜು, ನಿಂಗಣ್ಣಸ್ವಾಮಿ, ಬಸವರಾಜು, ಶೋಭಾ, ಗ್ರಾಮದ ಮುಖಂಡರಾದ ಗುರುಸ್ವಾಮಿ, ನಂದೀಶ್, ಸೋಮಶೇಕರ್, ಮಾದಪ್ಪ, ಎಂ.ಪಿ.ಮಂಜುನಾಥ್, ಸೂರ್ಯಕುಮಾರ್, ಪರಶಿವಮೂರ್ತಿ, ಭೋಜಪ್ಪ, ಲೋಕೇಶ್, ಸಂಗಣ್ಣ, ಸುರೇಶ್, ಸಂಘದ ಸದಸ್ಯರು, ಗ್ರಾಮಸ್ಥರು ಇದ್ದರು.

ಸೋಮನಾಥಪುರ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ತಿ.ನರಸೀಪುರ, ಜೂ.12(ಎಸ್‌ಕೆ)- ತಾಲೂಕಿನ ಸೋಮನಾಥಪುರ ಗ್ರಾಪಂ ನೂತನ ಅಧ್ಯಕ್ಷರಾಗಿ ಅರ್ಚನಾ ಸಂದೀಪ್, ಉಪಾಧ್ಯಕ್ಷರಾಗಿ ಎಸ್.ಸಿದ್ದಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಗ್ರಾಪಂ ಅಧ್ಯಕ್ಷೆ ಗೌರಮ್ಮ, ಉಪಾಧ್ಯಕ್ಷ ಎಸ್. ಕಾಂತರಾಜು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಅವರಿಂದ ತೆರವಾದ ಸ್ಥಾನಗಳಿಗೆ ಗ್ರಾಪಂ ಸಭಾಂಗಣದಲ್ಲಿ ನಡೆದ ಚುನಾವಣಾ ವಿಶೇಷ ಸಭೆಯಲ್ಲಿ ಇವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ವೈ.ಡಿ. ಅನಿಲ್ ಕುಮಾರ್ ಘೋಷಿಸಿದರು.

ನಿರ್ಗಮಿತ ಅಧ್ಯಕ್ಷೆ ಗೌರಮ್ಮ, ಉಪಾಧ್ಯಕ್ಷ ಎಸ್.ಕಾಂತರಾಜು, ಸದಸ್ಯರಾದ ಗೀತಾ, ಗಿರೀಶ್, ಹೇಮಾವತಿ, ಪಿ.ಮಂಜೇಶ್ ಗೌಡ, ನಾಗರತ್ನಮ್ಮ, ಪುಟ್ಟಸಿದ್ದಮ್ಮ, ಕೆ.ಪಿ. ಪುಟ್ಟಸ್ವಾಮಿ, ರಾಜಣ್ಣ ಸುಂದರಮ್ಮ ಸುವರ್ಣ ಹಾಜರಿದ್ದು ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು. ನೂತನ ಅಧ್ಯಕ್ಷೆ ಅರ್ಚನಾ ಮಾತನಾಡಿ, ಆಂತರಿಕ ಒಪ್ಪಂದದಂತೆ ಅಧ್ಯಕ್ಷ ಸ್ಥಾನ ದೊರಕಿದೆ. ಪಂಚಾಯ್ತಿಯ ಎಲ್ಲಾ ಹಿರಿಯ ಸದಸ್ಯರ ಮಾರ್ಗದರ್ಶನದಲ್ಲಿ ಸಿಕ್ಕಿರುವ ಅವಕಾಶ ಸದುಪಯೋಗಪಡಿಸಿಕೊಂಡು ಪಂಚಾಯ್ತಿಯನ್ನು ಮಾದರಿ ಪಂಚಾಯ್ತಿ ಮಾಡಲು ಶ್ರಮಿಸುತ್ತೇನೆ. ಗ್ರಾಮದ ಮೂಲ ಸೌಕರ್ಯಕ್ಕೆ ಹೆಚ್ಚಿನ ಒತ್ತು ನೀಡಲು ಸ್ಥಳೀಯ ಶಾಸಕರ ಸಂಪರ್ಕ ಸಾಧಿಸಿ ಹೆಚ್ಚಿನ ಅನುದಾನ ತರಲು ಎಲ್ಲರ ಸದಸ್ಯರ ಸಹಕಾರ ಬಯಸುತ್ತೇನೆ ಎಂದರು.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಜಿಪಂ ಮಾಜಿ ಸದಸ್ಯ ಜಯಪಾಲ್ ಭರಣಿ, ಗ್ರಾಪಂ ಮಾಜಿ ಅಧ್ಯಕ್ಷ ಅಶೋಕ್, ದಿನೇಶ್, ತಾಪಂ ಮಾಜಿ ಉಪಾಧ್ಯಕ್ಷ ಬಿ. ಮರಯ್ಯ, ರಾಮಲಿಂಗು, ದಿವಾಕರ್, ರಾಜಣ್ಣ, ಸಿದ್ದುಂಡಿ ನಟರಾಜು, ನಾಗೇಂದ್ರ ಪಿಡಿಒ ಸಂತೋಷ್ ಕುಮಾರ್, ಬಿಎಸ್‌ಎನ್‌ಎಲ್ ಜಯರಾಂ ಮತ್ತಿತರರಿದ್ದರು.

ಅರ್ಜಿ ಆಹ್ವಾನ

ನಂಜನಗೂಡು, ಜೂ.12(ಸುದರ್ಶನ್) - ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕ, ಬಾಲಕಿಯರ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 5 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ವರ್ಗದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಶ್ರೀನಿವಾಸಪ್ರಸಾದ್ ತಿಳಿಸಿದ್ದಾರೆ.

ಉಚಿತ ಊಟ, ವಸತಿ, ಸಮವಸ್ತ್ರ ನೋಟ್ ಬುಕ್, ಲೇಖನ ಸಾಮಗ್ರಿ, ಶೂ, ಸಾಕ್ಸ್, ಶುಚಿ ಕಿಟ್, ಸ್ನಾನಕ್ಕೆ ಬಿಸಿನೀರು, ಜಿಮ್, ಬೋಧಕರಿಂದ ಉಚಿತ ಬೋಧನೆ ಸೇರಿದಂತೆ ಹಲವಾರು ಸೌಕರ್ಯಗಳನ್ನು ಒದಗಿಸಲಾಗುವುದು. ಮಾಹಿತಿಗಾಗಿ ದೂ.9480843178ನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಪರಿಷ್ಕೃತ ಪಠ್ಯ ರದ್ದಿಗೆ ಆಗ್ರಹಿಸಿ ಪ್ರತಿಭಟನೆ



ತಿ.ನರಸೀಪುರ, ಜೂ12(ಎಸ್‌ಕೆ)- ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸುಧಾರಕರ ವಿಚಾರಗಳನ್ನು ಕೈಬಿಟ್ಟು ರಚಿಸಿರುವ ಸುಳ್ಳು ಮಾಹಿತಿವುಳ್ಳ ವಿವಾದಿತ ಪರಿಷ್ಕೃತ ಪಠ್ಯ ಪುಸ್ತಕವನ್ನು ರದ್ದುಪಡಿಸಲು ಆಗ್ರಹಿಸಿ ಪಟ್ಟಣದ ತಾಲೂಕು ಕಚೇರಿಯ ಮುಂಭಾಗ ಅಂಬೇಡ್ಕರ್ ಸೇನೆ ಕಾರ್ಯಕರ್ತರು ಶುಕ್ರವಾರ ರಾತ್ರಿ ಪ್ರತಿಭಟನೆ ನಡೆಸಿದರು.

ತಾಲೂಕು ಕಚೇರಿ ಮುಂಭಾಗದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಬಳಿ ಸಮಾವೇಶಗೊಂಡ ಕಾರ್ಯಕರ್ತರು ಹಾಗೂ ಮುಖಂಡರು ಪಠ್ಯಪುಸ್ತಕವನ್ನೂ ಧರ್ಮ ರಾಜಕಾರಣ ಹಾಗೂ ಕೇಸರಿ ಕರಣಕ್ಕೆ ದುರ್ಬಳಕೆ ಮಾಡಿಕೊಳ್ಳಲಾಗುತ್ತದೆ ಎಂದು ಆರೋಪಿಸಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ತಾಲೂಕು ಅಧ್ಯಕ್ಷ ಚೌಹಳ್ಳಿ ಜಯರಾಮ್, ಸೇನೆಯ ಗೌರವಾಧ್ಯಕ್ಷ ಎ.ನಾಗರಾಜು(ಪಾಪು), ಮುಖಂಡ ರಾದ ಚೌಹಳ್ಳಿ ಮಹದೇವಸ್ವಾಮಿ, ಸಿದ್ದನಹುಂಡಿ ಶಿವಕುಮಾರ್, ಕಿಶೋರ್, ಚಿನ್ನಸ್ವಾಮಿ ಹಾಗೂ ಇನ್ನಿತರರು ಭಾಗವಹಿಸಿದ್ದರು.



ಇತ್ತೀಚೆಗೆ ನಿಧನರಾದ ನಂಜನಗೂಡು ತಾಲೂಕಿನ ನಗರ್ಲೆ ಗ್ರಾಮದ ನಿವಾಸಿ ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ಕೃಷ್ಣನಾಯಕ ಅವರಿಗೆ ಗ್ರಾಮದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಶಾಸಕ ಯತೀಂದ್ರ ಸಿದ್ದರಾಮಯ್ಯ, ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್‌ಸಿ ಬಸವರಾಜು, ಜಿಪಂ ಮಾಜಿ ಸದಸ್ಯ ಸದಾನಂದ, ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿ ಮಹೇಂದ್ರ, ಮುಖಂಡರಾದ ನಟರಾಜ್, ಬ್ಲಾಕ್ ಅಧ್ಯಕ್ಷ ರಂಗಸ್ವಾಮಿ, ಗೋಣಹಳ್ಳಿ ಕುಮಾರ್, ವಿಜಯ ಕುಮಾರ್, ಶಿವರಾಂ, ಮನು, ನರಸಿಂಹಮೂರ್ತಿ, ಮಹದೇವಸ್ವಾಮಿ, ಇಸ್ಮಾಯಿಲ್, ಮಲ್ಲೇಶ್, ಧರ್ಮೇಂದ್ರ ಬಾಬು, ಅಲ್ತಾಫ್ ಪಾಷಾ, ಗುರುಪಾದ, ಸಂತೋಷ್, ಕೃಷ್ಣ ನಾಯಕರ ಮೊಮ್ಮಗ ಸಂತೋಷ್ ಹಾಜರಿದ್ದು, ಮೌನಾಚರಿಸುವ ಮೂಲಕ ಕೃಷ್ಣನಾಯಕರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ನಾಸಿಕ್ ತಲುಪಿತು ಸದ್ಗುರು ಮಣ್ಣು ಉಳಿಸಿ ಅಭಿಯಾನ

ಮಣ್ಣು ಹಾಳಾದರೆ ಬದುಕುಳಿಯುವುದೇ ಕಷ್ಟ



ಸದ್ಗುರು ಜಗ್ಗಿ ವಾಸುದೇವ ಎಚ್ಚರಿಕೆ

ನಾಸಿಕ್: ಈಶ ಫೌಂಡೇಷನ್ ಸಂಸ್ಥಾಪಕ ಸದ್ಗುರು ಹಮ್ಮಿಕೊಂಡಿರುವ ಮಣ್ಣು ರಕ್ಷಿಸಿ ಅಭಿಯಾನ ನಾಸಿಕ್ ತಲುಪಿದ್ದು, ಇಲ್ಲಿ ದೇಶದೂತ್ ಮತ್ತು ಮರಾಠ ವಿದ್ಯಾ ಪ್ರಸಾರಕ್ ಸಮಾಜ ಜಂಟಿಯಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸದ್ಗುರು ಮಾತನಾಡಿದರು.

ಮಣ್ಣು ಅವನತಿಯತ್ತ ಸಾಗಿದರೆ ನಾವು ಬದುಕುಳಿಯುವುದೇ ಕಷ್ಟವಾಗುತ್ತದೆ. ಒಮ್ಮೆ ಆಹಾರದ ಕೊರತೆ ಶುರುವಾದರೆ, ನಾಗರಿಕತೆಯ ಪತನವಾಗುತ್ತದೆ. ನಮ್ಮ ಮನುಷ್ಯತ್ವವೇ ಕಾಣೆಯಾಗಿ ಹೋಗುವ ಪರಿಸ್ಥಿತಿ ಬರುತ್ತದೆ ಎಂದು ಸದ್ಗುರು ಎಚ್ಚರಿಸಿದರು.

ಮೊದಲ ಸಲ ನಾಸಿಕ್‌ಗೆ ಬರುತ್ತಿರುವ ಸದ್ಗುರುವನ್ನು ಕೆಟಿಎಚ್‌ಎಮ್ ಕಾಲೇಜಿನ ಸೆಕ್ರಟರಿ ಜನರಲ್ ನೀಲಿಮತ್ಯೆ ವಸಂತ ರಾವ್ ಪವಾರ್ ಮತ್ತು ದೇಶ್‌ದೂತ್ ಮ್ಯಾನೇಜಿಂಗ್ ಡೈರೆಕ್ಟರ್ ಜನಕ್ ಸರ್ದಾ ಅವರು ಮರಾಠ ಪರಂಪರೆಯ ಧೈರ್ಯ – ಸಾಹಸಗಳ ಗುರುತಾದ ಪಗಡಿ (ಪೇಟ) ಯನ್ನು ಕೊಟ್ಟು ಗೌರವಿಸಿದರು. ನೀಲಿಮತ್ಯೆ ವಸಂತರಾವ್ ಪವಾರ್ ನಾಸಿಕ್‌ನ ಪಂಚತತ್ವ ಮತ್ತು ಮಹಾರಾಷ್ಟ್ರದ ಸಾಂಪ್ರದಾಯಿಕ ಗುರುತಾದ ಪೈಥಾನಿ ರೇಷ್ಮೆ ಶಾಲನ್ನು ಹೊದಿಸಿ ಗೌರವಿಸಿದರು.

ನಾವು ಸಾಮಾನ್ಯವಾಗಿ ಜಡವಸ್ತುವೆಂದು ಭಾವಿಸುವ 15ರಿಂದ 18 ಇಂಚಿನಷ್ಟಿರುವ ಮೇಲ್ಪದರದ ಮಣ್ಣು ಕೋಟ್ಯಂತರ ಜೀವಿಗಳ ವಾಸ ಸ್ಥಾನವಾಗಿದೆ ಎಂದು ಸದ್ಗುರು ಜ್ಞಾಪಿಸಿದರು. ಮಾನವರ ಚಟುವಟಿಕೆಯಿಲ್ಲದೆ ಒಂದೇ ಒಂದು ಇಂಚು ಮಣ್ಣಿನ ಪದರವನ್ನು ಸೃಷ್ಟಿಸಲು 600–800 ವರ್ಷಗಳೇ ಬೇಕಾಗುತ್ತದೆ. ಆದರೆ ಈಗಿನ ಮಾನವ ಜನಾಂಗದ ಚಟುವಟಿಕೆಯನ್ನು ಗಮನಿಸಿದರೆ, ಅದೇ ಒಂದು ಇಂಚು ಮಣ್ಣಿನ ಮೇಲ್ಪದರವನ್ನು ಸೃಷ್ಟಿಸಲು 13,000 ವರ್ಷಗಳೇ ಬೇಕಾಗುತ್ತದೆ ಎಂದು ವಿವರಿಸುತ್ತ ಮಣ್ಣಿನ ಸಂರಕ್ಷಣೆ ಎಷ್ಟು ಮುಖ್ಯವೆಂದು ವಿವರಿಸಿದರು.

ನಾವು ಕಾಲದ ಎಂತಹ ಹೊಸ್ತಿಲಲ್ಲಿದ್ದೇವೆ ಎಂದು ಮನಮುಟ್ಟುವಂತೆ ಹೇಳಿದ ಸದ್ಗುರು, ಒಂದು ಪೀಳಿಗೆಯವರಾಗಿ ಮುಂದಿನ 10–15 ವರ್ಷಗಳಲ್ಲಿ ನಾವು ಪ್ರಮುಖವಾದ ಗಮನಾರ್ಹ ಬದಲಾವಣೆ ತರುವಂತಹ ಸದವಕಾಶ ನಮಗಿದೆ. ನಾವೀಗ ಇದನ್ನು ಮಾಡದಿದ್ದರೆ ಜೀವವೈವಿಧ್ಯಗಳ ನಷ್ಟದಿಂದ ಮಣ್ಣಿನ ಪುನರುಜ್ಜೀವನ ಇನ್ನೂ 25–40 ವರ್ಷಗಳಾದರೂ ಸಾಧ್ಯವಾಗುವುದಿಲ್ಲ ಎಂದು ಎಚ್ಚರಿಸಿದರು. ಪ್ರಜಾಸತ್ತಾತ್ಮಕ ದೇಶಗಳಲ್ಲಿ, ಸರ್ಕಾರವು ಜನ ದನಿಗೆ ಪ್ರಾಮುಖ್ಯತೆ ಕೊಡುವುದರಿಂದ, ಜನರು ತಮ್ಮ ದನಿಯೆತ್ತಿ, ಮಣ್ಣಿನ ಪುನರುಜ್ಜೀವನದ ಕಾರ್ಯನೀತಿಗಳು, ಶಾಸನಗಳು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಲ್ಲಿ ಜಾರಿಗೆ ಬರುವವರೆಗೂ ತಮ್ಮ ದನಿಯನ್ನು ಏರಿಸುತ್ತಲೇ ಇರಬೇಕು ಎಂದು ಒತ್ತಿ ಹೇಳಿದರು.

ಮಾರ್ಚ್ 21ರಂದು ಯುರೋಪ್, ಮಧ್ಯ ಏಷ್ಯಾ ಮತ್ತು ಮಧ್ಯಪ್ರಾಚ್ಯದಾದ್ಯಂತ ಒಬ್ಬಂಟಿ ಮೋಟಾರ್ ಬೈಕ್ ಪ್ರಯಾಣವನ್ನು ಪ್ರಾರಂಭಿಸಿದ ಸದ್ಗುರು ಕೆಲವು ದಿನಗಳ ಹಿಂದೆ ಗುಜರಾತ್‌ನ ಪಶ್ಚಿಮ ಭಾಗದ ಬಂದರು ನಗರವಾದ ಜಾಮ್‌ನಗರ ತಲುಪಿದರು. ಬಳಿಕ ಗುಜರಾತ್, ರಾಜಸ್ಥಾನ, ಹರಿಯಾಣ ಮತ್ತು ನವದೆಹಲಿಯಲ್ಲಿ ಕಾರ್ಯಕ್ರಮಗಳನ್ನು ನಡೆಸಿದ್ದರು. ನವದೆಹಲಿಯಲ್ಲಿ ನಡೆದ ಮಣ್ಣು ಉಳಿಸಿ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಸದ್ಗುರು ಅವರ ಮಣ್ಣು ಉಳಿಸಿ ಅಭಿಯಾನಕ್ಕೆ ತಮ್ಮ ಸಂಪೂರ್ಣ ಬೆಂಬಲ ಮತ್ತು ಪ್ರೋತ್ಸಾಹ ವ್ಯಕ್ತಪಡಿಸಿದ್ದರು. ಸದ್ಗುರು ಮಣ್ಣಿನ ಪುನರುಜ್ಜೀವನಕ್ಕಾಗಿ ಬೇಕಾದ ಪ್ರಾಯೋಗಿಕ ಮತ್ತು ವೈಜ್ಞಾನಿಕ ಪರಿಹಾರಗಳುಳ್ಳ ಮಣ್ಣು ಉಳಿಸಿ ಕಾರ್ಯನೀತಿ ಕೈಪಿಡಿಯನ್ನು ಪ್ರಧಾನಿ ಮೋದಿ ಅವರಿಗೆ ನೀಡಿದ್ದರು.


ಈಗಾಗಲೇ ಗುಜರಾತ್ ಮತ್ತು ರಾಜಸ್ಥಾನ ಸರ್ಕಾರಗಳು ತಮ್ಮ ರಾಜ್ಯದಲ್ಲಿ ಮಣ್ಣು ಉಳಿಸಲು ಒಡಂಬಡಿಕೆ (ಎಂಒಯು)ಗೆ ಸಹಿ ಹಾಕಿವೆ. ಅಭಿಯಾನವು ಇಲ್ಲಿಯವರೆಗೆ 2.5 ಶತಕೋಟಿ ಜನರನ್ನು ತಲುಪಿದೆ, ಜೊತೆಗೆ 74 ದೇಶಗಳು ತಮ್ಮ ರಾಷ್ಟ್ರಗಳ ಮಣ್ಣನ್ನು ಉಳಿಸಲು ಕಾರ್ಯನಿರ್ವಹಿಸಲು ಸಿದ್ಧವಾಗಿವೆ ಭಾರತದ 15 ಲಕ್ಷಕ್ಕೂ ಹೆಚ್ಚು ಮಕ್ಕಳು ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದು ಮಣ್ಣು ಮತ್ತು ಅವರ ಭವಿಷ್ಯವನ್ನು ಉಳಿಸಲು ಕಾರ್ಯನಿರ್ವಹಿಸುವಂತೆ ವಿನಂತಿಸಿದ್ದಾರೆ. ಉತ್ತರ ಪ್ರದೇಶದ 25 ಜಿಲ್ಲೆಗಳ 300ಕ್ಕೂ ಹೆಚ್ಚು ಶಾಲೆಗಳ 65,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರಧಾನಿಯವರಿಗೆ ಪತ್ರ ಬರೆದಿದ್ದಾರೆ.

ಮಣ್ಣು ಉಳಿಸಿ ಅಭಿಯಾನದ ಪ್ರಾಥಮಿಕ ಉದ್ದೇಶವೆಂದರೆ ತುರ್ತು ಕಾರ್ಯನೀತಿ ಸುಧಾರಣೆಗಳ ಮೂಲಕ ಕೃಷಿ ಮಣ್ಣಿನಲ್ಲಿ ಕನಿಷ್ಠ ಶೇ. 3ರಿಂದ 6 ಜೈವಿಕ ಅಂಶವನ್ನು ಕಡ್ಡಾಯಗೊಳಿಸುವಂತೆ ಪ್ರಪಂಚದ ಎಲ್ಲ ರಾಷ್ಟ್ರಗಳನ್ನು ಆಗ್ರಹಪಡಿಸುವುದು. ಇಷ್ಟು ಕನಿಷ್ಠ ಜೈವಿಕ ಅಂಶವಿಲ್ಲದೆ, ಮಣ್ಣಿನ ವಿಜ್ಞಾನಿಗಳು ಮಣ್ಣಿನ ನಿರ್ಧಾರಿತ ಅವನತಿಯ ಬಗ್ಗೆ ಎಚ್ಚರಿಸಿದ್ದಾರೆ, ಈ ವಿದ್ಯಮಾನವನ್ನು, ಅವರು 'ಮಣ್ಣಿನ ಅಳಿವು' ಎಂದು ಕರೆಯುತ್ತಿದ್ದಾರೆ.

ರಾಜ್ಯದಲ್ಲಿ 463 ಮಂದಿಗೆ ಕೊರೊನಾ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆಯಲ್ಲಿ ಕೊಂಚ ಇಳಿಕೆಯಾಗಿದ್ದು, ಕಳೆದ 24 ಗಂಟೆಯಲ್ಲಿ 463 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 3,956,334ಕ್ಕೆ ಏರಿಕೆಯಾಗಿದೆ. ಇನ್ನೂ ರಾಜ್ಯದಲ್ಲಿ ಮಹಾಮಾರಿ ಕೊರೋನಾದಿಂದ ಇಂದು ಯಾವುದೇ ಸಾವು ವರದಿಯಾಗಿಲ್ಲ. ಹೀಗಾಗಿ ಸಾವಿನ ಸಂಖ್ಯೆ 40,066 ಇದೆ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಟ್ವೀಟ್ ಮಾಡಿದ್ದಾರೆ. ಬೆಂಗಳೂರಿನಲ್ಲಿ ಇಂದು 429 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 1,791,740ಕ್ಕೆ ಏರಿಕೆಯಾಗಿದೆ. ಇಂದು ರಾಜಧಾನಿಯಲ್ಲೂ ಯಾವುದೇ ಕೊರೊನಾ ಸಾವು ವರದಿಯಾಗಿಲ್ಲ. ರಾಜ್ಯದಲ್ಲಿ ಇಂದು199 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 3,912,575ಕ್ಕೆ ಏರಿಕೆಯಾಗಿದೆ. ಇನ್ನು 3,651 ಸಕ್ರಿಯ ಪ್ರಕರಣಗಳಿವೆ.

ಪಠ್ಯ ಪರಿಷ್ಕರಣೆಯಿಂದ ಆರ್ಥಿಕ ನಷ್ಟವಾಗಿಲ್ಲ



ಹಾಸನ: ಪಠ್ಯಪುಸ್ತಕ ಪರಿಷ್ಕರಣೆ ಮುಗಿದಿದ್ದು, ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ. ಪರಿಷ್ಕರಣೆಯಿಂದ ಸರಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಣ್ಣಪುಟ್ಟ ದೋಷಗಳಿದ್ದರೆ ಸರಿಪಡಿಸಲಾಗುವುದು. ಬಸವಣ್ಣನವರ ವಿಷಯ ಕೈಬಿಟ್ಟಿದ್ದರೆ ಅದನ್ನು ಸೇರ್ಪಡೆ ಮಾಡಲಾಗುವುದು. ಹಿಂದೂ ಸಮಾಜ ಒಡೆಯಲು ಪಠ್ಯಪುಸ್ತಕ ಪರಿಷ್ಕರಣೆ ವಿಚಾರ ವಿವಾದವನ್ನಾಗಿಸಿದರು. ಹಿಂದಿನಿಂದಲೂ ಹಿಂದೂ ಸಮಾಜ ಒಡೆದು ಒಂದು ಸಮುದಾಯ ಓಲೈಕೆ ಮಾಡುವ ಪ್ರಯತ್ನವನ್ನು ಕೆಲವು ಶಕ್ತಿಗಳು ಮಾಡುತ್ತಲೇ ಬಂದಿವೆ. ಅದರಲ್ಲಿ ಎಡಪಂಥೀಯರು ಮತ್ತು ಇತರರೂ ಇದ್ದಾರೆ ಎಂದರು. ಮಹಾರಾಜರ ಅಧ್ಯಾಯ ತೆಗೆದಿದ್ದಾರು? ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ ಪಠ್ಯಪುಸ್ತಕ ಪರಿಷ್ಕರಣೆ ಸಮಯದಲ್ಲಿ ಉನ್ನಿಕೃಷ್ಣನ್, ಮೈಸೂರು ಮಹಾರಾಜರು, ಕೆಂಪೇಗೌಡರು, ಕುವೆಂಪು ಅವರ ವಿಷಯಗಳ ಅಧ್ಯಾಯ ತೆಗೆದಿದ್ದಾರೆ. ಇದಕ್ಕೆ ಕಾಂಗ್ರೆಸ್‌ನಲ್ಲಿ ಉತ್ತರ ಇಲ್ಲ. ಕಾಂಗ್ರೆಸ್‌ಗೆ ಟಿಪ್ಪು ಸುಲ್ತಾನ್ ತೆಗೆದಿದ್ದು ಅರಗಿಸಿಕೊಳ್ಳಲು ಆಗುತ್ತಿಲ್ಲ. ಅದಕ್ಕೆ ಈ ರೀತಿ ಅಪಪ್ರಚಾರ ನಡೆಸುತ್ತಿದ್ದಾರೆ ಎಂದರು.

ಗ್ರಂಥಾಲಯ: ನೋಂದಣಿ, ಸದಸ್ಯತ್ವ ಠೇವಣಿ ಶುಲ್ಕ ಪರಿಷ್ಕರಣೆ

ಮೈಸೂರು, ಜೂ.12– ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಯಲ್ಲಿನ ಜಿಲ್ಲಾ ಕೇಂದ್ರ ಗ್ರಂಥಾಲಯಗಳ ಅಧೀನ ಶಾಖಾ ಸೇವಾ ಕೇಂದ್ರ, ಅಲೆಮಾರಿ, ಕೊಳಚೆ ಪ್ರದೇಶ ಗ್ರಂಥಾಲಯಗಳಲ್ಲಿ ಪುಸ್ತಕ ಎರವಲು ಪಡೆಯಲು ಸದಸ್ಯತ್ವ ನೋಂದಣಿಗಾಗಿ ಪಡೆಯುವ ನೋಂದಣಿ ಅರ್ಜಿ ಶುಲ್ಕ ಹಾಗೂ ಸದಸ್ಯತ್ವ ಠೇವಣಿ ಶುಲ್ಕವನ್ನು ಪರಿಷ್ಕರಿಸಿ ಆದೇಶಿಸಲಾಗಿದೆ. ಒಂದು ಕಾರ್ಡ್‌ಗೆ 100 ರೂ. ಎರಡಕ್ಕೆ 150 ರೂ. ಮತ್ತು ಮೂರಕ್ಕೆ 200 ರೂ. ಹಾಗೂ ಸೇವಾ ಕೇಂದ್ರ ಅಲೆಮಾರಿ, ಕೊಳಚೆ ಪ್ರದೇಶ ಗ್ರಂಥಾಲಯಗಳಲ್ಲಿ 1 ಕಾರ್ಡಿಗೆ 20 ರೂ.ಗಳು, 2 ಕಾರ್ಡ್‌ಗೆ 30 ಮತ್ತು 3 ಕಾರ್ಡ್‌ಗೆ 40 ರೂ.ನಂತೆ ಪಾವತಿಸಿ ಪುಸ್ತಕಗಳನ್ನು ಎರವಲು ಪಡೆಯಲು ಕೋರಲಾಗಿದೆ.

ಮಂಡ್ಯ ಯುವಕನ ಮೇಲೆ ಹಲ್ಲೆ ಆರೋಪ

ಠಾಣೆಯಲ್ಲಿ ಕ್ಷಮೆ ಕೇಳಿ ಮುಚ್ಚಳಿಕೆ ಬರೆದುಕೊಟ್ಟ ನಟ ಜೈ ಜಗದೀಶ್



ಮಂಡ್ಯ: ಯುವಕನ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ದೂರು ದಾಖಲಾಗಿದ್ದ ಹಿನ್ನೆಲೆಯಲ್ಲಿ ಹಿರಿಯ ನಟ ಜೈ ಜಗದೀಶ್ ಅವರು ಇಂದು ನಾಗಮಂಗಲ ತಾಲೂಕಿನ ಬೆಳ್ಳೂರು ಪೊಲೀಸ್ ಠಾಣೆಗೆ ಹಾಜರಾಗಿ ಪೊಲೀಸರ ಮುಂದೆ ಹೇಳಿಕೆ ನೀಡಿದರು. ಅಲ್ಲದೆ, ಸಮಸ್ಯೆ ಬಗೆಹರಿಸಿಕೊಂಡಿರುವುದಾಗಿ ಇದೇ ಸಂದರ್ಭದಲ್ಲಿ ತಿಳಿಸಿದರು.

ರಾಜಿ ಸಂಧಾನ ಮೂಲಕ ಪ್ರಕರಣ ಇತ್ಯರ್ಥವಾಗಿದ್ದು, ಜೈ ಜಗದೀಶ್ ಅವರು ಕ್ಷಮೆ ಕೇಳಿ ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ.

ಈ ಬಗ್ಗೆ ಮಾತನಾಡಿರುವ ಜೈ ಜಗದೀಶ್, ಕಳೆದ ಭಾನುವಾರ ನನ್ನ ಮತ್ತು ಚಂದ್ರು ನಡುವೆ ಭಿನ್ನಾಭಿಪ್ರಾಯ ಉಂಟಾಗಿತ್ತು. ಈಗ ನಾವು ಠಾಣೆಯಲ್ಲಿ ಕೂತು ಬಗೆಹರಿಸಿಕೊಂಡಿದ್ದೇವೆ ಮತ್ತು ರಾಜಿಯಾಗಿದ್ದೇವೆ. ನಾವಿಬ್ಬರು ಈಗ ಸ್ನೇಹಿತರು. ಯಾವುದೇ ಗಲಾಟೆಯಾಗಿರಲಿಲ್ಲ, ಸಣ್ಣ ಭಿನ್ನಾಭಿಪ್ರಾಯ ಅಷ್ಟೇ ಎಂದು ಹೇಳಿದ್ದಾರೆ.

ನಡೆದಿದ್ದೇನು?: ಇದೇ 5ರಂದು ಈ ಘಟನೆ ನಡೆದಿತ್ತು. ಚಂದ್ರು ಅವರು ಬಸ್ಸಿನಿಂದ ಕೆಳಕ್ಕೆ ಇಳಿಯುತ್ತಿರುವ ಸಂದರ್ಭದಲ್ಲಿ ಹಿಂದಿನಿಂದ ಜೈಗದೀಶ್ ಅವರು ಕಾರನ್ನು ಬರುತ್ತಿದ್ದರು. ಪ್ರಯಾಣ ವೇಳೆ ಜೈ ಜಗದೀಶ್ ಕಾರಿನ ಮೇಲೆ ಜ್ಯೂಸ್ ಬಾಟೆಲ್ ಬಿದ್ದಿತ್ತು. ಬಸ್‌ನಲ್ಲಿದ್ದವರೇ ಬಾಟಲ್ ಎಸೆದಿದ್ದಾರೆ ಅಂದುಕೊಂಡಿದ್ದರು. ಇದೇ ಸಮಯಕ್ಕೆ ಚಂದ್ರು ಬಸ್‌ನಿಂದ ಕೆಳಗಿಳಿದಾಗ ಆತನೇ ಬಾಟೆಲ್ ಎಸೆದಿರಬೇಕೆಂದು ಭಾವಿಸಿ, ಬಸ್ಸಿನಿಂದ ಯಾಕೆ ಬಾಟಲಿ ಎಸೆಯುತ್ತಿಯಾ ಎಂದು ಪ್ರಶ್ನಿಸಿ ಕೆಟ್ಟ ಶಬ್ದಗಳಿಂದ ಬೈದದ್ದೂ ಅಲ್ಲದೇ, ಹಲ್ಲೆ ನಡೆಸಿದ್ದಾರೆ ಎಂದು ಬೆಳ್ಳೂರು ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು. ಈ ಸಂಬಂಧ ಇಂದು ಠಾಣೆಗೆ ಹಾಜರಾಗಿ ಹೇಳಿಕೆ ನೀಡಿ ಸಮಸ್ಯೆ ಬಗೆಹರಿಸಿಕೊಂಡಿದ್ದಾರೆ.

ಬಿಜೆಪಿಯಿಂದ ಉಚ್ಚಾಟನೆಯಾದ ಜಿಂದಾಲ್‌ಗೂ ನಮಗೂ ಸಂಬಂಧವಿಲ್ಲ

ಜಿಂದಾಲ್ ಸಮೂಹ ಸಂಸ್ಥೆ ಸ್ಪಷ್ಟನೆ

ನವದೆಹಲಿ: ಪ್ರವಾದಿ ಮಹಮ್ಮದರ ಅವಹೇಳನಕ್ಕೆ ಸಂಬಂಧಿಸಿದಂತೆ ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ನವೀನ್ ಕುಮಾರ್ ಜಿಂದಾಲ್ ಅವರಿಗೂ ಜಿಂದಾಲ್ ಸಂಸ್ಥೆಯ ಅಧ್ಯಕ್ಷ ನವೀನ್ ಜಿಂದಾಲ್ ಅವರಿಗೂ ಯಾವುದೇ ಸಂಬಂಧವಿಲ್ಲ ಎಂದು ಜಿಂದಾಲ್ ಸಮೂಹ ಸಂಸ್ಥೆ ಭಾನುವಾರ ಸ್ಪಷ್ಟಪಡಿಸಿದೆ.

ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿರುವ ಜಿಂದಾಲ್ ಸಂಸ್ಥೆ, ನವೀನ್ ಕುಮಾರ್ ಜಿಂದಾಲ್ ಹೆಸರಿನ ವ್ಯಕ್ತಿಗೆ ಸಂಬಂಧಿಸಿದ ಇತ್ತೀಚಿನ ಬೆಳವಣಿಗೆಗಳಿಗೂ, ನಮ್ಮ ಸಂಸ್ಥೆಯ ಅಧ್ಯಕ್ಷರಾದ ನವೀನ್ ಜಿಂದಾಲ್‌ಗೂ ಯಾವುದೇ ರೀತಿಯಲ್ಲೂ ಸಂಬಂಧಿಸಿಲ್ಲ. ವರದಿ ಮಾಡುವಾಗ ನಮ್ಮ ಅಧ್ಯಕ್ಷರ ಚಿತ್ರಗಳನ್ನು ತಪ್ಪಾಗಿ ಬಳಸದಂತೆ ನಾವು ಮಾಧ್ಯಮಗಳಿಗೆ ಮನವಿ ಮಾಡುತ್ತೇವೆ. ಹಾಗೆ ಬಳಸಿದರೆ ಅದು ಗುರುತು ಪತ್ತೆಯಲ್ಲಿನ ಪ್ರಮಾದವಾಗಲಿದೆ ಎಂದು ತಿಳಿಸಿದೆ.ಪ್ರವಾದಿ ಮಹಮ್ಮದ್ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದ್ದ ದೆಹಲಿ ಬಿಜೆಪಿಯ ಸಾಮಾಜಿಕ ಮಾಧ್ಯಮ ವಿಭಾಗದ ಮುಖ್ಯಸ್ಥ ನವೀನ್ ಕುಮಾರ್ ಜಿಂದಾಲ್ ಅವರನ್ನು ಬಿಜೆಪಿ ಉಚ್ಚಾಟನೆ ಮಾಡಿತ್ತು. ಪ್ರವಾದಿ ಅವಹೇಳನ ಖಂಡಿಸಿ ಅರಬ್ ರಾಷ್ಟ್ರಗಳಿಂದ ಮತ್ತು ಟ್ವಿಟರ್‌ನಲ್ಲಿ ತೀವ್ರ ಆಕ್ಷೇಪ ವ್ಯಕ್ತವಾದ ಬೆನ್ನಲ್ಲೇ ಎಚ್ಚೆತ್ತುಕೊಂಡ ಬಿಜೆಪಿ ಈ ಕ್ರಮ ಕೈಗೊಂಡಿತ್ತು.

ನೂಪುರ್ ಶರ್ಮಾಗೆ ಮುಂಬೈ ಪೊಲೀಸರ ಸಮನ್ಸ್



ಮುಂಬೈ: ಪ್ರವಾದಿ ಮೊಹ್ಮದರ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದ, ನೂಪುರ್ ಶರ್ಮಾ ಅವರಿಗೆ ಥಾಣೆ ಜಿಲ್ಲೆಯ ಭಿವಂಡಿ ನಗರ ಪೊಲೀಸರು ನಾಳೆ (ಜೂನ್ 13) ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದ್ದಾರೆ. ಈ ಸಂಬಂಧ ನೂಪುರ್ ಶರ್ಮಾ ಅವರ ವಕೀಲರು ಸಮನ್ಸ್‌ಗೆ ಪ್ರತಿಕ್ರಿಯಿಸಿ, ವಿಚಾರಣೆಗೆ ಹಾಜರಾಗಲು ಇನ್ನೂ ಕೆಲವು ದಿನಗಳ ಕಾಲಾವಕಾಶ ನೀಡವಂತೆ ಪೊಲೀಸರಿಗೆ ಮೇಲ್ ಕಳುಹಿಸಿದ್ದಾರೆ.

ನಾಳೆ ಸುತ್ತೂರು ಮಠದಲ್ಲಿ ಬೆಳದಿಂದಳ ಸಂಗೀತ



ಮೈಸೂರು, ಜೂ.12– ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಬೆಳದಿಂಗಳ ಸಂಗೀತ–243ರ ಅಂಗವಾಗಿ ಜೂ.14ರಂದು ಸಂಜೆ 6ಕ್ಕೆ ಸುತ್ತೂರು ಶ್ರೀಗಳ ಸಾನಿಧ್ಯದಲ್ಲಿ ವಿದುಷಿ ಅಶ್ವಿನಿ ಕೋಳಿಕ್ಕಜೆ ಹಾಗೂ ವಿದುಷಿ ಡಾ.ಮೇಧಾಭಟ್ ದ್ವಂದ್ವ ಗಾಯನ ಪ್ರಸ್ತುತಪಡಿಸಲಿದ್ದಾರೆ.

ಕಾಸರಗೋಡಿನ ಬಾಲಸುಬ್ರಹ್ಮಣ್ಯ ಭಟ್ ಹಾಗೂ ಶುಭಾ ದಂಪತಿ ಪುತ್ರಿ ಅಶ್ವಿನಿ ಕೋಳಿಕ್ಕಜೆ, ಕರ್ನಾಟಕ ಸಂಗೀತ ಶಿಕ್ಷಣವನ್ನು ತಂದೆಯವರಿಂದಲೇ ಪಡೆದು ಕೇರಳ ಹಾಗೂ ಕರ್ನಾಟಕದ ಹಲವು ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿದ್ದಾರೆ. 2 ಬಾರಿ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದು, ಮೈಸೂರಿನ ವಿದುಷಿ ಕೋವಿಲಡಿ ಆರ್.ಕಲಾ ಅವರ ಬಳಿ ಅಧ್ಯಯನ ಮುಂದುವರೆಸಿದ್ದಾರೆ. ಇವರು ಚೆನ್ನೈನ ಶಂಕರ ವಾಹಿನಿಯ ಶಂಕರ ಸೂಪರ್ ಸಿಂಗರ್ ಸ್ಪರ್ಧೆಯ ಪ್ರಶಸ್ತಿ ಪುರಸ್ಕೃತರು.

ವಿದುಷಿ ಡಾ.ಮೇಧಾಭಟ್, ದಕ್ಷಿಣ ಕನ್ನಡ ಜಿಲ್ಲೆ ಉಜಿರೆಯ ಡಾ.ಬಾಲಕೃಷ್ಣ ಭಟ್ ಹಾಗೂ ಬಾರತಿ ದಂಪತಿ ಪುತ್ರಿ. ಸಂಗೀತದ ಪ್ರಾರಂಭಿಕ ಶಿಕ್ಷಣ ವಿದುಷಿ ರಾಜರಾಜೇಶ್ವರಿ ಭಟ್, ನಂತರ ವಿದುಷಿ ಅನಸೂಯ ದೇವಸ್ಥಳ, ವಿದುಷಿ ತನ್ಮಯಿ ಕೃಷ್ಣಮೂರ್ತಿ ಅವರ ಬಳಿ ಅಭ್ಯಾಸ ಮಾಡಿದ್ದು, ಪ್ರಸ್ತುತ ವಿದುಷಿ ಕೋವಿಲಡಿ ಆರ್.ಕಲಾ ಅವರಲ್ಲಿ ಸಂಗೀತಾಭ್ಯಾಸ ಮುಂದುವರೆಸಿದ್ದಾರೆ. ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಎಂಬಿಬಿಎಸ್ ಪದವಿ ಪೂರೈಸಿದ್ದಾರೆ.

ವಾದ್ಯ ಸಹಕಾರ: ಸಿಫಾನ್ ವಾರ್ಷಿಕ ಸಂಗೀತೋತ್ಸವದಲ್ಲಿ 11ನೇ ವಯಸ್ಸಿನಲ್ಲೇ ಸೋಲೋ ವಯೊಲಿನ್ ವಾದನದ ಮೂಲಕ ಪ್ರತಿಭೆ ಅನಾವರಣಗೊಳಿಸಿದ ವಿದ್ವಾನ್ ವೇದಜ್ಞ ನರಸಿಂಹ ಅವರು 'ವಯೊಲಿನ್', ಆಕಾಶವಾಣಿ 'ಎ' ಶ್ರೇಣಿ ಕಲಾವಿದ ವಿದ್ವಾನ್ ಸಾಯಿಶಿವ ಅವರು 'ಮೃದಂಗ' ಹಾಗೂ 'ಅಸಾಧಾರಣ ಪ್ರತಿಭಾ ಪುರಸ್ಕಾರ'ಗೆ ಬಾಜನರಾದ ವಿದ್ವಾನ್ ಶಮಿತ್ ಎಸ್.ಗೌಡ ಅವರು 'ಘಟಂ' ವಾದನ ಸಹಕಾರ ನೀಡಲಿದ್ದಾರೆ.

ರಾಜ್ಯದಲ್ಲಿ ಡೆಂಗ್ಯೂ ಪ್ರಕರಣಗಳ ಏರಿಕೆ



ಬೆಂಗಳೂರು,ಜೂ.12– ರಾಜ್ಯದಲ್ಲಿ ಕೊರೊನಾ ಸೋಂಕಿತರ ಜೊತೆಗೆ ಡೆಂಗ್ಯೂ ಪ್ರಕರಣಗಳು ಏರಿಕೆಯಾಗುತ್ತಿದ್ದು, ಆರೋಗ್ಯ ಇಲಾಖೆ ನೀಡಿರುವ ಜ.1 ರಿಂದ ಜೂ.10ರವರೆಗಿನ ಅಂಕಿ–ಅಂಶಗಳ ಪ್ರಕಾರ ಕಳೆದ ವರ್ಷಕ್ಕಿಂತ ಶೇ.50ರಷ್ಟು ಹೆಚ್ಚಿದೆ.

ಬೆಂಗಳೂರು, ಮೈಸೂರು, ಉಡುಪಿ, ಚಿತ್ರದುರ್ಗ, ಕೊಪ್ಪಳ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಮೇ ತಿಂಗಳಿನಿಂದ ಡೆಂಗ್ಯೂ ಪ್ರಕರಣಗಳು ಗಣನೀಯವಾಗಿ ಹೆಚ್ಚಾಗುತ್ತಿವೆ. ಪ್ರಸಕ್ತ ವರ್ಷದ ಆರಂಭದಿಂದ ಜೂನ್ 10ರವರೆಗೆ ರಾಜ್ಯದಲ್ಲಿ 1,800ಕ್ಕೂ ಹೆಚ್ಚು ಡೆಂಗ್ಯೂ ಪ್ರಕರಣಗಳು ವರದಿಯಾಗಿದ್ದು, ಸದ್ಯ ಒಂದೂ ಸಾವು ಸಂಭವಿಸಿಲ್ಲ. ಡೆಂಗ್ಯೂ ಹೆಚ್ಚಿರುವ ಕಾರಣ ಕಟ್ಟುನಿಟ್ಟಿನ ಕ್ರಮಕ್ಕೆ ಸರ್ಕಾರ ಮುಂದಾಗಿದೆ. ಮುಂಗಾರು ಋತುವಿನಲ್ಲಿ ಡೆಂಗ್ಯೂ, ಚಿಕೂನ್ ಗುನ್ಯಾ ಮತ್ತು ಝಿಕಾ ವೈರಸ್ ರೋಗಕ್ಕೆ ಕಾರಣವಾಗುವ ಈಡಿಸ್ ಸೊಳ್ಳೆ ಸಂತಾನೋತ್ಪತ್ತಿ ತಗ್ಗಿಸುವ ನಿಟ್ಟಿನಲ್ಲಿ ವಹಿಸಬೇಕಾದ ಕ್ರಮಗಳ ಬಗ್ಗೆ ಆಶಾ ಕಾರ್ಯಕರ್ತೆಯರು ಮತ್ತು ಆರೋಗ್ಯ ಸಹಾಯಕರಿಂದ ಜನರಲ್ಲಿ ಪ್ರತಿನಿತ್ಯ ಜಾಗೃತಿ ಮೂಡಿಸುವಂತೆ ಸೂಚನೆ ನೀಡಿದೆ.

ಮುಂಗಾರು ಸಮಯದಲ್ಲಿ ಈಡಿಸ್ ಸೊಳ್ಳೆ ನಿಂತ ಶುದ್ಧ ನೀರಿನಲ್ಲಿ ಮೊಟ್ಟೆ ಇಟ್ಟು ಸಂತಾನೋತ್ಪತ್ತಿ ಆರಂಭಿಸುತ್ತದೆ. ಹಗಲಿನಲ್ಲಿ ಕಚ್ಚುವ ಈ ಸೊಳ್ಳೆ ಡೆಂಗ್ಯೂ ಜ್ವರಕ್ಕೆ ಕಾರಣವಾಗಿದೆ. ಇದು ಸಾಮಾನ್ಯ ಜ್ವರವಾದರೂ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗುವುದು, ರಕ್ತ ಸ್ರಾವವಾಗಿ ರೋಗಿ ಗಂಭೀರ ಹಂತಕ್ಕೆ ತಲುಪುವ ಸಾಧ್ಯತೆಗಳಿರುತ್ತವೆ. ಕೆಲವೊಮ್ಮೆ ರೋಗಿಗೆ ರಕ್ತ(ಪ್ಲೇಟ್‌ಲೆಟ್ಸ್) ನೀಡುವುದು ಅನಿವಾರ್ಯತೆಯೂ ಉಂಟಾಗುತ್ತದೆ.

ಡೆಂಘಿ ಜ್ವರದ ಲಕ್ಷಣಗಳು: ಜ್ವರ, ತಲೆನೋವು, ಸುಸ್ತು, ಶೀತ, ಗಂಟಲು ನೋವು, ವಾಂತಿ, ಹೊಟ್ಟೆನೋವು, ಮೈಕೈ ನೋವು, ಮೈಮೇಲೆ ಅಲರ್ಜಿ ರೀತಿಯಲ್ಲಿ ಗುಳ್ಳೆಗಳು ಏಳುವುದು ಡೆಂಗ್ಯೂ ಜ್ವರದ ಲಕ್ಷಣಗಳಾಗಿವೆ.

ಎಚ್ಚರಿಕೆ ಕ್ರಮ: ಡೆಂಗ್ಯೂ ತಡೆಗಟ್ಟಲು ಮೊದಲು ಸೊಳ್ಳೆಗಳನ್ನು ನಿಯಂತ್ರಿಸುವ ಪ್ರಯತ್ನ ಬಹಳ ಮುಖ್ಯ. ಜೊತೆಗೆ ಹಗಲಿನಲ್ಲಿ ಸೊಳ್ಳೆ ಕಚ್ಚದಂತೆ ಎಚ್ಚರ ವಹಿಸಬೇಕು. ಶುದ್ಧ ಹಾಗೂ ಕುದಿಸಿ ಆರಿಸಿದ ನೀರನ್ನು ಕುಡಿಯುವುದು ಒಳ್ಳೆಯದು. ನೀರು ಶೇಖರಣಾ ತೊಟ್ಟಿ, ಟ್ಯಾಂಕ್‌ಗಳ ಮುಚ್ಚಳವನ್ನು ಭದ್ರವಾಗಿ ಮುಚ್ಚಿಡಬೇಕು. ಪಾತ್ರೆ ಹಾಗೂ ಬಿಂದಿಗೆಗಳಲ್ಲಿ ಹೆಚ್ಚು ದಿನ ನೀರು ಸಂಗ್ರಹಿಸಿಡಬಾರದು. ಮನೆಯ ಸುತ್ತಮುತ್ತ ಹಾಗೂ ತಾರಸಿಯಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ನೀರು ನಿಲ್ಲಬಹುದಾದ ತೆಂಗಿನ ಚಿಪ್ಪು, ಟಯರ್‌ನಂತಹ ತ್ಯಾಜ್ಯವನ್ನು ಮನೆಯ ಬಳಿ ಇಟ್ಟುಕೊಳ್ಳಬಾರದು. ನೀರು ಸಂಗ್ರಹಿಸುವ ಸ್ಥಳವನ್ನು ಎರಡ್ಮೂರು ದಿನಗಳಿಗೊಮ್ಮೆ ಸ್ವಚ್ಛಗೊಳಿಸಬೇಕು. ಸೊಳ್ಳೆಗಳು ಮನೆಯೊಳಗೆ ಬರದಂತೆ ಮುನ್ನೆಚ್ಚರಿಕೆ ವಹಿಸಬೇಕು. ಡೆಂಗ್ಯೂ ಜ್ವರಕ್ಕೆ ಲಸಿಕೆ ಲಭ್ಯವಿಲ್ಲ. ಹಾಗಾಗಿ ಜ್ವರ ಬಾಧಿಸದಂತೆ ಎಚ್ಚರಿಕೆ ವಹಿಸಬೇಕು. 2–3 ದಿನ ನಿರಂತರವಾಗಿ ಜ್ವರವಿದ್ದರೆ ನಿರ್ಲಕ್ಷ್ಯ ಮಾಡದೆ ವೈದ್ಯರ ಬಳಿ ಚಿಕಿತ್ಸೆ ಪಡೆಯಬೇಕು. ಡೆಂಗ್ಯೂ ಬಾಧಿಸಿದವರು ಪಪ್ಪಾಯಿ ಹಾಗೂ ಕಿವಿ ಹಣ್ಣು ಪಪ್ಪಾಯಿ ಎಲೆಯ ರಸ ಸೇವಿಸುವುದು ಒಳ್ಳೆಯದು.



ಮೈಸೂರಿನ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ವತಿಯಿಂದ ಟೈಲರಿಂಗ್ ತರಬೇತಿ ಪಡೆದವರಿಗೆ ಅರ್ಹತಾ ಪತ್ರ ವಿತರಿಸಲಾಯಿತು. ಈ ವೇಳೆ ಜನ ಶಿಕ್ಷಣ ಸಂಸ್ಥೆ ನಿರ್ದೇಶಕ ರಮೇಶ್, ಜೆಎಸ್‌ಎಸ್ ಶಿಶುನಾಳ ಶರೀಫ ಪ್ರೌಢಶಾಲೆ ಮುಖ್ಯಶಿಕ್ಷಕ ರಾಜು, ಕಾರ್ಯಕ್ರಮ ಸಹಾಯಕಿ ಸುಮಾ, ವೃತ್ತಿ ಬೋಧಕಿ ಕೌಸರ್ ಜಮ್ಮು ಇದ್ದರು.

ಮಡಿಕೇರಿ ಕೊಡವ ಸಮಾಜಕ್ಕೆ ಮಂಡುವಂಡ ಪಿ.ಮುತ್ತಪ್ಪ ಅಧ್ಯಕ್ಷರಾಗಿ ಆಯ್ಕೆ



ಮಡಿಕೇರಿ,ಜೂ.12– ಮಡಿಕೇರಿ ಕೊಡವ ಸಮಾಜದ ನೂತನ ಆಡಳಿತ ಮಂಡಳಿ ರಚನೆಗೊಂಡಿದ್ದು, ನೂತನ ಅಧ್ಯಕ್ಷರಾಗಿ ಹಿರಿಯ ಸಹಕಾರಿ ಮಂಡುವಂಡ ಪಿ. ಮುತ್ತಪ್ಪ ಆಯ್ಕೆಯಾಗಿದ್ದಾರೆ. ಸಮಾಜದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ 751 ಮತಗಳನ್ನು ಪಡೆದು ಮುತ್ತಪ್ಪ ಜಯಗಳಿಸಿದರು.

ಎರಡು ಗುಂಪುಗಳಲ್ಲಿ ಗುರುತಿಸಿಕೊಂಡ ಹಲವರ ಸ್ಪರ್ಧೆ ಹಾಗೂ ವೈಯಕ್ತಿಕವಾಗಿಯೂ ಕೆಲವರು ಸ್ಪರ್ಧಾ ಕಣದಲ್ಲಿದ್ದರಿಂದ ಮುಂಜಾನೆಯಿಂದಲೇ ಬಿರುಸಿನ ಮತದಾನ ನಡೆಯಿತು.

ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಖಜಾಂಚಿ ಹಾಗೂ 8 ಪುರುಷ ಹಾಗೂ ಮೂವರು ಮಹಿಳಾ ನಿರ್ದೇಶಕ ಸ್ಥಾನಕ್ಕೆ ಚುನಾವಣೆ ಅನಿವಾರ್ಯವಾಗಿತ್ತು. ಎಲ್ಲಾ ಕ್ಷೇತ್ರಗಳಲ್ಲೂ ಹಲವರು ಸ್ಪರ್ಧೆಯಲ್ಲಿದ್ದ ಕಾರಣ ಕೌತುಕ ಸೃಷ್ಟಿಸಿತ್ತು.

ಉಪಾಧ್ಯಕ್ಷರಾಗಿ ನಂದಿನೆರವಂಡ ಚೀಯಣ್ಣ(926 ಮತ), ಕಾರ್ಯದರ್ಶಿಯಾಗಿ ಕನ್ನಂಡ ಸಂಪತ್(857 ಮತ) ಆಯ್ಕೆಯಾಗಿದ್ದಾರೆ. ಖಜಾಂಚಿಯಾಗಿ ನಂದಿನೆರವಂಡ ದಿನೇಶ್ ಆಯ್ಕೆಯಾಗಿದ್ದಾರೆ. ಈ ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ಚಂಬಂಡ ಸುರೇಶ್ ಮುತ್ತಪ್ಪ ಕೊನೆ ಕ್ಷಣದಲ್ಲಿ ನಿವೃತ್ತಿ ಘೋಷಿಸಿ ದಿನೇಶ್ ಅವರಿಗೇ ಬೆಂಬಲ ಸೂಚಿಸಿದ್ದರಿಂದ ದಿನೇಶ್‌ಗೆ ಸ್ಥಾನ ಖಚಿತವಾಗಿತ್ತು.

ಪುರುಷರ ವಿಭಾಗದ 8 ಮಂದಿ ನಿರ್ದೇಶಕ ಸ್ಥಾನಕ್ಕೆ 14 ಮಂದಿ ಕಣದಲ್ಲಿದ್ದು, ಇವರಲ್ಲಿ ಶಾಂತೆಯಂಡ ವಿಶಾಲ್ ಕಾರ್ಯಪ್ಪ(804 ಮತ), ಮಂಡೀರ ಸದಾ ಮುದ್ದಪ್ಪ(715), ಕೇಕಡ ಎಜು ದೇವಯ್ಯ(701) ಕಾಳಚಂಡ ಎಂ.ಅಪ್ಪಣ್ಣ (698), ಮೂವೇರ ಜಯರಾಂ(677), ಚೊಟ್ಟೆಯಂಡ ಎ. ಸಂಜು(675), ಪುತ್ತರಿರ ಕರುಣ್ ಕಾಳಯ್ಯ(667) ಹಾಗೂ ನಂದಿನೆರವಂಡ ರವಿ ಬಸಪ್ಪ(600) ಜಯಶೀಲರಾಗಿದ್ದಾರೆ.

ಮಹಿಳಾ ವಿಭಾಗದ ಮೂವರು ನಿರ್ದೇಶಕರುಗಳಾಗಿ ಕನ್ನಂಡ ಕವಿತ ಕಾವೇರಮ್ಮ (936 ಮತ), ಬೊಪ್ಪಂಡ ಸರಳ ಕಡುಂಬಯ್ಯ(ತಾರ, 648 ಮತ) ಹಾಗೂ ಕಾಂಡೇರ ಲಲ್ಲು ಕುಟ್ಟಪ್ಪ(611) ಚುನಾಯಿತರಾಗಿದ್ದಾರೆ. ಐದು ಮಂದಿ ಕಣದಲ್ಲಿದ್ದರು. ಚುನಾವಣಾಧಿಕಾರಿಯಾಗಿ ಚೆಕ್ಕೇರ ಎಂ.ಪ್ರಮೋದ್ ಕಾರ್ಯನಿರ್ವಹಿಸಿದರು. ಇವರೊಂದಿಗೆ ಜನರಲ್ ತಿಮ್ಮಯ್ಯ ಶಾಲಾ ಶಿಕ್ಷಕರು ಹಾಗೂ ಸಿಬ್ಬಂದಿ ಸಹಕರಿಸಿದರು.

